ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016

(2016ರ ಅಧಿನಿಯಮ ಸಂಖ್ಯೆ 49)

[ನವೆಂಬರ್ 11, 2021 ರಂದು ಇದ್ದಂತೆ]

# THE RIGHTS OF PERSONS WITH DISABILITIES ACT, 2016

**[Act No. 49 OF 2016]**

**[As on 11th November 2021]**

# ಮುನ್ನುಡಿ

ದಿ ರೈಟ್ಸ್ ಆಫ್ ಪರ್ಸನ್ಸ್ ವಿತ್ ಡಿಸೆಬಿಲಿಟಿಸ್ ಆ್ಯಕ್ಟ್, 2016 (ಆ್ಯಕ್ಟ್ ನಂ.49 ಆಫ್ 2016)– ಇದಕ್ಕೆ ದಿನಾಂಕ: 17.08.2021 ರಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳ ಅನುಮೋದನೆ ದೊರೆತಿದ್ದು, ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು ದಿನಾಂಕ:11–11–2021 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 51ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 104 ರಿಂದ 156 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಡಾ. ರೀಟಾ ವಸಿಷ್ಠ
ಕಾರ್ಯದರ್ಶಿ
ಭಾರತ ಸರ್ಕಾರ

# PREFACE

This edition of THE RIGHTS OF PERSONS WITH DISABILITIES ACT, 2016 (ACT NO. 49 OF 2016) which has been approved by His Excellency the President of India on 17.08.2021 contains the authoritative text of that Act in Kannada and it was published in the Gazette of India Extraordinary, Part IX, Section 1, No.1, Vol.51, dated 11-11-2021 from pages 104 to 156.

This Kannada Text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

Dr. Reeta Vasishta
Secretary
Government of India

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016
## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು:


### ಅಧ್ಯಾಯ I
### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ II
### ಹಕ್ಕುಗಳು ಮತ್ತು ಅರ್ಹತೆಗಳು

3. ಸಮಾನತೆ ಇರಬೇಕು ಮತ್ತು ತಾರತಮ್ಯ ತೋರಕೂಡದು
4. ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು
5. ಸಾಮುದಾಯಿಕ ಜೀವನ
6. ಕ್ರೌರ್ಯ ಮತ್ತು ಅಮಾನುಷ ವರ್ತನೆಗಳಿಗೆ ಈಡಾಗದಂತೆ ರಕ್ಷಣೆ
7. ದುರುಪಯೋಗ, ಹಿಂಸೆ ಮತ್ತು ಶೋಷಣೆಯಾಗದಂತೆ ರಕ್ಷಣೆ
8. ರಕ್ಷಣೆ ಮತ್ತು ಸುರಕ್ಷತೆ
9. ಮನೆ ಮತ್ತು ಕುಟುಂಬ
10. ಸಂತಾನೋತ್ಪತ್ತಿ ಹಕ್ಕುಗಳು
11. ಮತದಾನವನ್ನು ಮಾಡಲು ಸುಲಭ ಸಾಧ್ಯಗೊಳಿಸುವುದು
12. ನ್ಯಾಯಕ್ಕೆ ಮುಕ್ತ ಅವಕಾಶ
13. ಕಾನೂನು ಪ್ರಕಾರ ಅರ್ಹತೆ
14. ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಿಂದ ಬೆಂಬಲಕ್ಕೆ ಅವಕಾಶ
15. ಬೆಂಬಲ ನೀಡಲು ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು

### ಅಧ್ಯಾಯ III
### ಶಿಕ್ಷಣ

16. ಶಿಕ್ಷಣ ಸಂಸ್ಥೆಗಳ ಕರ್ತವ್ಯ
17. ಸಮ್ಮಿಳಿತ ಶಿಕ್ಷಣಕ್ಕೆ ಉತ್ತೇಜಿಸಲು ಮತ್ತು ಅದಕ್ಕೆ ಅನುಕೂಲ ಕಲ್ಪಿಸಲು ನಿರ್ದಿಷ್ಟ ಕ್ರಮಗಳು

18. ವಯಸ್ಕರ ಶಿಕ್ಷಣ

**ಅಧ್ಯಾಯ IV**

**ಕೌಶಲ್ಯ ಸಂವರ್ಧನೆ ಮತ್ತು ಉದ್ಯೋಗ**

19 ವೃತ್ತಿ ತರಬೇತಿ ಮತ್ತು ಸ್ವಯಂ ಉದ್ಯೋಗ

20 ಉದ್ಯೋಗದಲ್ಲಿ ತಾರತಮ್ಯ ಮಾಡಕೂಡದು

21 ಸಮಾನ ಅವಕಾಶ ಕಾರ್ಯನೀತಿ

22 ದಾಖಲೆಗಳ ನಿರ್ವಹಣೆ

23 ಕುಂದುಕೊರತೆಗಳ ನಿವಾರಣಾಧಿಕಾರಿಯ ನೇಮಕ

**ಅಧ್ಯಾಯ V**

**ಸಾಮಾಜಿಕ ಭದ್ರತೆ, ಆರೋಗ್ಯ, ಪುನರ್ ವ್ಯವಸ್ಥೆ ಮತ್ತು ಮನರಂಜನೆ**

24 ಸಾಮಾಜಿಕ ಭದ್ರತೆ

25 ಆರೋಗ್ಯ ಪಾಲನೆ

26 ವಿಮಾ ಯೋಜನೆಗಳು

27 ಪುನರ್ ವ್ಯವಸ್ಥೆ

28 ಸಂಶೋಧನೆ ಮತ್ತು ಅಭಿವೃದ್ಧಿ

29 ಸಂಸ್ಕೃತಿ ಮತ್ತು ಮನರಂಜನೆ

30 ಕ್ರೀಡಾ ಚಟುವಟಿಕೆಗಳು

**ಅಧ್ಯಾಯ VI**

**ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ವಿಶೇಷ ಉಪಬಂಧಗಳು**

31 ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಗಳು ಇರುವ ಮಕ್ಕಳಿಗೆ ಉಚಿತ ಶಿಕ್ಷಣ

32 ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ

33 ಮೀಸಲಾತಿಗಾಗಿ ಹುದ್ದೆಗಳನ್ನು ಗುರುತಿಸುವುದು

34 ಮೀಸಲಾತಿ

35 ಖಾಸಗಿ ವಲಯದಲ್ಲಿನ ಉದ್ಯೋಗದಾತರಿಗೆ ಪ್ರೋತ್ಸಾಹಕಗಳು

36 ವಿಶೇಷ ಉದ್ಯೋಗ ವಿನಿಮಯ ಕೇಂದ್ರ

37 ವಿಶೇಷ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು

## ಅಧ್ಯಾಯ VII

### ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು


38. ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು


## ಅಧ್ಯಾಯ VIII

### ಸಮುಚಿತ ಸರ್ಕಾರಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು


39. ಜಾಗೃತಿ ಶಿಬಿರಗಳು

40. ಸುಲಭ ಲಭ್ಯತೆ

41. ಸುಲಭ ಸಾರಿಗೆ ಸಂಪರ್ಕ ವ್ಯವಸ್ಥೆ

42. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಪಡೆದುಕೊಳ್ಳಲು ಅವಕಾಶ

43. ಗ್ರಾಹಕ ಸರಕುಗಳು

44. ಸುಗಮ ಪ್ರವೇಶದ ನಿಬಂಧನೆಗಳ ಕಡ್ಡಾಯ ಪಾಲನೆ

45. ಈಗ ಇರುವ ಮೂಲ ಸೌಲಭ್ಯಗಳು ಮತ್ತು ಆವರಣಗಳು ಸುಲಭ ಲಭ್ಯವಾಗುವಂತೆ ಮಾಡಲು ಹಾಗೂ ಈ ಉದ್ದೇಶಕ್ಕಾಗಿ ಕ್ರಮ ಕೈಗೊಳ್ಳಲು ಕಾಲಮಿತಿ

46. ಸುಲಭ ಲಭ್ಯ ಸೇವೆಯನ್ನು ಒದಗಿಸುವವರಿಗೆ ಕಾಲಮಿತಿ

47. ಮಾನವ ಸಂಪನ್ಮೂಲ ಅಭಿವೃದ್ಧಿ

48. ಸಾಮಾಜಿಕ ಪರಿಶೋಧನೆ


## ಅಧ್ಯಾಯ IX

### ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಗಳ ನೋಂದಣಿ ಮತ್ತು ಅಂಥ ಸಂಸ್ಥೆಗಳಿಗೆ ಅನುದಾನಗಳು


49. ಸಕ್ಷಮ ಪ್ರಾಧಿಕಾರ

50. ನೋಂದಣಿ

51. ನೋಂದಣಿ ಪ್ರಮಾಣಪತ್ರದ ಅರ್ಜಿ ಮತ್ತು ನೀಡಿಕೆ

52. ನೋಂದಣಿಯ ರದ್ಧತಿ

53. ಅಪೀಲು

54. ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇವುಗಳ ನಿರ್ವಹಣೆಯಲ್ಲಿರುವ ಸಂಸ್ಥೆಗಳಿಗೆ ಅಧಿನಿಯಮವು ಅನ್ವಯವಾಗದಿರುವುದು

55. ನೋಂದಾಯಿತ ಸಂಸ್ಥೆಗಳಿಗೆ ನೆರವು

## ಅಧ್ಯಾಯ X

## ನಿರ್ದಿಷ್ಟ ಅಂಗವಿಕಲತೆಗಳ ಪ್ರಮಾಣೀಕರಣ

56. ನಿರ್ದಿಷ್ಟ ಅಂಗವಿಕಲತೆಗಳನ್ನು ನಿರ್ಧರಿಸುವುದಕ್ಕಾಗಿ ಮಾರ್ಗಸೂಚಿಗಳು

57. ಪ್ರಮಾಣೀಕರಿಸುವ ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು

58. ಪ್ರಮಾಣೀಕರಣದ ಕಾರ್ಯವಿಧಾನ

59. ಪ್ರಮಾಣೀಕರಣ ಪ್ರಾಧಿಕಾರದ ನಿರ್ಣಯದ ವಿರುದ್ಧ ಅಪೀಲು

## ಅಧ್ಯಾಯ XI

## ಅಂಗವಿಕಲತೆ ಕುರಿತ ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದ ಸಮಿತಿ

60. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ರಚನೆ

61. ಸದಸ್ಯರುಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು

62. ಅನರ್ಹತೆಗಳು

63. ಸದಸ್ಯರುಗಳಿಂದುಂಟಾದ ಖಾಲಿ ಸ್ಥಾನಗಳು

64. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಸಭೆಗಳು

65. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಪ್ರಕಾರ್ಯಗಳು

66. ಅಂಗವಿಕಲತೆ ಕುರಿತ ರಾಜ್ಯ ಸಲಹಾ ಮಂಡಲಿ

67. ಸದಸ್ಯರ ಸೇವಾ ಅವಧಿ ಮತ್ತು ಷರತ್ತುಗಳು

68. ಅನರ್ಹತೆಗಳು

69. ಸ್ಥಾನಗಳ ಖಾಲಿಯಾಗುವಿಕೆ

70. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಸಭೆಗಳು

71. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಪ್ರಕಾರ್ಯಗಳು

72. ಜಿಲ್ಲಾ ಮಟ್ಟದ ಅಂಗವಿಕಲ ಸಮಿತಿ

73. ಖಾಲಿ ಸ್ಥಾನಗಳು ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು

## ಅಧ್ಯಾಯ XII

## ಅಂಗವಿಕಲ ವ್ಯಕ್ತಿಗಳ ಚೀಫ್ ಕಮಿಷನರ್ ಮತ್ತು ಸ್ಟೇಟ್ ಕಮಿಷನರ್

74. ಚೀಫ್ ಕಮಿಷನರ್ ಮತ್ತು ಕಮಿಷನರ್‌ಗಳ ನೇಮಕ

75. ಚೀಫ್ ಕಮಿಷನರ್‌ನ ಪ್ರಕಾರ್ಯಗಳು

76. ಚೀಫ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಸಮುಚಿತ ಪ್ರಾಧಿಕಾರಗಳ ಕ್ರಮ

77. ಚೀಫ್ ಕಮಿಷನರ್‌ನ ಅಧಿಕಾರಗಳು

78. ಚೀಫ್ ಕಮಿಷನರ್‌ನಿಂದ ವಾರ್ಷಿಕ ಮತ್ತು ವಿಶೇಷ ವರದಿಗಳು

79. ರಾಜ್ಯಗಳಲ್ಲಿ ಸ್ಟೇಟ್ ಕಮಿಷನರ್ ನೇಮಕ

80. ಸ್ಟೇಟ್ ಕಮಿಷನರ್‌ನ ಪ್ರಕಾರ್ಯಗಳು

81. ಸ್ಟೇಟ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಯುಕ್ತ ಪ್ರಾಧಿಕಾರಗಳ ಕ್ರಮ

82. ಸ್ಟೇಟ್ ಕಮಿಷನರ್‌ನ ಅಧಿಕಾರಗಳು

83. ಸ್ಟೇಟ್ ಕಮಿಷನರ್‌ನ ವಾರ್ಷಿಕ ಮತ್ತು ವಿಶೇಷ ವರದಿಗಳು

**ಅಧ್ಯಾಯ XIII**

**ವಿಶೇಷ ನ್ಯಾಯಾಲಯ**

84. ವಿಶೇಷ ನ್ಯಾಯಾಲಯ

85. ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್

**ಅಧ್ಯಾಯ XIV**

**ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ**

86. ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ

87. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**ಅಧ್ಯಾಯ XV**

**ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ**

88. ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ

**ಅಧ್ಯಾಯ XVI**

**ಅಪರಾಧಗಳು ಮತ್ತು ದಂಡಗಳು**

89. ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ

90. ಕಂಪನಿಗಳಿಂದ ಅಪರಾಧಗಳು

91. ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡಿದ್ದಕ್ಕಾಗಿ ದಂಡನೆ

92. ದೌರ್ಜನ್ಯಗಳ ಅಪರಾಧಗಳಿಗಾಗಿ ದಂಡನೆ

93. ಮಾಹಿತಿಯನ್ನು ಒದಗಿಸಲು ವಿಫಲವಾಗುವುದಕ್ಕಾಗಿ ದಂಡನೆ

94. ಸಮುಚಿತ ಸರ್ಕಾರದ ಪೂರ್ವ ಮಂಜೂರಾತಿ

95. ಪರ್ಯಾಯ ದಂಡನೆಗಳು

## ಅಧ್ಯಾಯ XVII

### ಸಂಕೀರ್ಣ


96. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲ

97. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

98. ತೊಂದರೆಗಳನ್ನು ನಿವಾರಿಸಲು ಅಧಿಕಾರ

99. ಅನುಸೂಚಿಯನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರ

100. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ

101. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

102. ನಿರಸನ ಮತ್ತು ಉಳಿಸುವಿಕೆಗಳು

**ಅನುಸೂಚಿ**

# ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016

## (2016ರ ಅಧಿನಿಯಮ ಸಂಖ್ಯೆ 49)

[27ನೇ ಡಿಸೆಂಬರ್, 2016.]

ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿ ಮಾಡಿಕೊಂಡ ವಿಶ್ವಸಂಸ್ಥೆಯ ಒಡಂಬಡಿಕೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಅಧಿನಿಯಮ.

2006ರ ಡಿಸೆಂಬರ್ 13ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿದ ಒಡಂಬಡಿಕೆಯನ್ನು ಅಂಗೀಕರಿಸಿರುವುದರಿಂದ;

ಮತ್ತು ಮೇಲ್ಕಂಡ ಒಡಂಬಡಿಕೆಯಲ್ಲಿ ಅಂಗವಿಕಲ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದಕ್ಕಾಗಿ ಈ ಕೆಳಕಂಡ ಮಾರ್ಗದರ್ಶಕ ತತ್ವಗಳನ್ನು ಪ್ರತಿಪಾದಿಸಿರುವುದರಿಂದ,-

(ಎ) ಆ ವ್ಯಕ್ತಿಗಳ ಅಂತರ್ಗತ ಘನತೆಯನ್ನು, ಅವರ ಆಯ್ಕೆಗಳನ್ನು ಅವರೇ ನಿರ್ಧರಿಸುವ ಸ್ವಾತಂತ್ರ್ಯವೂ ಸೇರಿದಂತೆ ವೈಯಕ್ತಿಕ ಸ್ವಾಯತ್ತತೆಯನ್ನು ಮತ್ತು ಅವರ ಸ್ವಾತಂತ್ರ್ಯವನ್ನು ಗೌರವಿಸುವುದು;

(ಬಿ) ತಾರತಮ್ಯ ಮಾಡದಿರುವುದು;

(ಸಿ) ಸಮಾಜದಲ್ಲಿ ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುವುದು ಮತ್ತು ಸಮ್ಮಿಳಿತಗೊಳಿಸಿಕೊಳ್ಳುವುದು;

(ಡಿ) ಮಾನವ ವೈವಿಧ್ಯತೆ ಮತ್ತು ಮಾನವ ಧರ್ಮದ ಭಾಗವಾಗಿ ಅಂಗವಿಕಲ ವ್ಯಕ್ತಿಗಳ ವಿಭಿನ್ನ ಲಕ್ಷಣಗಳನ್ನು ಗೌರವಿಸುವುದು, ಅವರನ್ನು ಮನಃಪೂರ್ವಕವಾಗಿ ನಮ್ಮವರೆಂದು ಭಾವಿಸುವುದು;

(ಇ) ಅವಕಾಶಗಳಲ್ಲಿ ಸಮಾನತೆ;

(ಎಫ್) ಪ್ರವೇಶಾವಕಾಶ ನೀಡುವುದು;

(ಜಿ) ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ;

(ಹೆಚ್) ಅಂಗವಿಕಲ ಮಕ್ಕಳಲ್ಲಿ ವಿಕಸನದ ಸಾಮರ್ಥ್ಯಗಳನ್ನು ಗೌರವಿಸುವುದು ಮತ್ತು ಅವರ ಸ್ವವ್ಯಕ್ತಿತ್ವವನ್ನು ಸಂರಕ್ಷಿಸಲು ಅಂಗವಿಕಲ ಮಕ್ಕಳ ಹಕ್ಕನ್ನು ಗೌರವಿಸುವುದು;

ಮತ್ತು ಸದರಿ ಒಡಂಬಡಿಕೆಗೆ ಭಾರತವು ಸಹಿ ಮಾಡಿರುವುದರಿಂದ; ಮತ್ತು

1ನೇ ಅಕ್ಟೋಬರ್, 2007ರಂದು ಭಾರತವು ಸದರಿ ಒಡಂಬಡಿಕೆಯನ್ನು ಸ್ಥಿರೀಕರಿಸಿರುವುದರಿಂದ;

ಮತ್ತು ಈ ಮೇಲೆ ಹೇಳಿದ ಒಡಂಬಡಿಕೆಯನ್ನು ಅನುಷ್ಠಾನಗೊಳಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ.

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

## ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪೀಲು ಪ್ರಾಧಿಕಾರ" ಎಂದರೆ, ಸಂದರ್ಭಾನುಸಾರ 14ನೇ ಪ್ರಕರಣದ (3)ನೇ ಉಪಪ್ರಕರಣದ ಅಥವಾ 53ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ಅಥವಾ 59ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಬಹುದಾದ ಪ್ರಾಧಿಕಾರ;

(ಬಿ) "ಸಮುಚಿತ ಸರ್ಕಾರ" ಎಂದರೆ,-

(i) ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಅಧಿನಿಯಮ, 2006 (2006ರ 41)ರ ಮೇರೆಗೆ ರಚಿತವಾದ ದಂಡು ಪ್ರದೇಶ ಮಂಡಲಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ;

---

* ಏಪ್ರಿಲ್ 19, 2017ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ: ಎಸ್.ಒ. 1215 (ಇ) ದಿನಾಂಕ: 19ನೇ ಏಪ್ರಿಲ್ 2017, ಭಾರತ ರಾಜಪತ್ರದ ವಿಶೇಷ ಸಂಚಿಕೆ ಭಾಗ-II, ವಿಭಾಗ - 3(ii) ನೋಡಿ

(ii) ರಾಜ್ಯ ಸರ್ಕಾರಕ್ಕೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಮಂಡಲಿಯನ್ನು ಹೊರತುಪಡಿಸಿ, ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ, ರಾಜ್ಯ ಸರ್ಕಾರ;

(ಸಿ) "ತೊಡಕು" ಎಂದರೆ, ಸಮಾಜದಲ್ಲಿ ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುವುದಕ್ಕೆ ಅಡ್ಡಿಯುಂಟು ಮಾಡುವಂತಹ ಸಂವಹನಾತ್ಮಕ, ಸಾಂಸ್ಕೃತಿಕ, ಆರ್ಥಿಕ, ಪರಿಸರಾತ್ಮಕ, ಸ್ಥಾಂಸ್ಥಿಕ, ರಾಜಕೀಯ, ಸಾಮಾಜಿಕ, ಮನೋಭಾವಾತ್ಮಕ ಅಥವಾ ದೈಹಿಕ ನ್ಯೂನತೆ ಅಂಶಗಳೂ ಸೇರಿದಂತೆ ಯಾವುದೇ ಅಂಶ;

(ಡಿ) "ಪಾಲನೆದಾರ" ಎಂದರೆ, ಹಣವನ್ನು ಪಡೆದು ಅಥವಾ ಪಡೆಯದೆ ಅಂಗವಿಕಲ ವ್ಯಕ್ತಿಯನ್ನು ಪಾಲನೆ ಮಾಡುವ, ಅವನಿಗೆ ಬೆಂಬಲವನ್ನು ಅಥವಾ ನೆರವನ್ನು ಒದಗಿಸುವ ಪೋಷಕರು ಮತ್ತು ಇತರ ಕುಟುಂಬದ ಸದಸ್ಯರನ್ನು ಒಳಗೊಂಡ ಯಾರೇ ವ್ಯಕ್ತಿ;

(ಇ) "ಪ್ರಮಾಣೀಕರಿಸುವ ಪ್ರಾಧಿಕಾರ" ಎಂದರೆ, 57ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ಒಂದು ಪ್ರಾಧಿಕಾರ;

(ಎಫ್) "ಸಂವಹನ" ಎಂಬುದರಲ್ಲಿ ಸಂವಹನ ಪ್ರಕಾರಗಳಾದ ಭಾಷೆಗಳು, ಪಠ್ಯ ಪ್ರದರ್ಶನ, ಬ್ರೈಲ್ ಲಿಪಿ, ಸ್ಪರ್ಶ ಸಂವಹನ, ಸಂಕೇತಗಳು, ದಪ್ಪ ಅಕ್ಷರದ ಮುದ್ರಣ, ಪ್ರವೇಶ ಸಾಧ್ಯವಾದ ಮಲ್ಟಿ ಮೀಡಿಯಾ, ಬರಹ, ಶ್ರವ್ಯ, ದೃಶ್ಯ, ದೃಶ್ಯ ಪ್ರದರ್ಶನಗಳು, ಸಂಜ್ಞಾ ಭಾಷೆ, ರೂಢಿಯ ಲಿಪಿ ಭಾಷೆ, ಮಾನವ-ಮನೋವಾಚನ, ವರ್ಧಿತ ಮತ್ತು ಪರ್ಯಾಯ ಸಂವಹನ ವಿಧಾನಗಳು ಮತ್ತು ಸುಲಭಲಭ್ಯ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳೂ ಸಹ ಇದರಲ್ಲಿ ಒಳಗೊಳ್ಳುತ್ತವೆ;

(ಜಿ) "ಸಕ್ಷಮ ಪ್ರಾಧಿಕಾರ" ಎಂದರೆ, 49ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ಪ್ರಾಧಿಕಾರ;

(ಹೆಚ್) ಅಂಗವಿಕಲತೆಗೆ ಸಂಬಂಧಿಸಿದಂತೆ "ತಾರತಮ್ಯ" ಎಂದರೆ, ಅಂಗವಿಕಲತೆಯ ಕಾರಣದಿಂದಾಗಿ ಅಂಥ ವ್ಯಕ್ತಿಗಳು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನಾಗರಿಕ ಅಥವಾ ಯಾವುದೇ ಇತರ ಕ್ಷೇತ್ರದಲ್ಲಿ ಇತರರೊಂದಿಗೆ ಎಲ್ಲಾ ರೀತಿಯ ಮಾನವ ಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಸಮಾನವಾಗಿ ಪಡೆಯುವ ಮೂಲಕ

ಗುರುತಿಸಿಕೊಳ್ಳುವುದನ್ನು, ಅನುಕೂಲ ಹೊಂದುವುದನ್ನು ಅಥವಾ ಬಳಸುವುದನ್ನು ಉದ್ದೇಶಪೂರ್ವಕವಾಗಿ ಅಥವಾ ಪರಿಣಾಮಕಾರಿಯಾಗಿ ದುರ್ಬಲಗೊಳಿಸುವಂಥ ಅಥವಾ ಅನೂರ್ಜಿತಗೊಳಿಸುವಂಥ ಯಾವುದೇ ರೀತಿಯ ಭೇದಭಾವ, ಬಹಿಷ್ಕರಣ, ನಿರ್ಬಂಧ ಮತ್ತು ತಾರತಮ್ಯ ತೋರುವ ಎಲ್ಲಾ ರೀತಿಗಳು ಹಾಗೂ ಸಮಂಜಸ ಸೌಕರ್ಯವನ್ನು ನಿರಾಕರಿಸುವುದೂ ಸಹ ಇದರಲ್ಲಿ ಒಳಗೊಳ್ಳುತ್ತದೆ;

(ಐ) "ಕಾರ್ಯಸಂಸ್ಥೆ" ಎಂಬುದರಲ್ಲಿ, ಸರ್ಕಾರಿ ಕಾರ್ಯಸಂಸ್ಥೆ ಮತ್ತು ಖಾಸಗಿ ಕಾರ್ಯಸಂಸ್ಥೆಯು ಒಳಗೊಳ್ಳುತ್ತದೆ;

(ಜೆ) "ನಿಧಿ" ಎಂದರೆ, 86ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ನಿಧಿ;

(ಕೆ) "ಸರ್ಕಾರಿ ಕಾರ್ಯಸಂಸ್ಥೆ" ಎಂದರೆ, ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ನಿಗಮ ಅಥವಾ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಅವುಗಳಿಂದ ಸಹಾಯ ಧನ ಪಡೆಯುತ್ತಿರುವ ಪ್ರಾಧಿಕಾರ ಅಥವಾ ನಿಕಾಯ ಅಥವಾ ಕಂಪನಿಗಳ ಅಧಿನಿಯಮ, 2013 ರ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತಹ ಸರ್ಕಾರಿ ಕಂಪನಿ ಮತ್ತು ಇದರಲ್ಲಿ ಸರ್ಕಾರದ ಇಲಾಖೆಯು ಒಳಗೊಳ್ಳುತ್ತದೆ;

(ಎಲ್) "ಉನ್ನತ ಬೆಂಬಲ" ಎಂದರೆ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆ ಇರುವ ವ್ಯಕ್ತಿಯು ತನ್ನ ದೈನಂದಿನ ಕೆಲಸಕಾರ್ಯಗಳನ್ನು ಮಾಡಿಕೊಳ್ಳಲು, ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕಾಗಿ ಸ್ವತಂತ್ರವಾಗಿ ಮತ್ತು ಬುದ್ಧಿವಂತಿಕೆಯಿಂದ ನಿರ್ಧಾರವನ್ನು ತೆಗೆದುಕೊಳ್ಳಲು ಮತ್ತು ಶಿಕ್ಷಣ, ಉದ್ಯೋಗ, ಕುಟುಂಬ ಮತ್ತು ಸಮುದಾಯ ಜೀವನ ಸೇರಿದಂತೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮತ್ತು ತನಗೆ ಅಗತ್ಯವಾದ ಚಿಕಿತ್ಸೆಯನ್ನು ಮತ್ತು ಔಷಧೋಪಚಾರ ಪಡೆಯುವುದೂ ಸೇರಿದಂತೆ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲು ದೈಹಿಕ, ಮಾನಸಿಕ ಮತ್ತು ಇತರೆ ರೀತಿಯ ಅವಶ್ಯಕವಾದ ತೀವ್ರ ನೆರವನ್ನು ನೀಡುವುದು;

(ಎಂ) "ಸಮ್ಮಿಳಿತ ಶಿಕ್ಷಣ" ಎಂದರೆ, ಅಂಗವಿಕಲತೆ ಇರುವ ಮತ್ತು ಅಂಗವಿಕಲತೆ ಇಲ್ಲದಿರುವ ವಿದ್ಯಾರ್ಥಿಗಳು ಪರಸ್ಪರ ಜೊತೆಯಲ್ಲಿ ಒಂದಾಗಿ ಶಿಕ್ಷಣ ಪಡೆಯುವ ವ್ಯವಸ್ಥೆ ಮತ್ತು ವಿವಿಧ ಬಗೆಯ ಅಂಗವಿಕಲತೆ ಇರುವ ವಿದ್ಯಾರ್ಥಿಗಳ ಕಲಿಕೆಯ ಅಗತ್ಯಗಳನ್ನು ಈಡೇರಿಸುವ ಸಲುವಾಗಿ ಸೂಕ್ತವಾಗಿ ಅಳವಡಿಸಿಕೊಂಡಿರುವ ಶೈಕ್ಷಣಿಕ ಪದ್ಧತಿ;

(ಎನ್) "ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ" ಎಂಬುದರಲ್ಲಿ ಮಾಹಿತಿ ಮತ್ತು ಸಂಪರ್ಕಕ್ಕೆ ಸಂಬಂಧಪಟ್ಟ ಎಲ್ಲಾ ಸೇವೆಗಳು ಮತ್ತು ಆವಿಷ್ಕಾರಗಳೂ ಸೇರಿದ್ದು, ಇದರಲ್ಲಿ ದೂರಸಂಪರ್ಕ ಸೇವೆಗಳು, ವೆಬ್ ಆಧಾರಿತ ಸೇವೆಗಳು, ವಿದ್ಯುನ್ಮಾನ ಮತ್ತು ಮುದ್ರಣ ಸೇವೆಗಳು, ಅಂಕೀಯ ಮತ್ತು ವಾಸ್ತವಾಭಾಸದ ಸೇವೆಗಳು ಒಳಗೊಳ್ಳುತ್ತವೆ;

(ಒ) "ಸಂಸ್ಥೆ" ಎಂದರೆ, ಅಂಗವಿಕಲ ವ್ಯಕ್ತಿಗಳನ್ನು ಬರಮಾಡಿಕೊಳ್ಳುವ, ಅವರಿಗೆ ಸ್ಥಳವಕಾಶ ನೀಡುವ, ಅವರ ಪಾಲನೆ ಪೋಷಣೆ ಮಾಡುವ, ಅವರನ್ನು ಸಂರಕ್ಷಣೆ ಮಾಡುವ, ಅವರಿಗೆ ಶಿಕ್ಷಣ, ತರಬೇತಿ ನೀಡುವ, ಅವರಿಗೆ ಪುನರ್ವಸತಿ ಕಲ್ಪಿಸುವ ಮತ್ತು ಅವರ ಇತರ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದ ಸೇವೆಯನ್ನು ಒದಗಿಸುವ ಸಂಸ್ಥೆ;

(ಪಿ) "ಸ್ಥಳೀಯ ಪ್ರಾಧಿಕಾರ" ಎಂದರೆ, ಸಂವಿಧಾನದ 243ಪಿ ಅನುಚ್ಛೇದದ (ಇ) ಖಂಡದಲ್ಲಿ ಮತ್ತು (ಎಫ್) ಖಂಡದಲ್ಲಿ ಪರಿಭಾಷಿಸಿದಂತಹ ಪುರಸಭೆ ಅಥವಾ ಪಂಚಾಯಿತಿ; ದಂಡು ಪ್ರದೇಶಗಳ ಅಧಿನಿಯಮ, 2006 (2006ರ 41)ರ ಮೇರೆಗೆ ರಚಿತವಾದ ದಂಡು ಪ್ರದೇಶಗಳ ಮಂಡಲಿ; ಮತ್ತು ಪೌರ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ಜಾರಿಗೆ ತಂದ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಯಾವುದೇ ಇತರ ಪ್ರಾಧಿಕಾರ;

(ಕ್ಯೂ) "ಅಧಿಸೂಚನೆ" ಎಂದರೆ, ಅಧಿಕೃತ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಮತ್ತು "ಅಧಿಸೂಚಿಸು" ಅಥವಾ "ಅಧಿಸೂಚಿಸಿದ" ಎಂಬ ಪದಾವಳಿಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಆರ್) "ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿ" ಎಂದರೆ, ಮಾನದಂಡಗಳ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಅಂಗವಿಕಲತೆಯನ್ನು ಪರಿಭಾಷಿಸಿರದಿದ್ದರೆ ಶೇಕಡ ನಲವತ್ತರಷ್ಟಕ್ಕಿಂತ ಕಡಿಮೆ ಇರದ ನಿರ್ದಿಷ್ಟ ಅಂಗವಿಕಲತೆ ಹೊಂದಿರುವ ವ್ಯಕ್ತಿ ಮತ್ತು ಇದರಲ್ಲಿ ಮಾನದಂಡಗಳ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಅಂಗವಿಕಲತೆಯನ್ನು ಪರಿಭಾಷಿಸಿದ್ದರೆ ಅಂಥ ಅಂಗವಿಕಲತೆಯನ್ನು ಹೊಂದಿರುವ ಹಾಗೂ ಇದನ್ನು ಪ್ರಮಾಣೀಕೃತ ಪ್ರಾಧಿಕಾರವು ಪ್ರಮಾಣೀಕರಿಸಿದ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಎಸ್) "ಅಂಗವಿಕಲ ವ್ಯಕ್ತಿ" ಎಂದರೆ, ದೀರ್ಘಕಾಲದಿಂದ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಇಂದ್ರಿಯಗಳ ದುರ್ಬಲತೆ ಹಾಗೂ ಆತನಿಗಿರುವ ತೊಡಕುಗಳ ಪರಿಣಾಮದಿಂದಾಗಿ,

ಸಮಾಜದಲ್ಲಿ ಇತರರೊಂದಿಗೆ ಸಮಾನವಾಗಿ ಸಂಪೂರ್ಣ ರೀತಿಯಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ಸಾಧ್ಯವಾಗದಂತೆ ಅಡ್ಡಿ-ಅಡಚಣೆಗೆ ಒಳಗಾಗಿರುವ ವ್ಯಕ್ತಿ;

(ಟಿ) "ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿ" ಎಂದರೆ, 58ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಯಾವ ವ್ಯಕ್ತಿಗೆ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆ ಇರುವುದರಿಂದಾಗಿ ಉನ್ನತ ಬೆಂಬಲದ ಅಗತ್ಯ ಇರುವುದೆಂದು ಪ್ರಮಾಣೀಕರಿಸಲಾಗಿದೆಯೋ ಆ ವ್ಯಕ್ತಿ;

(ಯು) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ವಿ) "ಖಾಸಗಿ ಕಾರ್ಯಸಂಸ್ಥೆ" ಎಂದರೆ, ಕಂಪನಿ, ಫರ್ಮ್, ಸಹಕಾರ ಅಥವಾ ಇತರ ಸಂಘ, ಸಂಘಗಳು, ಟ್ರಸ್ಟ್, ಏಜೆನ್ಸಿ, ಸಂಸ್ಥೆ, ಸಂಘಸಂಸ್ಥೆ, ಯೂನಿಯನ್, ಕಾರ್ಖಾನೆ ಅಥವಾ ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಕಾರ್ಯಸಂಸ್ಥೆ;

(ಡಬ್ಲ್ಯೂ) "ಸಾರ್ವಜನಿಕ ನಿರ್ಮಿತಿ" ಎಂದರೆ, ಶಿಕ್ಷಣಕ್ಕಾಗಿ ಅಥವಾ ವೃತ್ತಿ ಶಿಕ್ಷಣ ನೀಡುವ ಉದ್ದೇಶಗಳಿಗಾಗಿ, ಕಾರ್ಯ ಸ್ಥಳಕ್ಕಾಗಿ, ವಾಣಿಜ್ಯ ಚಟುವಟಿಕೆಗಳಿಗಾಗಿ, ಸಾರ್ವಜನಿಕ ಉಪಯುಕ್ತತೆಗಳಿಗಾಗಿ, ಧಾರ್ಮಿಕ, ಸಾಂಸ್ಕೃತಿಕ, ಬಿಡುವಿನ ಅಥವಾ ಮನರಂಜನೆ ಚಟುವಟಿಕೆಗಳಿಗಾಗಿ, ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳಿಗಾಗಿ, ಕಾನೂನು ಜಾರಿ ಏಜೆನ್ಸಿಗಳಿಗಾಗಿ, ಸುಧಾರಣಾಲಯಗಳಿಗಾಗಿ ಅಥವಾ ನ್ಯಾಯಿಕ ವೇದಿಕೆಗಳಿಗಾಗಿ, ರೈಲು ನಿಲ್ದಾಣಗಳು ಅಥವಾ ಫ್ಲಾಟ್‌ಫಾರ್ಮ್‌ಗಳಿಗಾಗಿ, ರಸ್ತೆ ಮಾರ್ಗಗಳಿಗಾಗಿ ಬಸ್ ನಿಲ್ದಾಣಗಳು ಅಥವಾ ಬಸ್‌ಗಳ ಆಗಮನ ಮತ್ತು ನಿರ್ಗಮನ ನಿಲ್ದಾಣಗಳಿಗಾಗಿ, ವಿಮಾನ ನಿಲ್ದಾಣಗಳು ಅಥವಾ ಜಲಮಾರ್ಗಗಳಿಗಾಗಿ ಬಳಸುತ್ತಿರುವ ನಿರ್ಮಿತಿಗಳೂ ಸೇರಿದಂತೆ ಹೆಚ್ಚು ಹೆಚ್ಚು ಸಾರ್ವಜನಿಕರು ಬಳಸುತ್ತಿರುವ ಅಥವಾ ಅವರಿಗೆ ಪ್ರವೇಶವಿರುವ ಸರ್ಕಾರಿ ಕಟ್ಟಡ ಅಥವಾ ಖಾಸಗಿ ಕಟ್ಟಡ;

(ಎಕ್ಸ್) "ಸಾರ್ವಜನಿಕ ಸೌಲಭ್ಯಗಳು ಮತ್ತು ಸೇವೆಗಳು" ಎಂಬುದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವ ಸೇವೆಗಳಲ್ಲಿ ವಸತಿ, ಶೈಕ್ಷಣಿಕ ಮತ್ತು ವೃತ್ತಿ ತರಬೇತಿ, ಉದ್ಯೋಗ ಮತ್ತು ವೃತ್ತಿಯಲ್ಲಿ ಮುನ್ನಡೆ, ಷಾಪಿಂಗ್ ಅಥವಾ ಕ್ರಯವಿಕ್ರಯ, ಧಾರ್ಮಿಕ, ಸಾಂಸ್ಕೃತಿಕ, ವಿಶ್ರಾಂತಿ ಅಥವಾ ಮನರಂಜನೆ, ವೈದ್ಯಕೀಯ, ಆರೋಗ್ಯ ಮತ್ತು ಪುನರ್ವಸತಿ, ಬ್ಯಾಂಕಿಂಗ್, ಹಣಕಾಸು ಮತ್ತು ವಿಮೆ, ಸಂಪರ್ಕ, ಅಂಚೆ ವ್ಯವಹಾರ ಮತ್ತು ಮಾಹಿತಿ ಪಡೆಯುವ, ನ್ಯಾಯವನ್ನು

ಪಡೆದುಕೊಳ್ಳುವುದು, ಸಾರ್ವಜನಿಕ ಉಪಯೋಗಗಳ, ಸಂಪರ್ಕ ಸಾರಿಗೆ ಸೇರಿದಂತೆ ಹೆಚ್ಚು ಹೆಚ್ಚು ಸಾರ್ವಜನಿಕರಿಗೆ ಒದಗಿಸುವ ಎಲ್ಲ ರೀತಿಯ ಸೇವೆಗಳು ಒಳಗೊಳ್ಳುತ್ತವೆ;

(ವೈ) "ಸಮಂಜಸ ಸೌಕರ್ಯ" ಎಂದರೆ, ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ತಮ್ಮ ಹಕ್ಕುಗಳನ್ನು ಸಮಾನವಾಗಿ ಅನುಭವಿಸುವುದನ್ನು ಅಥವಾ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿರ್ದಿಷ್ಟ ಸನ್ನಿವೇಶದಲ್ಲಿ ಅಸಮ ಮತ್ತು ಅನಗತ್ಯ ಹೊರೆಯನ್ನು ವಿಧಿಸದೆ ಅವಶ್ಯಕ ಮತ್ತು ಸಮರ್ಪಕ ಮಾರ್ಪಾಡು ಮತ್ತು ಹೊಂದಾಣಿಕೆಗಳ ಸೌಕರ್ಯ;

(ಝಡ್) "ನೋಂದಾಯಿತ ಸಂಘ ಸಂಸ್ಥೆ" ಎಂದರೆ, ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ಜಾರಿಗೊಳಿಸಿದ ಅಧಿನಿಯಮದ ಮೇರೆಗೆ ಸೂಕ್ತ ರೀತಿಯಲ್ಲಿ ನೋಂದಾಯಿತವಾದ ಅಂಗವಿಕಲ ವ್ಯಕ್ತಿಗಳ ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಸಂಘ ಸಂಸ್ಥೆ, ಅಂಗವಿಕಲ ವ್ಯಕ್ತಿಗಳ ಪೋಷಕರ ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಮತ್ತು ಕುಟುಂಬ ಸದಸ್ಯರ ಸಂಘ ಅಥವಾ ಸ್ವಯಂ ಸೇವಾ ಅಥವಾ ಸರ್ಕಾರೇತರ ಅಥವಾ ಧರ್ಮಾರ್ಥ ಸಂಘಸಂಸ್ಥೆ ಅಥವಾ ಟ್ರಸ್ಟ್, ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಲಾಭರಹಿತ ಕಂಪನಿ;

(ಝಡ್ಎ) "ಪುನರ್ ವ್ಯವಸ್ಥೆ" ಎಂಬುದು ಅಂಗವಿಕಲ ವ್ಯಕ್ತಿಗಳು ದೈಹಿಕವಾಗಿ, ಸಂವೇದನಾತ್ಮಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ, ಪರಿಸರಾತ್ಮಕವಾಗಿ ಅಥವಾ ಸಾಮಾಜಿಕ ಕಾರ್ಯದ ಉನ್ನತ ಮಟ್ಟಗಳನ್ನು ಕಾಪಾಡಿಕೊಳ್ಳಲು ಅವರಿಗೆ ಸಾಧ್ಯತೆ ಮಾಡಿಕೊಡುವ ಉದ್ದೇಶವುಳ್ಳ ಪ್ರಕ್ರಿಯೆ;

(ಝಡ್ಬಿ) "ವಿಶೇಷ ಉದ್ಯೋಗ ವಿನಿಮಯ ಕೇಂದ್ರ" ಎಂದರೆ,-

(i) ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ/ನೌಕರಿಯನ್ನು ನೀಡಲು ಬಯಸುವ ವ್ಯಕ್ತಿಗಳ ಬಗ್ಗೆ;

(ii) ಉದ್ಯೋಗವನ್ನು ಬಯಸುತ್ತಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಬಗ್ಗೆ;

(iii) ಉದ್ಯೋಗವನ್ನು ಬಯಸುತ್ತಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಖಾಲಿ ಇರುವ ಯಾವ ಕೆಲಸಗಳಿಗೆ ನೇಮಕ ಮಾಡಬಹುದೋ ಆ ಕೆಲಸಗಳ ವಿವರಗಳ ಬಗ್ಗೆ

– ರಿಜಿಸ್ಟರ್‌ಗಳನ್ನು ಇಡುವುದರ ಮೂಲಕ ಅಥವಾ ಇತರೆ ರೀತಿಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಒದಗಿಸಲು ಸರ್ಕಾರವು ಸ್ಥಾಪಿಸುತ್ತಿರುವ ಮತ್ತು ಅದರ ಮೂಲಕ ನಿರ್ವಹಿಸುತ್ತಿರುವ ಯಾವುದೇ ಕಚೇರಿ ಅಥವಾ ಸ್ಥಳ;

(ಝಡ್‌ಸಿ) "ನಿರ್ದಿಷ್ಟಪಡಿಸಿದ ಅಂಗವಿಕಲತೆ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಅಂಗವಿಕಲತೆಗಳ ಬಗೆ;

(ಝಡ್‌ಡಿ) "ಸಾರಿಗೆ ವ್ಯವಸ್ಥೆಗಳು" ಎಂಬುದರಲ್ಲಿ ರಸ್ತೆ ಸಾರಿಗೆ, ರೈಲು ಸಾರಿಗೆ, ವಿಮಾನ ಸಾರಿಗೆ, ಜಲಸಾರಿಗೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಟ್ಟಕಡೆಯಲ್ಲಿ ತಲುಪಬೇಕಾದ ಸ್ಥಳದವರೆಗೂ ತಲುಪಿಸುವ ಸಹಾಯಕ ಸಾರಿಗೆ ಸಂಪರ್ಕ ವ್ಯವಸ್ಥೆಗಳು, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಸೌಕರ್ಯಗಳು, ಇತ್ಯಾದಿಗಳು ಒಳಗೊಳ್ಳುತ್ತವೆ;

(ಝಡ್‌ಇ) "ಸರ್ವ ಸಾಮಾನ್ಯ ವಿನ್ಯಾಸ" ಎಂದರೆ, ಅಳವಡಿಸಿಕೊಳ್ಳುವ ಅಗತ್ಯ ಇಲ್ಲದೆಯೇ ಅಥವಾ ವಿಶೇಷ ವಿನ್ಯಾಸದ ಅಗತ್ಯ ಇಲ್ಲದೆಯೇ ಸಮಾಜದ ಎಲ್ಲಾ ಜನರು ಗರಿಷ್ಠವಾಗಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಬಳಕೆ ಮಾಡಬಹುದಾದ ಉತ್ಪನ್ನಗಳ, ಪರಿಸರಗಳ, ಕಾರ್ಯಕ್ರಮಗಳ ಮತ್ತು ಸೇವೆಗಳ ವಿನ್ಯಾಸ ಮತ್ತು ಈ ವಿನ್ಯಾಸವು ಅಂಗವಿಕಲ ವ್ಯಕ್ತಿಗಳ ನಿರ್ದಿಷ್ಟ ಗುಂಪಿಗಾಗಿ ಇರುವ ಆಧುನಿಕ ತಂತ್ರಜ್ಞಾನಗಳೂ ಸೇರಿದಂತೆ ಸಹಾಯಕ ಸಾಧನೋಪಾಯಗಳಿಗೂ ಸಹ ಅನ್ವಯವಾಗತಕ್ಕದ್ದು.

## ಅಧ್ಯಾಯ II

## ಹಕ್ಕುಗಳು ಮತ್ತು ಅರ್ಹತೆಗಳು

3. **ಸಮಾನತೆ ಇರಬೇಕು ಮತ್ತು ತಾರತಮ್ಯ ತೋರಕೂಡದು.–** (1) ಅಂಗವಿಕಲ ವ್ಯಕ್ತಿಗಳು ಸಮಾನತೆಯ ಹಕ್ಕನ್ನು ಅನುಭವಿಸುವುದನ್ನು, ಘನತೆಯ ಜೀವನ ನಡೆಸುವುದನ್ನು ಮತ್ತು ಅವನ ಅಥವಾ ಅವಳ ಪ್ರಾಮಾಣಿಕತನವನ್ನು ಇತರರಂತೆಯೇ ಸಮಾನವಾಗಿ ಗೌರವಿಸುವುದನ್ನು ಸಮುಚಿತ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗೆ ಸೂಕ್ತ ಪರಿಸರವನ್ನು ಕಲ್ಪಿಸುವ ಮೂಲಕ ಅವರ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಆರೋಪಿಸಿರುವ ಕೃತ್ಯವು ಅಥವಾ ಲೋಪವು ಕಾನೂನುಸಮ್ಮತ ಉದ್ದೇಶವನ್ನು ಸಾಧಿಸುವುದಕ್ಕೆ ಪ್ರಮಾಣಾನುಸಾರವಾದ ರೀತಿಯದಾಗಿತ್ತು ಎಂಬುದನ್ನು ತೋರಿಸಿದ ಹೊರತು, ಯಾರೇ ಅಂಗವಿಕಲ ವ್ಯಕ್ತಿಗೆ ಅವನ ಅಂಗವಿಕಲತೆಯ ಕಾರಣದ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲ.

(4) ಯಾರೇ ವ್ಯಕ್ತಿಯು, ಕೇವಲ ಅಂಗವಿಕಲತೆಯ ಕಾರಣದ ಮೇಲೆ ಮಾತ್ರವೇ ಅವನ/ಅವಳ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳತಕ್ಕದ್ದಲ್ಲ.

(5) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗೆ ಸಮಂಜಸ ಅವಕಾಶಗಳನ್ನು ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸುವುದಕ್ಕೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

4. **ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು.–** (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು ಸಮಾಜದಲ್ಲಿ ಇತರರೊಂದಿಗೆ ತಮ್ಮ ಹಕ್ಕುಗಳನ್ನು ಸಮವಾಗಿ ಅನುಭವಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಅಂಗವಿಕಲತೆ ಇರುವ ಎಲ್ಲಾ ಮಕ್ಕಳು ತಮಗೆ ಬಾಧಕವಾಗಿರುವ ಎಲ್ಲಾ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸಮಾನತೆಯ ಆಧಾರದ ಮೇಲೆ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರ ವಯಸ್ಸು ಮತ್ತು ಅಂಗವಿಕಲತೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸೂಕ್ತ ನೆರವು ಒದಗಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

5. **ಸಾಮುದಾಯಿಕ ಜೀವನ.–** (1) ಅಂಗವಿಕಲ ವ್ಯಕ್ತಿಗಳು ಸಮುದಾಯದಲ್ಲಿ ಎಲ್ಲರೊಂದಿಗೆ ಬೆರೆತು ಜೀವಿಸುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು.

(2) ಸಮುಚಿತ ಸರ್ಕಾರವು,–

(ಎ) ಯಾವುದೇ ನಿರ್ದಿಷ್ಟ ವ್ಯವಸ್ಥೆಯಲ್ಲಿ ಅಂಗವಿಕಲ ವ್ಯಕ್ತಿಗಳು ಜೀವಿಸಲು ಕಟ್ಟು ಬೀಳಿಸುವುದನ್ನು ತಡೆಯಲು; ಮತ್ತು

(ಬಿ) ಅಂಗವಿಕಲ ವ್ಯಕ್ತಿಯ ವಯಸ್ಸಿಗೆ ಅಥವಾ ಆ ವ್ಯಕ್ತಿಯು ಗಂಡೋ–ಹೆಣ್ಣೋ ಎಂಬುದಕ್ಕೆ ಗಮನಕೊಟ್ಟು, ಜೀವಿಸಲು ಅವಶ್ಯವಿರುವ ವೈಯಕ್ತಿಕ ಬೆಂಬಲವೂ ಸೇರಿದಂತೆ ಮನೆಯಲ್ಲಿ, ನಿವಾಸದಲ್ಲಿ ಕೊಡುವಂತಹ ಶ್ರೇಣಿಯ ಬೆಂಬಲ ಸೇವೆಗಳಿಗೆ ಮತ್ತು ಇತರ ಸಾಮುದಾಯಿಕ ಬೆಂಬಲ ಸೇವೆಗಳಿಗೆ ಅವಕಾಶ ಕಲ್ಪಿಸಲು

– ಪ್ರಯತ್ನ ಮಾಡತಕ್ಕದ್ದು.

6. **ಕ್ರೌರ್ಯ ಮತ್ತು ಅಮಾನುಷ ವರ್ತನೆಗಳಿಗೆ ಈಡಾಗದಂತೆ ರಕ್ಷಣೆ:**– (1) ಅಂಗವಿಕಲ ವ್ಯಕ್ತಿಗಳು ಚಿತ್ರಹಿಂಸೆಗೆ, ಕ್ರೌರ್ಯಕ್ಕೆ, ಅಮಾನುಷ ಅಥವಾ ಅಗೌರವದ ವರ್ತನೆಗಳಿಗೆ ಈಡಾಗದಂತೆ ಅವರನ್ನು ರಕ್ಷಿಸುವುದಕ್ಕೆ ಸಮುಚಿತ ಸರ್ಕಾರವು, ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು,–

(i) ಸೌಲಭ್ಯ ಲಭ್ಯವಿರುವ ವಿಧಾನಗಳು, ರೀತಿಗಳು ಮತ್ತು ನಿದರ್ಶನ ಸಾಧನಗಳ ಮೂಲಕ ಆತನಿಗೆ/ಆಕೆಗೆ ಮುಂಚಿತವಾಗಿ ಸಂಶೋಧನೆಗೆ ಒಳಪಡಿಸುವ ವಿಷಯವನ್ನು ತಿಳಿಸದೇ ಇದ್ದ ಹೊರತು ಮತ್ತು ಅವರ ಸ್ವಯಿಚ್ಛೆ ಅನುಮತಿಯನ್ನು ಪಡೆಯದೇ ಇದ್ದ ಹೊರತು; ಮತ್ತು

(ii) ಸಮುಚಿತ ಸರ್ಕಾರವು, ಅಂಗವಿಕಲತೆ ಕುರಿತು ಸಂಶೋಧನೆ ಉದ್ದೇಶಕ್ಕಾಗಿ ರಚಿಸಿದ ಅಂಗವಿಕಲತೆ ಕುರಿತ ಸಮಿತಿಯಿಂದ ಮುಂಚಿತವಾಗಿ ಅನುಮತಿ ಪಡೆಯದೆ ಯಾವುದೇ ಸಂಶೋಧನೆಗೆ ಒಳಪಡಿಸತಕ್ಕದ್ದಲ್ಲ. ಈ ಸಮಿತಿಯಲ್ಲಿ ಅರ್ಧದಷ್ಟು ಸದಸ್ಯರಿಗಿಂತ ಕಡಿಮೆ ಇಲ್ಲದಷ್ಟು ಅಂಗವಿಕಲ ವ್ಯಕ್ತಿಗಳು ಸದಸ್ಯರಾಗಿರತಕ್ಕದ್ದು ಅಥವಾ 2ನೇ ಪ್ರಕರಣದ (ಝಡ್) ಖಂಡದಲ್ಲಿ ಹೇಳಿರುವಂತಹ ನೋಂದಾಯಿತವಾದ ಸಂಸ್ಥೆಯ ಸದಸ್ಯರುಗಳು ಸಮಿತಿಯ ಸದಸ್ಯರಾಗಿರತಕ್ಕದ್ದು.

7. **ದುರುಪಯೋಗ, ಹಿಂಸೆ ಮತ್ತು ಶೋಷಣೆಯಾಗದಂತೆ ರಕ್ಷಣೆ.**– (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ಎಲ್ಲ ರೀತಿಯ ದುರುಪಯೋಗಕ್ಕೆ, ಹಿಂಸೆಗೆ ಮತ್ತು ಶೋಷಣೆಗೆ ಒಳಗಾಗದಂತೆ ರಕ್ಷಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಇಂಥ ಘಟನೆಗಳನ್ನು ತಡೆಯುವ ನಿಟ್ಟಿನಲ್ಲಿ,–

(ಎ) ದುರುಪಯೋಗ, ಹಿಂಸೆ ಮತ್ತು ಶೋಷಣೆಯ ಘಟನೆಗಳ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ಘಟನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಕಾನೂನು ಪರಿಹಾರಗಳನ್ನು ಒದಗಿಸತಕ್ಕದ್ದು;

(ಬಿ) ಅಂಥ ಘಟನೆಗಳು ಸಂಭವಿಸದಂತೆ ಅವುಗಳನ್ನು ತಪ್ಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಇಂಥವುಗಳನ್ನು ವರದಿ ಮಾಡಲು ವಿಧಾನವನ್ನು ಗೊತ್ತುಪಡಿಸತಕ್ಕದ್ದು;

(ಸಿ) ಅಂಥ ಘಟನೆಗಳಿಗೆ ಗುರಿಯಾದವರನ್ನು ಕಾಪಾಡಲು, ರಕ್ಷಿಸಲು ಅವರಿಗೆ ಪುನರ್ವಸತಿ ಕಲ್ಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಉಂಟುಮಾಡತಕ್ಕದ್ದು ಮತ್ತು ಮಾಹಿತಿಯು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು ದುರುಪಯೋಗಕ್ಕೆ, ಹಿಂಸೆಗೆ ಅಥವಾ ಶೋಷಣೆಗೆ ಗುರಿಪಡಿಸುವ ಕೃತ್ಯ ನಡೆದಿದೆ ಎಂದು ಅಥವಾ ಕೃತ್ಯ ನಡೆಯುತ್ತಿದೆ ಎಂದು ಅಥವಾ ಕೃತ್ಯವನ್ನು ಎಸಗುವ ಸಂಭವವಿದೆ ಎಂಬುದನ್ನು ನಂಬಲು ಕಾರಣವಿರುವ ಯಾರೇ ವ್ಯಕ್ತಿಯು ಅಥವಾ ಯಾವುದೇ ನೋಂದಾಯಿತ ಸಂಸ್ಥೆಯು ಅಂಥ ಘಟನೆಗಳು ಯಾವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರ ಅಧಿಕಾರವ್ಯಾಪ್ತಿಯುಳ್ಳ ಸ್ಥಳೀಯ ಸರಹದ್ದುಗಳ ಒಳಗೆ ಸಂಭವಿಸಿದೆಯೋ ಆ ಸಂಭವಿಸಿದ ಸ್ಥಳೀಯ ಸರಹದ್ದುಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಆ ಕುರಿತು ಮಾಹಿತಿಯನ್ನು ನೀಡಬಹುದು.

(3) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರು ಅಂಥ ಮಾಹಿತಿಯನ್ನು ಸ್ವೀಕರಿಸಿದ ನಂತರ, ಕೂಡಲೇ ಅಂಥ ಘಟನೆಗಳನ್ನು ನಿಲ್ಲಿಸುವುದಕ್ಕೆ ಅಥವಾ ತಡೆಗಟ್ಟುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಸಂದರ್ಭಾನುಸಾರ ಅಂಥ ಅಂಗವಿಕಲ ವ್ಯಕ್ತಿಯನ್ನು ರಕ್ಷಿಸುವುದಕ್ಕಾಗಿ ಸೂಕ್ತವೆಂದು ಅವರು ಭಾವಿಸುವಂತಹ ಆದೇಶವನ್ನು ಹೊರಡಿಸಬಹುದು; ಈ ಆದೇಶದಲ್ಲಿ,–

(ಎ) ಅಂಥ ಕೃತ್ಯಕ್ಕೆ ಈಡಾದವರನ್ನು ರಕ್ಷಿಸುವುದಕ್ಕೆ ಪೋಲೀಸರಿಗೆ ಅಥವಾ ಅಂಗವಿಕಲ ವ್ಯಕ್ತಿಗಳಿಗೆ ಸುರಕ್ಷಿತ ಅಭಿರಕ್ಷೆ ಅಥವಾ ಪುನರ್ವಸತಿ ಕಲ್ಪಿಸಲು ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಂಸ್ಥೆಗೆ ಅಥವಾ ಸಂದರ್ಭಾನುಸಾರ ಇವೆರಡಕ್ಕೂ ಅಧಿಕಾರ ನೀಡುವುದನ್ನು;

(ಬಿ) ಅಂಗವಿಕಲ ವ್ಯಕ್ತಿಯು ತನಗೆ ರಕ್ಷಣಾ ಅಭಿರಕ್ಷೆ ಕಲ್ಪಿಸಬೇಕೆಂದು ಅಪೇಕ್ಷಿಸಿದರೆ ಅವನಿಗೆ ರಕ್ಷಣಾ ಅಭಿರಕ್ಷೆ ಕಲ್ಪಿಸುವುದನ್ನು;

(ಸಿ) ಅಂಥ ಅಂಗವಿಕಲ ವ್ಯಕ್ತಿಗೆ ಜೀವನಾಧಾರ ಒದಗಿಸುವುದನ್ನು

– ಒಳಗೊಂಡಿರತಕ್ಕದ್ದು.

(4) ಯಾರೇ ಪೊಲೀಸ್ ಅಧಿಕಾರಿಗೆ ಯಾರೇ ಅಂಗವಿಕಲ ವ್ಯಕ್ತಿಯು ದುರುಪಯೋಗಕ್ಕೆ, ಹಿಂಸೆಗೆ ಅಥವಾ ಶೋಷಣೆಗೆ ಗುರಿಯಾಗಿದ್ದಾನೆ ಎಂಬ ದೂರು ಬಂದರೆ ಅಥವಾ ಅದಾಗಿದೆಯೆಂದು ಬೇರೆ ರೀತಿಯಲ್ಲಿ ಗೊತ್ತಾದರೆ ಆ ಪೊಲೀಸ್ ಅಧಿಕಾರಿಯು ಅಂಥ ಬಾಧಿತ ವ್ಯಕ್ತಿಗೆ,-

(ಎ) ಉಪಪ್ರಕರಣ (2)ರ ಮೇರೆಗೆ ರಕ್ಷಣೆಗಾಗಿ ಅವನು ಅಥವಾ ಅವಳು ಸ್ಥಳೀಯ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರ ಬಳಿ ನೆರವನ್ನು ಕೋರುವ ಹಕ್ಕು ಇದೆ ಎಂಬ ಬಗ್ಗೆ;

(ಬಿ) ಅಂಗವಿಕಲ ವ್ಯಕ್ತಿಗಳ ಪುನರ್‌ವಸತಿಗಾಗಿ ಕೆಲಸ ಮಾಡುತ್ತಿರುವ ಹತ್ತಿರದ ಸಂಸ್ಥೆಯ ಅಥವಾ ಸಂಘಸಂಸ್ಥೆಯ ವಿವರಗಳನ್ನು ನೀಡುವ ಬಗ್ಗೆ;

(ಸಿ) ಉಚಿತ ಕಾನೂನು ನೆರವು ಪಡೆಯಲು ಇರುವ ಹಕ್ಕಿನ ಬಗ್ಗೆ; ಮತ್ತು

(ಡಿ) ಅಂಥ ಅಪರಾಧದ ಬಗ್ಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅಂಥ ಅಪರಾಧಗಳಿಗೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ದೂರನ್ನು ದಾಖಲಿಸುವುದಕ್ಕೆ ಇರುವ ಹಕ್ಕಿನ ಬಗ್ಗೆ

– ಮಾಹಿತಿಯನ್ನು ನೀಡತಕ್ಕದ್ದು:

ಪರಂತು, ಸಂಜ್ಞೇಯ ಅಪರಾಧವನ್ನು ಮಾಡಿರುವುದರ ಬಗ್ಗೆ ಪೊಲೀಸ್ ಅಧಿಕಾರಿಯು ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಕಾನೂನಿಗೆ ಅನುಸಾರವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯುತ್ತದೆಂದು ಈ ಪ್ರಕರಣದಲ್ಲಿರುವ ಯಾವುದನ್ನೂ ಪೊಲೀಸ್ ಅಧಿಕಾರಿಯು ಯಾವುದೇ ರೀತಿಯಲ್ಲೂ ಅರ್ಥೈಸತಕ್ಕದ್ದಲ್ಲ.

(5) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ, ಆರೋಪಿತ ಕೃತ್ಯವು ಅಥವಾ ವರ್ತನೆಯು ಭಾರತ ದಂಡ ಸಂಹಿತೆ, 1860 (1860ರ 45)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಪರಾಧವೆಂದು ಕಂಡುಬಂದರೆ, ಅವರು, ಈ ವಿಷಯದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರಿಗೆ ಅಥವಾ ಸಂದರ್ಭಾನುಸಾರ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ರವರಿಗೆ ದೂರನ್ನು ರವಾನಿಸಬಹುದು.

8. **ರಕ್ಷಣೆ ಮತ್ತು ಸುರಕ್ಷತೆ.–** (1) ಯಾವುದೇ ಅಪಾಯ ಸಂಭವದ, ಸಶಸ್ತ್ರ ಸಂಘರ್ಷದ, ಜನೋಪಕಾರದ ತುರ್ತು ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ನೈಸರ್ಗಿಕ ವಿಕೋಪಗಳಂತಹ

ಸನ್ನಿವೇಶಗಳಲ್ಲಿ ಅಂಗವಿಕಲ ವ್ಯಕ್ತಿಗಳು ಇತರರಂತೆಯೇ ಸಮಾನವಾದ ರಕ್ಷಣೆಯನ್ನು ಮತ್ತು ಸುರಕ್ಷತೆಯನ್ನು ಹೊಂದಿರತಕ್ಕದ್ದು.

(2) ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರವು ಮತ್ತು ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರವು, ಅಂಗವಿಕಲ ವ್ಯಕ್ತಿಗಳ ಸುರಕ್ಷತೆ ಮತ್ತು ರಕ್ಷಣೆಗಾಗಿ ವಿಪತ್ತು ನಿರ್ವಹಣೆ ಅಧಿನಿಯಮ, 2005 (2005ರ 53) ರ 2ನೇ ಪ್ರಕರಣದ (ಇ) ಖಂಡದಲ್ಲಿ ಹೇಳಿರುವಂತೆ ತಮ್ಮ ವಿಪತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ಅಂಗವಿಕಲ ವ್ಯಕ್ತಿಗಳು ಭಾಗಿಯಾಗುವುದನ್ನು ಖಚಿತಪಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ವಿಪತ್ತು ನಿರ್ವಹಣಾ ಅಧಿನಿಯಮ, 2005 (2005ರ 53)ರ 25ನೇ ಪ್ರಕರಣದ ಮೇರೆಗೆ ರಚಿತವಾದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜಿಲ್ಲೆಯಲ್ಲಿ ಇರುವ ಅಂಗವಿಕಲ ವ್ಯಕ್ತಿಗಳ ವಿವರಗಳ ದಾಖಲೆಯನ್ನು ಇಡತಕ್ಕದ್ದು ಮತ್ತು ಅಂಥ ವ್ಯಕ್ತಿಗಳು ಯಾವುದೇ ಅಪಾಯದ ಸನ್ನಿವೇಶಗಳಲ್ಲಿ ಅವುಗಳನ್ನು ಎದುರಿಸಿ ನಿಲ್ಲಲು ಯಾವ ರೀತಿ ಸಿದ್ಧರಾಗಿರಬೇಕು ಎಂಬ ಮಾಹಿತಿಯನ್ನು ತಿಳಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(4) ಯಾವುದೇ ಅಪಾಯ ಸಂಭವ, ಸಶಸ್ತ್ರ ಸಂಘರ್ಷ ಅಥವಾ ನೈಸರ್ಗಿಕ ವಿಪತ್ತಿನಂತಹ ಯಾವುದೇ ಸನ್ನಿವೇಶಗಳ ನಂತರದ ಪುನರ್‌ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಕೊಂಡ ಪ್ರಾಧಿಕಾರಗಳು ಈ ಬಗ್ಗೆ ಸಂಬಂಧಪಟ್ಟ ರಾಜ್ಯ ಅಂಗವಿಕಲರ ಆಯುಕ್ತರೊಂದಿಗೆ ಸಮಾಲೋಚಿಸಿ ಅಂಗವಿಕಲರಿಗೆ ಸುಲಭ ಸಾಧ್ಯವಾಗಬಹುದಾದ ಅಡಚಣೆರಹಿತವಾದ ಸೌಕರ್ಯಗಳನ್ನು ಒದಗಿಸುವಂಥ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

**9. ಮನೆ ಮತ್ತು ಕುಟುಂಬ.–** (1) ಅಂಗವಿಕಲ ಮಗುವಿನ ಸಂಪೂರ್ಣ ಒಳಿತಿಗಾಗಿ, ಅಗತ್ಯವೆನಿಸಿದರೆ, ಸಕ್ಷಮ ನ್ಯಾಯಾಲಯದ ಆದೇಶದ ಹೊರತು, ಅಂಗವಿಕಲತೆಯ ಆಧಾರದ ಮೇಲೆ ಆ ಮಗುವನ್ನು ಅದರ ಪೋಷಕರಿಂದ ಪ್ರತ್ಯೇಕಿಸತಕ್ಕದ್ದಲ್ಲ.

(2) ಅಂಗವಿಕಲ ಮಗುವನ್ನು ಪಾಲನೆ ಪೋಷಣೆ ಮಾಡುವುದಕ್ಕೆ ಪೋಷಕರಿಗೆ ಸಾಧ್ಯವಾಗದಿದ್ದರೆ, ಸಕ್ಷಮ ನ್ಯಾಯಾಲಯವು ಅಂಥ ಮಗುವನ್ನು ಅದರ ಹತ್ತಿರದ ಸಂಬಂಧಿಗಳೊಂದಿಗೆ ಇರಬೇಕೆಂದು ಆದೇಶಿಸಬಹುದು. ಅದಾಗದಿದ್ದರೆ, ಆ ಮಗುವಿನ ಸಮುದಾಯದ ಕೌಟುಂಬಿಕ ವಾತಾವರಣದಲ್ಲಿ ಇರಬೇಕೆಂದು ಆದೇಶಿಸಬಹುದು. ಅಂಗವಿಕಲ ಮಗುವನ್ನು ಪಾಲನೆ ಪೋಷಣೆ ಮಾಡಲು ಸಾಧ್ಯವಾಗದಿರುವ ಅಸಾಧಾರಣ ಪ್ರಕರಣಗಳಲ್ಲಿ ಸರ್ಕಾರವು ಅಥವಾ ಸರ್ಕಾರೇತರ ಸಂಘವು ನಡೆಸುವ ಆಶ್ರಯ ಮನೆಯಲ್ಲಿ ಇರಬೇಕೆಂದು ಆದೇಶಿಸಬಹುದು.

**10. ಸಂತಾನೋತ್ಪತ್ತಿ ಹಕ್ಕುಗಳು.–** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ಸಂತಾನೋತ್ಪತ್ತಿ ಮತ್ತು ಕುಟುಂಬ ಯೋಜನೆಗೆ ಸಂಬಂಧಿಸಿದ ಸಮರ್ಪಕ ಮಾಹಿತಿಯು ಸುಲಭವಾಗಿ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು, ಆತನು ಅಥವಾ ಆಕೆಯು ಮುಕ್ತವಾದ ಸಮ್ಮತಿ ನೀಡದ ಹೊರತು, ಆತನನ್ನು/ಆಕೆಯನ್ನು ಬಂಜೆತನಕ್ಕೆ ಅವಕಾಶ ನೀಡುವ ಆ ಯಾವುದೇ ವೈದ್ಯಕೀಯ ಪ್ರಕ್ರಿಯೆಗೆ ಒಳಪಡಿಸತಕ್ಕದ್ದಲ್ಲ.

**11. ಮತದಾನವನ್ನು ಮಾಡಲು ಸುಲಭ ಸಾಧ್ಯಗೊಳಿಸುವುದು.–** (1) ಭಾರತದ ಚುನಾವಣಾ ಆಯೋಗವು ಮತ್ತು ರಾಜ್ಯ ಚುನಾವಣಾ ಆಯೋಗಗಳು, ಅಂಗವಿಕಲ ವ್ಯಕ್ತಿಗಳು ಎಲ್ಲ ಮತದಾನ ಕೇಂದ್ರಗಳಿಗೆ ಸುಲಭವಾಗಿ ಪ್ರವೇಶಿಸುವುದಕ್ಕೆ ಮತ್ತು ಅವರು ಮತದಾನ ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಎಲ್ಲ ಸಾಮಗ್ರಿಗಳು/ಪರಿಕರಗಳು ಅವರಿಗೆ ಸುಲಭವಾಗಿ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**12. ನ್ಯಾಯಕ್ಕೆ ಮುಕ್ತ ಅವಕಾಶ.–** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ಅಂಗವಿಕಲತೆಯ ಕಾರಣದಿಂದ ತಾರತಮ್ಯಕ್ಕೆ ಒಳಗಾಗದೆ ಯಾವುದೇ ನ್ಯಾಯಾಲಯಕ್ಕೆ, ನ್ಯಾಯಾಧಿಕರಣಕ್ಕೆ, ಪ್ರಾಧಿಕಾರಕ್ಕೆ, ಆಯೋಗಕ್ಕೆ ಅಥವಾ ನ್ಯಾಯಿಕ ಅಥವಾ ಅರೆ–ನ್ಯಾಯಿಕ ತನಿಖಾ ಅಧಿಕಾರ ಹೊಂದಿರುವ ಯಾವುದೇ ಇತರ ನಿಕಾಯಕ್ಕೆ ಹೋಗಿ ನ್ಯಾಯ ಪಡೆಯಲು ತನಗಿರುವ ಮುಕ್ತ ಅವಕಾಶದ ಹಕ್ಕನ್ನು ಚಲಾಯಿಸಲು ಸಮರ್ಥರಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ವಿಶೇಷವಾಗಿ ಕುಟುಂಬದಿಂದ ಬೇರೆಯಾಗಿ ಜೀವಿಸುತ್ತಿರುವ ಮತ್ತು ಉನ್ನತ ಮಟ್ಟದ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳು ತಮ್ಮ ಕಾನೂನುಬದ್ಧ ಹಕ್ಕುಗಳನ್ನು ಚಲಾಯಿಸಲು ಸೂಕ್ತ ಬೆಂಬಲವನ್ನು ಒದಗಿಸುವ ಕ್ರಮಗಳನ್ನು ತರಲು ಸಮುಚಿತ ಸರ್ಕಾರವು, ಅಗತ್ಯಕ್ರಮ ಕೈಗೊಳ್ಳತಕ್ಕದ್ದು.

(3) ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರ ಮೇರೆಗೆ ರಚಿತವಾದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳು, ತಾವು ಒದಗಿಸುವ ಯಾವುದೇ ಯೋಜನೆಯ ಕಾರ್ಯಕ್ರಮದ, ಸೌಲಭ್ಯದ ಸೇವೆಯ ಪ್ರಯೋಜನವನ್ನು ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ಸಮಾನವಾಗಿ ಪಡೆಯಲು ಸಮಂಜಸ ಹೊಂದಾಣಿಕೆ ಮಾಡುವುದೂ ಸೇರಿದಂತೆ ಈ ಬಗ್ಗೆ ಅಗತ್ಯ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(4) ಸಮುಚಿತ ಸರ್ಕಾರವು,–

(ಎ) ತನ್ನ ಎಲ್ಲಾ ಸಾರ್ವಜನಿಕ ದಸ್ತಾವೇಜುಗಳು ಅಂಗವಿಕಲರಿಗೆ ಸುಲಭಲಭ್ಯ ನಮೂನೆಗಳಲ್ಲಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು;

(ಬಿ) ಕಡತಗಳ ದಾಖಲೆ ವಿಭಾಗಗಳಿಗೆ ಅಥವಾ ದಾಖಲೆಗಳನ್ನು ನೋಂದಾಯಿಸಿಕೊಳ್ಳುವ ಕಛೇರಿಗೆ ಅಥವಾ ಯಾವುದೇ ಕಛೇರಿಗೆ ಕಡತಗಳ ಜೋಡಣೆಗೆ, ಸಂಗ್ರಹಣೆಗೆ ಮತ್ತು ದಸ್ತಾವೇಜುಗಳನ್ನು ಹಾಗೂ ಸಾಕ್ಷ್ಯವನ್ನು ಸುಲಭಲಭ್ಯ ನಮೂನೆಗಳಲ್ಲಿ ಉಲ್ಲೇಖಿಸುವುದಕ್ಕೆ ಸಾಧ್ಯವಾಗುವಂತಹ ಆವಶ್ಯಕ ಸಲಕರಣೆಯನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು; ಮತ್ತು

(ಸಿ) ಅಂಗವಿಕಲ ವ್ಯಕ್ತಿಗಳು ಪ್ರಮಾಣದ ಮೇಲೆ ಕೊಟ್ಟ ಯಾವುದೇ ಹೇಳಿಕೆಗಳನ್ನು, ವಾದ ಮಂಡನೆಗಳನ್ನು ಅಥವಾ ಅಭಿಪ್ರಾಯಗಳನ್ನು ಅವರು ಇಚ್ಛಿಸುವ ಸಂವಹನ ಭಾಷೆಯಲ್ಲಿ, ರೀತಿಯಲ್ಲಿ ದಾಖಲಿಸಲು ಅನುವು ಮಾಡಿಕೊಡುವಂತಹ ಎಲ್ಲ ಅವಶ್ಯಕ ಸೌಲಭ್ಯಗಳನ್ನು ಅಥವಾ ಸಲಕರಣೆ ಲಭ್ಯವಾಗುವಂತೆ ಮಾಡಲು

–ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

13. **ಕಾನೂನು ಪ್ರಕಾರ ಅರ್ಹತೆ.–** (1) ಅಂಗವಿಕಲ ವ್ಯಕ್ತಿಗಳು ಇತರರಂತೆಯೇ ಸಮಾನವಾದ ರೀತಿಯಲ್ಲಿ ಚರ ಅಥವಾ ಸ್ಥಿರ ಸ್ವತ್ತಿನ ಮಾಲೀಕರಾಗುವುದಕ್ಕೆ ಅಥವಾ ವಂಶಪಾರಂಪರ್ಯವಾಗಿ ಹೊಂದುವುದಕ್ಕೆ, ತಮ್ಮ ಹಣಕಾಸು ವ್ಯವಹಾರಗಳನ್ನು ನಿಯಂತ್ರಿಸುವುದಕ್ಕೆ ಹಾಗೂ ಬ್ಯಾಂಕುಗಳಿಂದ ಸಾಲಗಳನ್ನು ಪಡೆಯುವುದಕ್ಕೆ, ಅಡಮಾನಗಳನ್ನು ಮಾಡುವುದನ್ನು ಅಥವಾ ಪಡೆಯುವುದನ್ನು ಮತ್ತು ಬೇರೆ ರೀತಿಯ ಹಣಕಾಸು ಸಾಲ ಪಡೆಯುವುದನ್ನು ಸಮುಚಿತ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳು ತಮ್ಮ ಜೀವನದ ಎಲ್ಲ ವಿಷಯಗಳಲ್ಲೂ ಇತರರೊಂದಿಗೆ ಸಮಾನ ಆಧಾರದ ಮೇಲೆ ಕಾನೂನು ಪ್ರಕಾರ ಅರ್ಹತೆಯನ್ನು ಹೊಂದಿರುವುದನ್ನು ಮತ್ತು ಎಲ್ಲ ಕಡೆಯೂ ಕಾನೂನಿನ ಮುಂದೆ ಯಾರೇ ಇತರ ವ್ಯಕ್ತಿಯಂತೆಯೇ ಸಮಾನ ಮಾನ್ಯತೆಯ ಹಕ್ಕು ಹೊಂದಿರುವುದನ್ನು ಸಮುಚಿತ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(3) ನಿರ್ದಿಷ್ಟ ಹಣಕಾಸಿನ, ಸ್ವತ್ತಿನ ಅಥವಾ ಇತರ ಆರ್ಥಿಕ ವ್ಯವಹಾರದಲ್ಲಿ ಅಂಗವಿಕಲ ವ್ಯಕ್ತಿಯೊಂದಿಗೆ ಬೆಂಬಲ ಒದಗಿಸಿದ ಮತ್ತು ಅಂಗವಿಕಲ ವ್ಯಕ್ತಿಯ ನಡುವಣ ಹಿತಾಸಕ್ತಿ ಬಗ್ಗೆ ಸಂಘರ್ಷ ಉಂಟಾದಾಗ, ಅಂಥ ಬೆಂಬಲ ನೀಡಿದ ವ್ಯಕ್ತಿಯು, ಅಂತಹ ವ್ಯವಹಾರದಲ್ಲಿ ಅಂಗವಿಕಲ ವ್ಯಕ್ತಿಗೆ ಬೆಂಬಲ ಒದಗಿಸುವುದನ್ನು ನಿಲ್ಲಿಸತಕ್ಕದ್ದು:

ಪರಂತು, ಅಂಗವಿಕಲ ವ್ಯಕ್ತಿಗೆ ಬೆಂಬಲ ನೀಡುವ ವ್ಯಕ್ತಿಯು ರಕ್ತಸಂಬಂಧದಿಂದ, ವಿವಾಹ ಸಂಬಂಧದಿಂದ ಅಥವಾ ದತ್ತು ತೆಗೆದುಕೊಂಡಿದ್ದರಿಂದಾದ ಸಂಬಂಧದಿಂದ ಸಂಬಂಧಿ ಎಂಬ ಆಧಾರದ ಮೇಲೆ ಮಾತ್ರವೇ ಹಿತಾಸಕ್ತಿಯಲ್ಲಿ ಸರಿ ಹೊಂದಾಣಿಕೆ ಆಗದ್ದು ಎಂದು ಪೂರ್ವಭಾವನೆ ಮಾಡತಕ್ಕದ್ದಲ್ಲ.

(4) ಅಂಗವಿಕಲ ವ್ಯಕ್ತಿಯು ಯಾವುದೇ ಬೆಂಬಲದ ಏರ್ಪಾಡುಗಳನ್ನು ಬದಲಾಯಿಸಬಹುದು, ಮಾರ್ಪಾಡು ಮಾಡಬಹುದು ಮತ್ತು ತೆಗೆದು ಹಾಕಬಹುದು ಹಾಗೂ ಮತ್ತೊಬ್ಬರ ಬೆಂಬಲವನ್ನು ಪಡೆದುಕೊಳ್ಳಬಹುದು:

ಪರಂತು, ಅಂಥ ಬದಲಾವಣೆ, ಮಾರ್ಪಾಡು ಮಾಡುವುದನ್ನು ಮತ್ತು ತೆಗೆದು ಹಾಕುವುದನ್ನು ಇನ್ನು ಮುಂದೆ ಮಾಡಿಕೊಳ್ಳತಕ್ಕದ್ದು ಮತ್ತು ಮೇಲೆ ಹೇಳಿದ ಬೆಂಬಲ ವ್ಯವಸ್ಥೆ ಬಗ್ಗೆ ಅಂಗವಿಕಲ ವ್ಯಕ್ತಿಯು ಯಾರೇ ಮೂರನೇ ಪಕ್ಷಕಾರರೊಂದಿಗೆ ಮಾಡಿಕೊಂಡಿರುವ ವ್ಯವಹಾರಗಳು ಆ ನಿಮಿತ್ತ ಅನೂರ್ಜಿತವಾಗತಕ್ಕದ್ದಲ್ಲ.

(5) ಅಂಗವಿಕಲ ವ್ಯಕ್ತಿಗೆ ಬೆಂಬಲವನ್ನು ಒದಗಿಸುವ ಯಾರೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಯ ಮೇಲೆ ಅನುಚಿತ ಪ್ರಭಾವವನ್ನು ಬೀರತಕ್ಕದ್ದಲ್ಲ ಮತ್ತು ಅವನ ಅಥವಾ ಅವಳ ಇಚ್ಛಾ ಸ್ವಾತಂತ್ರ್ಯವನ್ನು, ಘನತೆಯನ್ನು ಮತ್ತು ಗೌಪ್ಯತೆಯನ್ನು ಗೌರವಿಸತಕ್ಕದ್ದು.

**14. ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಿಂದ ಬೆಂಬಲಕ್ಕೆ ಅವಕಾಶ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ, ರಾಜ್ಯಸರ್ಕಾರವು ಅಧಿಸೂಚಿಸಿದ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಯಾವುದೇ ಗೊತ್ತುಪಡಿಸಿದ ಪ್ರಾಧಿಕಾರಕ್ಕೆ, ಸಾಕಷ್ಟು ಮತ್ತು ಸಮರ್ಪಕ ಬೆಂಬಲವನ್ನು ಯಾವ ಅಂಗವಿಕಲ ವ್ಯಕ್ತಿಗೆ ಒದಗಿಸಲಾಗಿದೆಯೋ ಆ ಅಂಗವಿಕಲ ವ್ಯಕ್ತಿಯು, ಕಾನೂನುಸಮ್ಮತ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಅಸಮರ್ಥನಾಗಿರುವನೆಂದು ಕಂಡುಬಂದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ವ್ಯಕ್ತಿಯೊಂದಿಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ, ಸಮಾಲೋಚಿಸಿ ಅಂಥ ಅಂಗವಿಕಲ ವ್ಯಕ್ತಿಯ ಪರವಾಗಿ ಕಾನೂನುಸಮ್ಮತ ನಿರ್ಣಯಗಳನ್ನು ತೆಗೆದುಕೊಳ್ಳುವ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯು ಪರಿಮಿತ ಪಾಲಕತ್ವದ ಇನ್ನಷ್ಟು ಬೆಂಬಲ ನೀಡುವುದಕ್ಕೆ ಅವಕಾಶ ಕಲ್ಪಿಸುವ ಆದೇಶ ಹೊರಡಿಸಬಹುದು:

ಪರಂತು, ಜಿಲ್ಲಾ ನ್ಯಾಯಾಲಯ ಅಥವಾ ಸಂದರ್ಭಾನುಸಾರ ಗೊತ್ತುಪಡಿಸಿದ ಪ್ರಾಧಿಕಾರವು, ಅಂಥ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗೆ ಸಂಪೂರ್ಣ ಬೆಂಬಲವನ್ನು ನೀಡಬಹುದು ಅಥವಾ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯು ಬೆಂಬಲಕ್ಕೆ ಆದೇಶವನ್ನು ಆಗಾಗ ನೀಡಬೇಕಾಗಿದ್ದರೆ, ಆ

ಯಾವುದೇ ಸಂದರ್ಭದಲ್ಲಿ, ಆ ಬೆಂಬಲವನ್ನು ನೀಡುವ ಬಗೆಗಿನ ತೀರ್ಮಾನವನ್ನು ಸಂದರ್ಭಾನುಸಾರ, ನ್ಯಾಯಾಲಯವು ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ಪುನರ್ ಪುನರಾವಲೋಕನ ಮಾಡತಕ್ಕದ್ದು ಹಾಗೂ ಒದಗಿಸಬೇಕಾದ ಬೆಂಬಲದ ಬಗೆಯನ್ನು ಮತ್ತು ವಿಧಾನವನ್ನು ನಿರ್ಧರಿಸತಕ್ಕದ್ದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಿಂದ ಬೆಂಬಲಕ್ಕೆ ವ್ಯವಸ್ಥೆ" ಎಂದರೆ, ಅಂಥ ವ್ಯಕ್ತಿಯ ಮತ್ತು ಅಂಗವಿಕಲ ವ್ಯಕ್ತಿಯ ನಡುವಣ ಪರಸ್ಪರ ಹೊಂದಾಣಿಕೆಯಿಂದ ಮತ್ತು ನಂಬಿಕೆಯಿಂದ ಜಂಟಿಯಾಗಿ ನಿರ್ಣಯ ತೆಗೆದುಕೊಳ್ಳುವ ವ್ಯವಸ್ಥೆ, ಇಂಥ ವ್ಯವಸ್ಥೆಯು ನಿರ್ದಿಷ್ಟ ಅವಧಿಗೆ ಮತ್ತು ನಿರ್ದಿಷ್ಟ ನಿರ್ಣಯಕ್ಕೆ ಮತ್ತು ಸನ್ನಿವೇಶಕ್ಕೆ ಸೀಮಿತವಾಗಿರತಕ್ಕದ್ದು ಮತ್ತು ಜಂಟಿ ನಿರ್ಣಯವನ್ನು ಅಂಗವಿಕಲ ವ್ಯಕ್ತಿಯ ಇಚ್ಛೆಗೆ ಅನುಸಾರವಾಗಿ ಕಾರ್ಯಗತಗೊಳಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಯಾವುದೇ ಉಪಬಂಧದ ಮೇರೆಗೆ ಅಂಗವಿಕಲ ವ್ಯಕ್ತಿಯ ಬೆಂಬಲಕ್ಕೆಂದು ನೇಮಕಗೊಂಡ ಪ್ರತಿಯೊಬ್ಬ ಜವಾಬ್ದಾರಿಯುಳ್ಳ ಅಂಥ ವ್ಯಕ್ತಿಯು ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಾನೆಂದು ಭಾವಿಸತಕ್ಕದ್ದು.

(3) ಗೊತ್ತುಪಡಿಸಿದ ಪ್ರಾಧಿಕಾರವು ಕಾನೂನಿನ ಅನ್ವಯ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯನ್ನು ನೇಮಕ ಮಾಡಿರುವ ನಿರ್ಣಯದಿಂದ ಬಾಧಿತನಾದ ಯಾರೇ ಅಂಗವಿಕಲ ವ್ಯಕ್ತಿಯು, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿರಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

**15. ಬೆಂಬಲ ನೀಡಲು ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು.-** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ತಮಗೆ ಕಾನೂನು ಪ್ರಕಾರ ಇರುವ ಅರ್ಹತೆ ಹಕ್ಕನ್ನು ಚಲಾಯಿಸಲು ನೆರವಾಗುವುದಕ್ಕಾಗಿ ಸಮುದಾಯವನ್ನು ಸಂಘಟಿಸಲು ಮತ್ತು ಸಾಮಾಜಿಕ ಅರಿವನ್ನುಂಟು ಮಾಡಲು ಒಂದು ಅಥವಾ ಒಂದಕ್ಕಿಂಥ ಹೆಚ್ಚಿನ ಪ್ರಾಧಿಕಾರಿಗಳನ್ನು ಗೊತ್ತುಪಡಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಗೊತ್ತುಪಡಿಸಿದ ಪ್ರಾಧಿಕಾರವು ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಂಗವಿಕಲ ವ್ಯಕ್ತಿಗಳು ಕಾನೂನು ಪ್ರಕಾರ ತಮಗಿರುವ ಅರ್ಹತೆ ಹಕ್ಕನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಬೆಂಬಲದ ಏರ್ಪಾಡುಗಳನ್ನು ಮಾಡುವುದಕ್ಕೆ ಮತ್ತು ಅವರಿಗೆ ಅಗತ್ಯವಿರಬಹುದಾದ ಹೆಚ್ಚಿನ ಬೆಂಬಲಗಳನ್ನು ಒದಗಿಸುವುದಕ್ಕೆ ಯಾವುದೇ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ III

## ಶಿಕ್ಷಣ

**16. ಶಿಕ್ಷಣ ಸಂಸ್ಥೆಗಳ ಕರ್ತವ್ಯ.-** ಸಮುಚಿತ ಸರ್ಕಾರದಿಂದ ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ಧನಸಹಾಯವನ್ನು ಅಥವಾ ಮಾನ್ಯತೆಯನ್ನು ಪಡೆದಿರುವ ಎಲ್ಲ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ಮಕ್ಕಳಿಗೆ ಸಮ್ಮಿಳಿತ ಶಿಕ್ಷಣ ನೀಡುವುದಕ್ಕೆ ಪ್ರಯತ್ನಿಸತಕ್ಕದ್ದು ಮತ್ತು ಆ ನಿಟ್ಟಿನಲ್ಲಿ,-

(i) ಅಂಗವಿಕಲ ಮಕ್ಕಳೆಂದು ತಾರತಮ್ಯ ಮಾಡದೇ ಅವರಿಗೆ ಶಾಲೆಗೆ ಪ್ರವೇಶ ನೀಡತಕ್ಕದ್ದು ಮತ್ತು ಅವರು ಇತರ ಮಕ್ಕಳೊಂದಿಗೆ ಸಮಾನವಾಗಿ ಶಿಕ್ಷಣ ಪಡೆಯಲು ಹಾಗೂ ಕ್ರೀಡೆ ಮತ್ತು ಮನರಂಜನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸತಕ್ಕದ್ದು;

(ii) ಕಟ್ಟಡವನ್ನು, ಕ್ಯಾಂಪಸ್ ಅನ್ನು ನಿರ್ಮಿಸತಕ್ಕದ್ದು ಮತ್ತು ಅವರಿಗೆ ವಿವಿಧ ಸೌಲಭ್ಯಗಳು ಲಭ್ಯವಾಗುವಂತೆ ಮಾಡತಕ್ಕದ್ದು;

(iii) ಆಯಾ ಮಕ್ಕಳ ಅಗತ್ಯಗಳಿಗೆ ಅನುಸಾರವಾಗಿ ಸಮಂಜಸ ಹೊಂದಾಣಿಕೆ ಕಲ್ಪಿಸತಕ್ಕದ್ದು;

(iv) ಮಕ್ಕಳು ವೈಯಕ್ತಿಕವಾಗಿ ಇತರರೊಡನೆ ಸಂಪೂರ್ಣವಾಗಿ ಬೆರೆಯುವ ಗುರಿಗೆ ಸುಸಂಗತವಾದ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಡುವಂಥ ಪರಿಸರದಲ್ಲಿ ವ್ಯಕ್ತಿಗತ ಅಥವಾ ಅನ್ಯಥಾ ಮತ್ತು ಅವಶ್ಯಕ ಬೆಂಬಲವನ್ನು ಒದಗಿಸತಕ್ಕದ್ದು;

(v) ಕುರುಡು ಅಥವಾ ಕಿವುಡು ಅಥವಾ ಇವೆರಡೂ ವಿಕಲತೆ ಇರುವ ವ್ಯಕ್ತಿಗಳಿಗೆ ಶಿಕ್ಷಣವನ್ನು ಅತ್ಯಂತ ಸಮುಚಿತವಾದ ಭಾಷೆಗಳಲ್ಲಿ ಮತ್ತು ವಿಧಾನಗಳಲ್ಲಿ ಮತ್ತು ಸಂವಹನ ಸಾಧನಗಳಲ್ಲಿ ಕೊಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(vi) ಸಾಧ್ಯವಾದಷ್ಟು ಬೇಗನೆ ಮಕ್ಕಳಲ್ಲಿ ಇರುವ ನಿರ್ದಿಷ್ಟ ಕಲಿಕಾ ಅಸಮರ್ಥತೆಗಳನ್ನು ಪತ್ತೆ ಮಾಡತಕ್ಕದ್ದು ಮತ್ತು ಅವುಗಳನ್ನು ನಿವಾರಿಸಲು ಸೂಕ್ತ ಬೋಧನೆ ಮತ್ತು ಇತರ ಕ್ರಮಗಳ ಸಹಿತ ಕೈಗೊಳ್ಳತಕ್ಕದ್ದು;

(vii) ಪ್ರತಿಯೊಬ್ಬ ಅಂಗವಿಕಲ ವಿದ್ಯಾರ್ಥಿಯು ಶಿಕ್ಷಣದಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ, ಅದರಲ್ಲಿನ ಸಾಧನೆಯ ಘಟ್ಟಗಳ ಬಗ್ಗೆ ಮತ್ತು ಶಿಕ್ಷಣವನ್ನು ಪೂರ್ಣಪ್ರಮಾಣದಲ್ಲಿ ಮುಗಿಸುವುದರ ಸಂಬಂಧವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು;

(viii) ಅಂಗವಿಕಲ ಮಕ್ಕಳಿಗೆ ಮತ್ತು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ಮಕ್ಕಳ ಪರಿಚಾರಕನಿಗೆ ಕೂಡ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

17. **ಸಮ್ಮಿಳಿತ ಶಿಕ್ಷಣಕ್ಕೆ ಉತ್ತೇಜಿಸಲು ಮತ್ತು ಅದಕ್ಕೆ ಅನುಕೂಲ ಕಲ್ಪಿಸಲು ನಿರ್ದಿಷ್ಟ ಕ್ರಮಗಳು.**- ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು 16ನೇ ಪ್ರಕರಣದ ಉದ್ದೇಶಕ್ಕಾಗಿ ಈ ಕೆಳಕಂಡ ಕ್ರಮಗಳನ್ನು, ಎಂದರೆ:-

(ಎ) ಅಂಗವಿಕಲ ಮಕ್ಕಳನ್ನು ಗುರುತಿಸುವುದಕ್ಕಾಗಿ, ಶಾಲೆಗೆ ಹೋಗುವ ಮಕ್ಕಳ ಸಮೀಕ್ಷೆಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನಡೆಸತಕ್ಕದ್ದು ಹಾಗೂ ಅವರ ವಿಶೇಷ ಅಗತ್ಯತೆಗಳನ್ನು ಕಂಡುಕೊಳ್ಳುವುದಕ್ಕಾಗಿ ಮತ್ತು ಅವುಗಳನ್ನು ಎಷ್ಟರಮಟ್ಟಿಗೆ ಪೂರೈಸಬಹುದೆಂಬ ಬಗ್ಗೆ:

ಪರಂತು, ಮೊದಲ ಸಮೀಕ್ಷೆಯನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ನಡೆಸುವ ಬಗ್ಗೆ;

(ಬಿ) ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸ್ಥಾಪಿಸುವ ಬಗ್ಗೆ;

(ಸಿ) ಸಂಜ್ಞೆ ಭಾಷೆಯಲ್ಲಿ ಮತ್ತು ಬ್ರೈಲ್ ಲಿಪಿಯಲ್ಲಿ ವಿದ್ಯಾರ್ಹತೆ ಹೊಂದಿರುವ ಅಂಗವಿಕಲ ಶಿಕ್ಷಕರನ್ನು ಮತ್ತು ಬೌದ್ಧಿಕ ಅಂಗವಿಕಲತೆಯ ಮಕ್ಕಳಿಗೆ ಬೋಧಿಸಲು ತರಬೇತಿ ಹೊಂದಿರುವ ಶಿಕ್ಷಕರ ಸಹ ಒಳಗೊಂಡಂತೆ ಅಂಥ ಶಿಕ್ಷಕರನ್ನು ತರಬೇತಿಗೊಳಿಸುವ ಬಗ್ಗೆ ಮತ್ತು ನಿಯೋಜಿಸುವ ಬಗ್ಗೆ;

(ಡಿ) ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ಸಮ್ಮಿಳಿತ ಶಿಕ್ಷಣಕ್ಕೆ ನೆರವಾಗಲು ವೃತ್ತಿ ನಿರತರಿಗೆ ಮತ್ತು ಸಿಬ್ಬಂದಿಗೆ ತರಬೇತಿ ನೀಡುವ ಬಗ್ಗೆ;

(ಇ) ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ನೆರವಾಗಲು ಸಾಕಷ್ಟು ಸಂಖ್ಯೆಯಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ;

(ಎಫ್) ಮಾತನಾಡುವುದರಲ್ಲಿ, ಸಂವಹನದಲ್ಲಿ ಅಥವಾ ಭಾಷೆಯ ಬಳಕೆಯಲ್ಲಿ ದೌರ್ಬಲ್ಯ ಇರುವ ವ್ಯಕ್ತಿಗಳು ತಮ್ಮ ದಿನನಿತ್ಯದ ಸಂವಹನದ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು

ಮತ್ತು ಅವರು ತಮ್ಮ ಸಮುದಾಯ ಹಾಗೂ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮದೇ ಆದ ಕೊಡುಗೆಯನ್ನು ನೀಡುವುದು ಅವರಿಗೆ ಸಾಧ್ಯವಾಗುವಂತೆ ಮಾಡಲು ಅವರಾಡುವ ಮಾತುಗಳ ಬಳಕೆಗೆ ಇಂಬು ಕೊಡುವಂತಹ ಸಂಪರ್ಕ ಸಾಧನಗಳು ಮತ್ತು ಸಾಧನಗಳು, ಬ್ರೈಲ್ ಮತ್ತು ಸಂಜ್ಞೆ ಭಾಷೆ ಸೇರಿದಂತೆ ವರ್ಧಿಸುವ ಮತ್ತು ಪರ್ಯಾಯವಾದ ಸಮರ್ಪಕ ವಿಧಾನಗಳ ಬಳಕೆಗೆ ಉತ್ತೇಜನ ನೀಡುವ ಬಗ್ಗೆ;

(ಜಿ) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಗಳಿರುವ ವಿದ್ಯಾರ್ಥಿಗಳಿಗೆ ಹದಿನೆಂಟು ವರ್ಷ ವಯಸ್ಸಿನವರೆಗೆ ಉಚಿತವಾಗಿ ಪುಸ್ತಕಗಳನ್ನು, ಇತರ ಕಲಿಕಾ ಸಾಮಗ್ರಿಗಳನ್ನು ಮತ್ತು ಸೂಕ್ತ ರೀತಿಯ ಸಹಾಯಕ ಸಾಧನೋಪಾಯಗಳನ್ನು ಒದಗಿಸುವ ಬಗ್ಗೆ;

(ಹೆಚ್) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯಿರುವ ವಿದ್ಯಾರ್ಥಿಗಳಿಗೆ ಅರ್ಹ ಪ್ರಕರಣಗಳಲ್ಲಿ ವಿದ್ಯಾರ್ಥಿವೇತನಗಳನ್ನು ನೀಡುವ ಬಗ್ಗೆ;

(ಐ) ಅಂಗವಿಕಲ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ, ಅವರು ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಯನ್ನು ಬರೆದು ಪೂರ್ಣಗೊಳಿಸುವುದಕ್ಕಾಗಿ ಅವಶ್ಯವಿರುವಂಥ ಹೆಚ್ಚಿನ ಸಮಯವನ್ನು ಅವರಿಗೆ ನೀಡುವುದು, ದೃಷ್ಟಿಮಾಂದ್ಯರಿಗೆ ಪರೀಕ್ಷೆ ಬರೆಯಲು ಬರಹಗಾರನ ಅಥವಾ ಲಿಪಿಕಾರನ ಸೌಲಭ್ಯವನ್ನು ಒದಗಿಸುವುದು, ಪಠ್ಯಕ್ರಮದಲ್ಲಿ ದ್ವಿತೀಯ ಮತ್ತು ತೃತೀಯ ಭಾಷೆ ವ್ಯಾಸಂಗಗಳಿಗೆ ವಿನಾಯಿತಿ ನೀಡುವುದು ಮುಂತಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡುವ ಬಗ್ಗೆ;

(ಜೆ) ಕಲಿಕೆಯಲ್ಲಿ ಸುಧಾರಣೆ ತಂದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸಂಶೋಧನೆಗೆ ಉತ್ತೇಜನ ನೀಡುವ ಬಗ್ಗೆ; ಮತ್ತು

(ಕೆ) ಅಗತ್ಯವಿರಬಹುದಾದ ಯಾವುದೇ ಇತರ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ

– ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**18. ವಯಸ್ಕರ ಶಿಕ್ಷಣ.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ವಯಸ್ಕರ ಶಿಕ್ಷಣ ಮತ್ತು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳಲ್ಲಿ ಇತರರೊಂದಿಗೆ ಅವರೂ ಕೂಡ ಸಮಾನವಾಗಿ ಭಾಗವಹಿಸುವುದನ್ನು ಉತ್ತೇಜಿಸುವುದಕ್ಕೆ, ರಕ್ಷಿಸುವುದಕ್ಕೆ ಮತ್ತು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ IV

## ಕೌಶಲ್ಯ ಸಂವರ್ಧನೆ ಮತ್ತು ಉದ್ಯೋಗ

**19. ವೃತ್ತಿ ತರಬೇತಿ ಮತ್ತು ಸ್ವಯಂ ಉದ್ಯೋಗ.–** (1) ಸಮುಚಿತ ಸರ್ಕಾರವು ವಿಶೇಷವಾಗಿ ಅಂಗವಿಕಲ ವ್ಯಕ್ತಿಗಳಿಗೆ ವೃತ್ತಿಪರ ತರಬೇತಿ ಮತ್ತು ಸ್ವಯಂ ಉದ್ಯೋಗ ನೀಡುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಉದ್ಯೋಗಕ್ಕೆ ಅನುಕೂಲ ಕಲ್ಪಿಸಲು ಬೆಂಬಲ ನೀಡಲು ರಿಯಾಯಿತಿ ದರಗಳಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ತಿಳಿಸಿದಂತೆ ರೂಪಿಸಿದ ಯೋಜನೆಗಳು ಮತ್ತು ಕಾರ್ಯಕ್ರಮಗಳು,–

(ಎ) ಎಲ್ಲ ಪ್ರಚಲಿತ ವಿದ್ಯುಕ್ತ ಮತ್ತು ವಿದ್ಯುಕ್ತವಲ್ಲದ ವೃತ್ತಿಪರ ತರಬೇತಿ ಮತ್ತು ಕೌಶಲ ತರಬೇತಿ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಅಂಗವಿಕಲ ವ್ಯಕ್ತಿಗಳೂ ಒಳಗೊಳ್ಳುವುದಕ್ಕೆ;

(ಬಿ) ಅಂಗವಿಕಲ ವ್ಯಕ್ತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ತರಬೇತಿ ಪಡೆದುಕೊಳ್ಳುವುದಕ್ಕೆ ಸಾಕಷ್ಟು ಬೆಂಬಲ ಮತ್ತು ಅನುಕೂಲಗಳೂ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ;

(ಸಿ) ವಿಕಸನದಲ್ಲಿ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಕುಂಠಿತವಾದವರು, ಬಹುವಿಧ ಅಂಗವಿಕಲತೆ ಇರುವವರು ಮತ್ತು ಆಟಿಸಂ ಪೀಡಿತ ಅಂಗವಿಕಲರಿಗೆ ಮಾರುಕಟ್ಟೆಯೊಂದಿಗೆ ಸಕ್ರಿಯ ಸಂಪರ್ಕಗಳನ್ನು ಒದಗಿಸುವಂತಹ ಪ್ರತ್ಯೇಕವಾದ ಕೌಶಲ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕೆ;

(ಡಿ) ರಿಯಾಯಿತಿ ದರಗಳಲ್ಲಿ ಸಣ್ಣ ಸಾಲಗಳು ಮತ್ತು ಕಿರು ಸಾಲಗಳನ್ನು ನೀಡುವುದಕ್ಕೆ;

(ಇ) ಅಂಗವಿಕಲ ವ್ಯಕ್ತಿಗಳು ತಯಾರು ಮಾಡಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡುವುದಕ್ಕೆ; ಮತ್ತು

(ಎಫ್) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ದತ್ತಾಂಶ ಸೇರಿದಂತೆ ಕೌಶಲ್ಯ ತರಬೇತಿಯಲ್ಲಿ ಮತ್ತು ಸ್ವಯಂ ಉದ್ಯೋಗದಲ್ಲಿ ಆಗಿರುವ ಪ್ರಗತಿಯ ಒಟ್ಟುಗೂಡಿಸದ ದತ್ತಾಂಶವನ್ನು ನಿರ್ವಹಿಸುವುದಕ್ಕೆ

– ಅವಕಾಶ ಕಲ್ಪಿಸತಕ್ಕದ್ದು.

**20. ಉದ್ಯೋಗದಲ್ಲಿ ತಾರತಮ್ಯ ಮಾಡಕೂಡದು.**– (1) ಯಾವುದೇ ಸರ್ಕಾರಿ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಯಾರೇ ಅಂಗವಿಕಲ ವ್ಯಕ್ತಿಗೆ ತಾರತಮ್ಯ ಮಾಡತಕ್ಕದ್ದಲ್ಲ:

ಪರಂತು, ಸಮುಚಿತ ಸರ್ಕಾರವು ಯಾವುದೇ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು ಅಧಿಸೂಚನೆ ಮೂಲಕ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಈ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಯಾವುದೇ ಸಂಸ್ಥೆಗೆ ವಿನಾಯಿತಿ ನೀಡಬಹುದು.

(2) ಪ್ರತಿಯೊಂದು ಸರ್ಕಾರಿ ಸಂಸ್ಥೆಯು ಅಂಗವಿಕಲ ನೌಕರರಿಗೆ ಸೂಕ್ತ ಸೌಕರ್ಯವನ್ನು ಒದಗಿಸತಕ್ಕದ್ದು ಹಾಗೂ ತೊಡಕುಗಳಿಲ್ಲದ ಸಮರ್ಪಕವಾದ ಮತ್ತು ಅನುಕೂಲಕರ ಪರಿಸರ ಇರುವಂತೆ ಮಾಡತಕ್ಕದ್ದು.

(3) ವ್ಯಕ್ತಿಯ ಅಂಗವಿಕಲತೆಯ ಕಾರಣದಿಂದ ಮಾತ್ರವೇ ಆ ವ್ಯಕ್ತಿಯನ್ನು ದರ್ಜೆಯಿಂದ ಬಿಡುಗಡೆ ಮಾಡತಕ್ಕದ್ದಲ್ಲ ಅಥವಾ ದರ್ಜೆಯಿಂದ ಕೆಳಗಿಳಿಸತಕ್ಕದ್ದಲ್ಲ.

(4) ಯಾವುದೇ ಸರ್ಕಾರಿ ಸಂಸ್ಥೆಯು, ಯಾರೇ ನೌಕರನಿಗೆ ಅಥವಾ ನೌಕರಳಿಗೆ ಆತನ ಅಥವಾ ಆಕೆಯ ಸೇವಾವಧಿಯಲ್ಲಿ ಯಾವುದೇ ರೀತಿಯ ಅಂಗವಿಕಲತೆ ಬಂದರೆ ಅಂಥ ನೌಕರನನ್ನು ಅಥವಾ ನೌಕರಳನ್ನು ದರ್ಜೆಯಿಂದ ಬಿಡುಗಡೆ ಮಾಡತಕ್ಕದ್ದಲ್ಲ ಅಥವಾ ದರ್ಜೆಯಿಂದ ಕೆಳಗಿಳಿಸತಕ್ಕದ್ದಲ್ಲ:

ಪರಂತು, ನೌಕರನು ಹೊಂದಿದ್ದ ಹುದ್ದೆಯ ಕರ್ತವ್ಯವನ್ನು ಆ ನೌಕರನಿಗೆ ಅಂಗವಿಕಲತೆ ಬಂದ ನಂತರ ನಿರ್ವಹಿಸಲು ಅರ್ಹನಾಗಿಲ್ಲದಿದ್ದರೆ ಆತನನ್ನು ಅದೇ ವೇತನ ಶ್ರೇಣಿಯಲ್ಲಿ ಮತ್ತು ಸೇವಾ ಪ್ರಯೋಜನಗಳೊಂದಿಗೆ ಇತರ ಹುದ್ದೆಗೆ ವರ್ಗಾಯಿಸತಕ್ಕದ್ದು:

ಮತ್ತು ಪರಂತು, ಅಂಥ ನೌಕರನನ್ನು ಯಾವುದೇ ಹುದ್ದೆಗೆ ನಿಯುಕ್ತಿ ಮಾಡಲು ಸಾಧ್ಯವಾಗದಿದ್ದರೆ, ಆತನನ್ನು ಸೂಕ್ತವಾದ ಹುದ್ದೆ ಲಭ್ಯವಾಗುವವರೆಗೆ ಅಥವಾ ಆತನಿಗೆ ವಯೋನಿವೃತ್ತಿ ವಯಸ್ಸು ತುಂಬುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ಇರಿಸತಕ್ಕದ್ದು.

(5) ಸಮುಚಿತ ಸರ್ಕಾರವು ಅಂಗವಿಕಲ ನೌಕರರಿಗೆ ಸ್ಥಳ ನಿಯುಕ್ತಿ ಮತ್ತು ವರ್ಗಾವಣೆಗಾಗಿ ಕಾರ್ಯನೀತಿಗಳನ್ನು ರೂಪಿಸಬಹುದು.

**21. ಸಮಾನ ಅವಕಾಶ ಕಾರ್ಯನೀತಿ.**– (1) ಪ್ರತಿಯೊಂದು ಸಂಸ್ಥೆಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಈ ಅಧ್ಯಾಯದ ಉಪಬಂಧಗಳನ್ನು ಅನುಸರಿಸುವುದಕ್ಕೆ

ಸಂಬಂಧಿಸಿದಂತೆ ಕೈಗೊಳ್ಳಲು ಉದ್ದೇಶಿಸಿದ ವಿವರವಾದ ಕ್ರಮಗಳನ್ನು ಕುರಿತ ಸಮಾನ ಅವಕಾಶ ಕಾರ್ಯನೀತಿಯನ್ನು ಅಧಿಸೂಚಿಸತಕ್ಕದ್ದು.

(2) ಪ್ರತಿಯೊಂದು ಸಂಸ್ಥೆಯು, ಸದರಿ ಕಾರ್ಯನೀತಿಯ ಪ್ರತಿಯನ್ನು ಸಂದರ್ಭಾನುಸಾರ ಚೀಫ್ ಕಮಿಷನರ್ ಅಥವಾ ಸ್ಟೇಟ್ ಕಮಿಷನರ್‌ರಲ್ಲಿ ದಾಖಲ್ಮಾಡಿಸತಕ್ಕದ್ದು.

**22. ದಾಖಲೆಗಳ ನಿರ್ವಹಣೆ.–** (1) ಪ್ರತಿಯೊಂದು ಸಂಸ್ಥೆಯು, ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ, ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಉದ್ಯೋಗದ ವಿಷಯಕ್ಕೆ ಕಲ್ಪಿಸಿದ ಸೌಲಭ್ಯಗಳಿಗೆ ಮತ್ತು ಇತರ ಅವಶ್ಯಕ ಮಾಹಿತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ಪ್ರತಿಯೊಂದು ಉದ್ಯೋಗ ವಿನಿಮಯ ಕಚೇರಿಯು, ಉದ್ಯೋಗ ಬಯಸಿರುವ ಅಂಗವಿಕಲ ವ್ಯಕ್ತಿಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(3) ಉಪಪ್ರಕರಣದ (1)ರ ಮೇರೆಗೆ ಇಟ್ಟಿರುವ ದಾಖಲೆಗಳನ್ನು ಸಮುಚಿತ ಸರ್ಕಾರವು ಈ ಸಂಬಂಧ ಅಧಿಕೃತಗೊಳಿಸಬಹುದಾದಂಥ ವ್ಯಕ್ತಿಗಳು ಎಲ್ಲ ಯುಕ್ತ ಸಮಯಗಳಲ್ಲಿ ಪರಿಶೀಲನೆ ಮಾಡುವುದಕ್ಕೆ ಮುಕ್ತವಾಗಿರಿಸತಕ್ಕದ್ದು.

**23. ಕುಂದುಕೊರತೆಗಳ ನಿವಾರಣಾಧಿಕಾರಿಯ ನೇಮಕ.–** (1) ಸರ್ಕಾರದ ಪ್ರತಿಯೊಂದು ಸಂಸ್ಥೆಯು, 19ನೇ ಪ್ರಕರಣದ ಉದ್ದೇಶಕ್ಕಾಗಿ ಒಬ್ಬರು ಕುಂದುಕೊರತೆಗಳ ನಿವಾರಣಾಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಯ ನೇಮಕದ ಬಗ್ಗೆ ಸಂದರ್ಭಾನುಸಾರ ಚೀಫ್ ಕಮಿಷನರ್‌ರಿಗೆ ಅಥವಾ ಸ್ಟೇಟ್ ಕಮಿಷನರ್‌ರಿಗೆ ತಿಳಿಸತಕ್ಕದ್ದು.

(2) 20ನೇ ಪ್ರಕರಣದ ಉಪಬಂಧಗಳನ್ನು ಪಾಲನೆ ಮಾಡದಿರುವುದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕುಂದುಕೊರತೆ ನಿವಾರಣಾಧಿಕಾರಿಗೆ ಆ ಬಗ್ಗೆ ದೂರನ್ನು ದಾಖಲಿಸಬಹುದು. ಅದನ್ನು ದಾಖಲಿಸಿಕೊಂಡ ಕುಂದುಕೊರತೆ ನಿವಾರಣಾಧಿಕಾರಿಯು ಆ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಆ ವಿಷಯವನ್ನು ಸರಿಪಡಿಸುವುದಕ್ಕಾಗಿ ಸಂಸ್ಥೆಯೊಂದಿಗೆ ಪರ್ಯಾಲೋಚಿಸತಕ್ಕದ್ದು.

(3) ಕುಂದುಕೊರತೆ ನಿವಾರಣಾಧಿಕಾರಿಯು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ದೂರಗಳ ಒಂದು ನೋಂದಣಿ ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು ಮತ್ತು ಪ್ರತಿಯೊಂದು ದೂರನ್ನು ಅದು ನೋಂದಣಿಯಾದ ಎರಡು ವಾರಗಳ ಒಳಗಾಗಿ ವಿಚಾರಣೆಯನ್ನು ನಡೆಸತಕ್ಕದ್ದು.

(4) ಬಾಧಿತ ವ್ಯಕ್ತಿಯು ದಾಖಲಿಸಿದ ದೂರಿನ ಸಂಬಂಧದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಆತನಿಗೆ ಅಥವಾ ಆಕೆಗೆ ತೃಪ್ತಿಕರವಾಗದಿದ್ದರೆ, ಆತನು ಅಥವಾ ಆಕೆಯು ಅಂಗವಿಕಲತೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಸಮಿತಿಗೆ ತನ್ನ ದೂರನ್ನು ಸಲ್ಲಿಸಬಹುದು.

## ಅಧ್ಯಾಯ V

## ಸಾಮಾಜಿಕ ಭದ್ರತೆ, ಆರೋಗ್ಯ, ಪುನರ್ ವ್ಯವಸ್ಥೆ ಮತ್ತು ಮನರಂಜನೆ

**24. ಸಾಮಾಜಿಕ ಭದ್ರತೆ.–** (1) ಸಮುಚಿತ ಸರ್ಕಾರವು ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಆರ್ಥಿಕ ಅಭಿವೃದ್ಧಿ ಮಿತಿಯೊಳಗೆ ಅಂಗವಿಕಲ ವ್ಯಕ್ತಿಗಳು ಸ್ವತಂತ್ರವಾಗಿ ಅಥವಾ ಸಮುದಾಯದಲ್ಲಿ ಒಂದಾಗಿ ಜೀವಿಸಲು ಸಾಧ್ಯವಾಗುವಂತೆ ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸಿ ಅವರ ಹಕ್ಕನ್ನು ಸಂರಕ್ಷಿಸುವುದಕ್ಕೆ ಮತ್ತು ಉತ್ತೇಜಿಸುವುದಕ್ಕೆ ಅವಶ್ಯಕವಾದ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು:

ಪರಂತು, ಅಂಥ ಯೋಜನೆಗಳ ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ನೀಡುವ ನೆರವಿನ ಪ್ರಮಾಣವು ಇತರ ವ್ಯಕಿಗಳಿಗೆ ಅನ್ವಯವಾಗುವ ಅದೇ ರೀತಿಯ ಯೋಜನೆಗಳಿಗಿಂತಲೂ ಕಡೇಪಕ್ಷ ಶೇಕಡ ಇಪ್ಪತ್ತೈದರಷ್ಟು ಹೆಚ್ಚು ಇರತಕ್ಕದ್ದು.

(2) ಸಮುಚಿತ ಸರ್ಕಾರವು ಈ ರೀತಿಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಾಗ ಅಂಗವಿಕಲತೆಯ ಭಿನ್ನ ಭಿನ್ನ ಬಗೆಯನ್ನು, ಲಿಂಗ, ವಯಸ್ಸು ಮತ್ತು ಸಾಮಾಜಿಕ–ಆರ್ಥಿಕ ಸ್ಥಾನಮಾನವನ್ನು ಸೂಕ್ತವಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗಿನ ಯೋಜನೆಗಳಲ್ಲಿ,-

(ಎ) ಉತ್ತಮ ಜೀವನ ನಡೆಸಲು ಅಗತ್ಯವಾದ ಸುರಕ್ಷತೆ, ನೈರ್ಮಲ್ಯ, ಆರೋಗ್ಯ ಪಾಲನೆ ಮತ್ತು ಆಪ್ತ ಸಲಹಾಸೇವೆಗಳು ಲಭ್ಯವಿರುವ ಸಮುದಾಯ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ;

(ಬಿ) ಅನಾಥ ಅಥವಾ ಪರಿತ್ಯಕ್ತ ಅಥವಾ ಮನೆ ಅಥವಾ ಜೀವನೋಪಾಯ ಇಲ್ಲದಿರುವ ಅಂಗವಿಕಲ ಮಕ್ಕಳು ಸೇರಿದಂತೆ ಅನಾಥ ಅಂಗವಿಕಲ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ;

(ಸಿ) ನೈಸರ್ಗಿಕವಾದ ಅಥವಾ ಮನುಷ್ಯರಿಂದಾದ ವಿಪತ್ತುಗಳ ಸಂದರ್ಭದಲ್ಲಿ ಮತ್ತು ಗಲಭೆಯುಂಟಾದ ಪ್ರದೇಶದಲ್ಲಿ ನೆರವನ್ನು ಒದಗಿಸುವುದಕ್ಕೆ;

(ಡಿ) ಅಂಗವಿಕಲ ಮಹಿಳೆಯರ ಜೀವನೋಪಾಯಕ್ಕಾಗಿ ಮತ್ತು ಅವರು ತಮ್ಮ ಮಕ್ಕಳನ್ನು ಚೆನ್ನಾಗಿ ಬೆಳೆಸುವುದಕ್ಕಾಗಿ ನೆರವಿಗೆ;

(ಇ) ವಿಶೇಷವಾಗಿ ನಗರದ ಕೊಳಗೇರಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಮತ್ತು ಯುಕ್ತ ಹಾಗೂ ಸುಲಭಲಭ್ಯ ಶೌಚಾಲಯ ವ್ಯವಸ್ಥೆಗಳಿಗೆ;

(ಎಫ್) ಅಧಿಸೂಚನೆಯಲ್ಲಿ ತಿಳಿಸಿರಬಹುದಾದಂಥ ಆದಾಯದ ಮಿತಿಯೊಳಗಿರುವ ಅಂಗವಿಕಲ ವ್ಯಕ್ತಿಗಳಿಗೆ ಉಚಿತವಾಗಿ ಸಾಧನ ಸಲಕರಣೆಗಳನ್ನು, ಔಷಧಿಗಳನ್ನು ಮತ್ತು ರೋಗ ಪತ್ತೆ ಸೇವೆಗಳನ್ನು ಒದಗಿಸಲು ಮತ್ತು ಅಂಗವಿಕಲತೆಯನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆಗೆ;

(ಜಿ) ಅಧಿಸೂಚನೆಯಲ್ಲಿ ತಿಳಿಸಿರಬಹುದಾದಂಥ ಆದಾಯ ಮಿತಿಗೆ ಒಳಪಟ್ಟು ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲ ಪಿಂಚಣಿಗೆ;

(ಹೆಚ್) ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಿ ಎರಡು ವರ್ಷಗಳ ನಂತರವೂ ಯಾವುದೇ ಸಂಪಾದನೆಯ ಕೆಲಸ ದೊರೆಯದಿರುವ ಅಂಗವಿಕಲ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆಗೆ;

(ಐ) ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳ ಪಾಲನೆದಾರನಿಗೆ ಪೋಷಣಾ ಭತ್ಯೆಗೆ;

(ಜೆ) ನೌಕರರ ರಾಜ್ಯ ವಿಮಾ ಯೋಜನೆಗಳ ಅಥವಾ ಯಾವುದೇ ಇತರ ಶಾಸನಬದ್ಧ ಅಥವಾ ಸರ್ಕಾರದ ಪ್ರಾಯೋಜಿತ ವಿಮಾ ಯೋಜನೆಗಳ ವ್ಯಾಪ್ತಿಗೆ ಒಳಪಡದಿರುವ ಅಂಗವಿಕಲ ವ್ಯಕ್ತಿಗಳಿಗೆ ಸಮಗ್ರ ವಿಮಾ ಯೋಜನೆಗೆ;

(ಕೆ) ಸೂಕ್ತವೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಡುವಂತಹ ಯಾವುದೇ ಇತರ ವಿಷಯಗಳಿಗೆ

\- ಅವಕಾಶ ಕಲ್ಪಿಸತಕ್ಕದ್ದು.

25. **ಆರೋಗ್ಯ ಪಾಲನೆ.**- (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಈ ಕೆಳಕಂಡ ಸೇವೆಗಳನ್ನು ಒದಗಿಸಲು ಎಂದರೆ,-

(ಎ) ಅಧಿಸೂಚಿಸಬಹುದಾದಂಥ ಕುಟುಂಬದ ಆದಾಯಕ್ಕೆ ಒಳಪಟ್ಟು, ವಿಶೇಷವಾಗಿ ಗ್ರಾಮೀಣ ಪ್ರದೇಶಕ್ಕೆ ಹತ್ತಿರದಲ್ಲಿ ವಾಸಿಸುವವರಿಗೆ ಉಚಿತ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ;

(ಬಿ) ಸರ್ಕಾರದ ಮತ್ತು ಖಾಸಗಿ ಆಸ್ಪತ್ರೆಗಳು ಹಾಗೂ ಇತರ ಆರೋಗ್ಯ ಪಾಲನಾ ಸಂಸ್ಥೆಗಳು ಮತ್ತು ಕೇಂದ್ರಗಳಲ್ಲಿ ಅಂಗವಿಕಲರಿಗೆ ಅಡೆತಡೆ ಮುಕ್ತ ಪ್ರವೇಶಕ್ಕೆ ವ್ಯವಸ್ಥೆ;

(ಸಿ) ವೈದ್ಯೋಪಚಾರ ಮತ್ತು ಚಿಕಿತ್ಸೆಯಲ್ಲಿ ಆದ್ಯತೆ ನೀಡುವುದಕ್ಕೆ

– ಅವಶ್ಯಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲತೆಗೆ ಸಂಬಂಧಿಸಿದ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ ಮತ್ತು ಅಂಗವಿಕಲತೆ ಬರದಂತೆ ತಡೆಯುವುದಕ್ಕೆ ಅಗತ್ಯ ಯೋಜನೆಗಳನ್ನು ಅಥವಾ ಕಾರ್ಯಕ್ರಮಗಳನ್ನು ರೂಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಸದರಿ ಉದ್ದೇಶಕ್ಕಾಗಿ,-

(ಎ) ಅಂಗವಿಕಲತೆ ಉಂಟಾಗುವುದಕ್ಕೆ ಕಾರಣಗಳ ಬಗ್ಗೆ ಸಮೀಕ್ಷೆಗಳು, ತಪಾಸಣೆಗಳು ಮತ್ತು ಸಂಶೋಧನೆಗಳನ್ನು ನಡೆಸತಕ್ಕದ್ದು ಅಥವಾ ನಡೆಸುವಂತೆ ಮಾಡತಕ್ಕದ್ದು;

(ಬಿ) ಅಂಗವಿಕಲತೆಗಳು ಉಂಟಾಗದಂತೆ ತಡೆಗಟ್ಟುವುದಕ್ಕಾಗಿ ವಿವಿಧ ವಿಧಾನಗಳಿಗೆ ಉತ್ತೇಜನ ನೀಡತಕ್ಕದ್ದು;

(ಸಿ) "ಅಪಾಯ ಸಂಭವನೀಯ" ಪ್ರಕರಣಗಳನ್ನು ಗುರುತಿಸುವ ಉದ್ದೇಶಕ್ಕಾಗಿ ವರ್ಷದಲ್ಲಿ ಕನಿಷ್ಠಪಕ್ಷ ಒಂದು ಬಾರಿಯಾದರೂ ಎಲ್ಲ ಮಕ್ಕಳನ್ನು ಪರೀಕ್ಷಿಸತಕ್ಕದ್ದು;

(ಡಿ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸಿಬ್ಬಂದಿಗೆ ಈ ಬಗ್ಗೆ ತರಬೇತಿ ನೀಡುವುದಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(ಇ) ಜನರಲ್ಲಿ ಸಾಮಾನ್ಯ ಶುಚಿತ್ವ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆಗಾಗಿ ಮಾಹಿತಿ ನೀಡಲು ಅಥವಾ ನೀಡುವಂತೆ ಮಾಡಲು ಜಾಗೃತಿ ಶಿಬಿರಗಳನ್ನು ಏರ್ಪಡಿಸತಕ್ಕದ್ದು ಅಥವಾ ಅವುಗಳನ್ನು ಏರ್ಪಡಿಸುವಂತೆ ಮಾಡತಕ್ಕದ್ದು;

(ಎಫ್) ಹೆರಿಗೆಗೆ ಮುಂಚಿನ, ಹೆರಿಗೆ ನಂತರದ ಕಾಲದಲ್ಲಿ ಮತ್ತು ಬಾಣಂತಿ ಸಮಯದಲ್ಲಿ ತಾಯಿ ಮತ್ತು ಮಗುವಿನ ಪಾಲನೆಗಾಗಿ ಆರೋಗ್ಯ ರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಜಿ) ಶಾಲಾ ಪೂರ್ವ ಶಿಶುಮಂದಿರಗಳ, ಶಾಲೆಗಳ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಹಾಗೂ ಗ್ರಾಮಮಟ್ಟದ ಕಾರ್ಯಕರ್ತರುಗಳ ಮತ್ತು ಅಂಗನವಾಡಿ ಕಾರ್ಯಕರ್ತರುಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸತಕ್ಕದ್ದು;

(ಹೆಚ್) ಅಂಗವಿಕಲತೆಗೆ ಮೂಲ ಕಾರಣಗಳ ಬಗ್ಗೆ ಮತ್ತು ಅವುಗಳನ್ನು ತಡೆಗಟ್ಟಲು ಅಳವಡಿಸಿಕೊಳ್ಳಬೇಕಾದ ಕ್ರಮಗಳ ಬಗ್ಗೆ ದೂರದರ್ಶನ, ರೇಡಿಯೋ ಮತ್ತು ಇತರ ಸಮೂಹ ಮಾಧ್ಯಮಗಳ ಮೂಲಕ ಜನರಲ್ಲಿ ಸಮೂಹ ಜಾಗೃತಿಯನ್ನು ಮೂಡಿಸತಕ್ಕದ್ದು;

(ಐ) ನೈಸರ್ಗಿಕ ವಿಪತ್ತುಗಳು ಸಂಭವಿಸಿದ ಸಮಯದಲ್ಲಿ ಮತ್ತು ಇತರ ಅಪಾಯದ ಸನ್ನಿವೇಶ ಸಂದರ್ಭಗಳಲ್ಲಿ ಅವರಿಗೆ ಆರೋಗ್ಯ ರಕ್ಷಣೆ ನೀಡತಕ್ಕದ್ದು;

(ಜೆ) ಜೀವರಕ್ಷಣೆ ಸಂದರ್ಭ ಸನ್ನಿವೇಶದಲ್ಲಿ ತುರ್ತುಚಿಕಿತ್ಸೆ ನೀಡಲು ಅಗತ್ಯವಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸತಕ್ಕದ್ದು; ಮತ್ತು

(ಕೆ) ವಿಶೇಷವಾಗಿ ಅಂಗವಿಕಲ ಮಹಿಳೆಯರಿಗೆ ಲೈಂಗಿಕ ಮತ್ತು ಸಂತಾನೋತ್ಪತ್ತಿಯ ವಿಷಯಗಳಲ್ಲಿ ಆರೋಗ್ಯ ಪಾಲನೆ ಬಗ್ಗೆ ತಿಳುವಳಿಕೆ ನೀಡತಕ್ಕದ್ದು.

**26. ವಿಮಾ ಯೋಜನೆಗಳು.–** ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಅಂಗವಿಕಲ ನೌಕರರಿಗಾಗಿ ವಿಮಾ ಯೋಜನೆಗಳನ್ನು ರೂಪಿಸತಕ್ಕದ್ದು.

**27. ಪುನರ್ ವ್ಯವಸ್ಥೆ.–** (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಆರ್ಥಿಕ ಸಾಮರ್ಥ್ಯದ ಮತ್ತು ಆರ್ಥಿಕ ಅಭಿವೃದ್ಧಿ ಮಿತಿಯೊಳಗೆ ಎಲ್ಲ ಅಂಗವಿಕಲ ವ್ಯಕ್ತಿಗಳಿಗೆ ಪುನರ್ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ವಿಶೇಷವಾಗಿ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಸೇವಾ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅವುಗಳನ್ನು ಕೈಗೊಳ್ಳುವಂತೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಸರ್ಕಾರೇತರ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಬಹುದು.

(3) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್ ವ್ಯವಸ್ಥೆಗೆ ಎಲ್ಲ ಕಾರ್ಯನೀತಿಗಳನ್ನು ರೂಪಿಸುವಾಗ ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸತಕ್ಕದ್ದು.

**28. ಸಂಶೋಧನೆ ಮತ್ತು ಅಭಿವೃದ್ಧಿ.–** ಸಮುಚಿತ ಸರ್ಕಾರವು, ಯಾವ ವಿಷಯಗಳಿಂದ ಅಂಗವಿಕಲ ವ್ಯಕ್ತಿಗಳ ವ್ಯವಸ್ಥೆಯಲ್ಲಿ ಅಥವಾ ಪುನರ್ ವ್ಯವಸ್ಥೆಯಲ್ಲಿ ಹೆಚ್ಚಳ ಆಗುತ್ತದೋ ಆ ವಿಷಯಗಳ

ಬಗ್ಗೆ ಮತ್ತು ಅವರಿಗೆ ಪುನರ್ ವ್ಯವಸ್ಥೆ ಕಲ್ಪಿಸುವ ಹಾಗೂ ಯಾವ ವಿಷಯಗಳು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಆವಶ್ಯಕವೋ ಆ ಇತರೆ ವಿಷಯಗಳ ಬಗ್ಗೆ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಮೂಲಕ ಸಂಶೋಧನೆ ನಡೆಸುವುದಕ್ಕೆ, ಅಭಿವೃದ್ಧಿಪಡಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಅಥವಾ ಆ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುವಂತೆ ಮಾಡತಕ್ಕದ್ದು.

**29. ಸಂಸ್ಕೃತಿ ಮತ್ತು ಮನರಂಜನೆ.–** ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ಸಮಾನವಾಗಿ ಸಾಂಸ್ಕೃತಿಕ ಬದುಕನ್ನು ಹೊಂದುವುದಕ್ಕೆ ಮತ್ತು ಮನರಂಜನಾ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಅವರ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಸಂರಕ್ಷಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಈ ನಿಟ್ಟಿನಲ್ಲಿ,–

(ಎ) ಅಂಗವಿಕಲ ಕಲಾವಿದರನ್ನು ಮತ್ತು ಲೇಖಕರನ್ನು ಗುರುತಿಸಿ ಅವರ ಆಸಕ್ತಿಗಳನ್ನು ಮತ್ತು ಪ್ರತಿಭೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಸೌಲಭ್ಯಗಳನ್ನು, ಅಗತ್ಯ ನೆರವನ್ನು ಮತ್ತು ಪ್ರಾಯೋಜಕತ್ವವನ್ನು ಒದಗಿಸತಕ್ಕದ್ದು;

(ಬಿ) ಅಂಗವಿಕಲ ವ್ಯಕ್ತಿಗಳ ಇತಿಹಾಸದ ಬಗ್ಗೆ ಕಾಲಾನುಕ್ರಮಣಿಕೆ ದಾಖಲೆ ಇಟ್ಟಿರುವ ಮತ್ತು ಕಾಲಾನುಕ್ರಮದಲ್ಲಿ ಅಂಗವಿಕಲ ವ್ಯಕ್ತಿಗಳು ಗಳಿಸಿದ ಅನುಭವಗಳ ವ್ಯಾಖ್ಯಾನಗಳನ್ನು ಇಟ್ಟಿರುವ ಅಂಗವಿಕಲತೆ ಇತಿಹಾಸ ಸಂಗ್ರಹಾಲಯದ ಸ್ಥಾಪನೆ ಮಾಡತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಕಲಾ ಪ್ರಕಾರವು ಲಭ್ಯವಾಗುವಂತೆ ಮಾಡತಕ್ಕದ್ದು;

(ಡಿ) ಮನರಂಜನಾ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಇತರ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸಲು ಅವರಿಗೆ ಉತ್ತೇಜನ ನೀಡತಕ್ಕದ್ದು;

(ಇ) ಸ್ಕೇಟಿಂಗ್, ನೃತ್ಯ, ಕಲಾ ತರಗತಿಗಳಲ್ಲಿ, ಹೊರಾಂಗಣ ಶಿಬಿರಗಳಲ್ಲಿ ಮತ್ತು ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಲು ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಾಂಸ್ಕೃತಿಕ ಮತ್ತು ಕಲಾ ವಿಷಯಗಳಲ್ಲಿ ಪಾಲ್ಗೊಳ್ಳಲು ಮತ್ತು ಪ್ರವೇಶ ಪಡೆಯಲು ಸಾಧ್ಯವಾಗುವಂತೆ ಅವುಗಳ ಪಠ್ಯ ಕ್ರಮಗಳನ್ನು ಮರು ವಿನ್ಯಾಸಗೊಳಿಸತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳು ಮನರಂಜನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಮತ್ತು ಸಮ್ಮಿಳಿತವಾಗುವುದಕ್ಕೆ ಅನುವು ಮಾಡಿಕೊಡಲು ಅಭಿವೃದ್ಧಿ ತಂತ್ರಜ್ಞಾನವನ್ನು

ಅಭಿವೃದ್ಧಿಪಡಿಸತಕ್ಕದ್ದು, ಸಹಾಯಕ ಸಾಧನೋಪಾಯಗಳನ್ನು ಮತ್ತು ಸಲಕರಣೆಗಳನ್ನು ರೂಪಿಸತಕ್ಕದ್ದು;

(ಹೆಚ್) ಶ್ರವಣ ದೋಷವುಳ್ಳ ವ್ಯಕ್ತಿಗಳು, ಸಂಜ್ಞಾ ಭಾಷೆಯ ನೆರವಿನಿಂದ ದೃಶ್ಯ ವಿವರಣೆ ಅಥವಾ ಸಂಜ್ಞಾ ಭಾಷೆಯಲ್ಲಿ ಉಪಶೀರ್ಷಿಕೆಗಳ ಸಹಿತ ದೂರದರ್ಶನ ಕಾರ್ಯಕ್ರಮಗಳನ್ನು ನೋಡಲು ಅವಕಾಶ ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**30. ಕ್ರೀಡಾ ಚಟುವಟಿಕೆಗಳು.–** (1) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಕ್ರೀಡಾ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ಇತರರಂತೆ ಕ್ರೀಡೆಗಳಲ್ಲಿ ಭಾಗವಹಿಸುವ ಹಕ್ಕಿಗೆ ಯುಕ್ತ ಮನ್ನಣೆ ನೀಡತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಕ್ರೀಡೆಯಲ್ಲಿ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸುವುದಕ್ಕಾಗಿ ಮತ್ತು ಆ ಪ್ರತಿಭೆಗಳಿಗೆ ಅಗತ್ಯ ನೆರವು ನೀಡುವುಕ್ಕಾಗಿ ತಮ್ಮ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಯುಕ್ತ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಮತ್ತು (2)ರಲ್ಲಿ ಹೇಳಿರುವವುಗಳಿಗೆ ಬಾಧಕವಾಗದಂತೆ, ಸಮುಚಿತ ಸರ್ಕಾರವು ಮತ್ತು ಕ್ರೀಡಾ ಪ್ರಾಧಿಕಾರಗಳು,–

(ಎ) ಅಂಗವಿಕಲ ವ್ಯಕ್ತಿಗಳಿಗೆ ಎಲ್ಲಾ ಕ್ರೀಡಾ ಚಟುವಟಿಕೆಗಳಲ್ಲಿ ಅವಕಾಶ ಕಲ್ಪಿಸಿರುವುದನ್ನು ಮತ್ತು ಅವರು ಸಮ್ಮಿಳಿತವಾಗುವುದನ್ನು ಖಚಿತಪಡಿಸಿಕೊಳ್ಳಲು ಕೋರ್ಸ್‌ಗಳನ್ನು ಮತ್ತು ಕಾರ್ಯಕ್ರಮಗಳನ್ನು ಪುನರ್‌ರಚಿಸುವುದಕ್ಕೆ;

(ಬಿ) ಅಂಗವಿಕಲ ವ್ಯಕ್ತಿಗಳು ಇತರರಂತೆ ಎಲ್ಲ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವಂತೆ ಕೋರ್ಸ್‌ಗಳನ್ನು ಮರುವಿನ್ಯಾಸಗೊಳಿಸುವುದಕ್ಕೆ ಮತ್ತು ಕ್ರೀಡಾ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕೆ;

(ಸಿ) ಎಲ್ಲ ಅಂಗವಿಕಲ ವ್ಯಕ್ತಿಗಳು ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮ ಕ್ರೀಡಾಕ್ಷಮತೆಯನ್ನು, ಪ್ರತಿಭೆಯನ್ನು, ಸಾಮರ್ಥ್ಯವನ್ನು ಮತ್ತು ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದಕ್ಕೆ;

(ಡಿ) ಎಲ್ಲ ಅಂಗವಿಕಲ ವ್ಯಕ್ತಿಗಳು ಎಲ್ಲ ತರಹದ ಕ್ರೀಡಾ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಅಗತ್ಯವಾದ ಬಹು-ಸಂವೇದಿ ಸಾಧನಗಳನ್ನು ಮತ್ತು ಸಲಕರಣೆಗಳನ್ನು ಒದಗಿಸುವುದಕ್ಕೆ;

(ಇ) ಅಂಗವಿಕಲ ವ್ಯಕ್ತಿಗಳ ತರಬೇತಿಗಾಗಿ ಅತಿ ನವೀನ ಕಲೆ-ಕ್ರೀಡಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ನಿಧಿಗಳನ್ನು ಹಂಚಿಕೆ ಮಾಡುವುದಕ್ಕೆ;

(ಎಫ್) ಅಂಗವಿಕಲ ವ್ಯಕ್ತಿಗಳಿಗೆ, ಅಂಗವಿಕಲತೆಯ ನಿರ್ದಿಷ್ಟ ಕ್ರೀಡಾ ಕೂಟಗಳಿಗೆ ಉತ್ತೇಜನ ನೀಡುವುದಕ್ಕೆ ಮತ್ತು ಸಂಘಟಿಸುವುದಕ್ಕೆ ಮತ್ತು ಅಂಥ ಕ್ರೀಡಾ ಕೂಟಗಳಲ್ಲಿ ವಿಜೇತರಾದವರಿಗೆ ಮತ್ತು ಭಾಗವಹಿಸಿದ ಇತರರಿಗೆ ಪ್ರಶಸ್ತಿ-ಪುರಸ್ಕಾರಗಳನ್ನು ನೀಡುವುದಕ್ಕೆ

– ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ VI

## ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ವಿಶೇಷ ಉಪಬಂಧಗಳು

**31. ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಗಳು ಇರುವ ಮಕ್ಕಳಿಗೆ ಉಚಿತ ಶಿಕ್ಷಣ.–** ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕುಗಳ ಅಧಿನಿಯಮ, 2009 (2009ರ 35) ರಲ್ಲಿ ಏನೇ ಒಳಗೊಂಡಿದ್ದರೂ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಆರು ವರ್ಷಗಳಿಂದ ಹದಿನೆಂಟು ವರ್ಷಗಳ ನಡುವಣ ವಯಸ್ಸಿನ ಪ್ರತಿಯೊಂದು ಮಗುವು ತಾನು ಇಚ್ಛಿಸುವ ತನಗೆ ಹತ್ತಿರದಲ್ಲಿರುವ ಶಾಲೆಯಲ್ಲಿ ಅಥವಾ ವಿಶೇಷ ಶಾಲೆಯಲ್ಲಿ ಉಚಿತ ಶಿಕ್ಷಣ ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದು.

(2) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಪ್ರತಿಯೊಂದು ಮಗುವಿಗೆ ಅದಕ್ಕೆ ಹದಿನೆಂಟು ವರ್ಷಗಳ ವಯಸ್ಸು ತುಂಬುವವರೆಗೂ ಯುಕ್ತ ಪರಿಸರದಲ್ಲಿ ಉಚಿತ ಶಿಕ್ಷಣ ದೊರೆಯುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**32. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ.–** (1) ಉನ್ನತ ಶಿಕ್ಷಣ ನೀಡುವ ಎಲ್ಲ ಸರ್ಕಾರಿ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಶೇಕಡ ಐದಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮೀಸಲಿಡತಕ್ಕದ್ದು.

(2) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಅವರ ವಯೋಮಿತಿಯಲ್ಲಿ ಐದು ವರ್ಷಗಳ ವಿನಾಯಿತಿ ನೀಡತಕ್ಕದ್ದು.

**33. ಮೀಸಲಾತಿಗಾಗಿ ಹುದ್ದೆಗಳನ್ನು ಗುರುತಿಸುವುದು.–** ಸಮುಚಿತ ಸರ್ಕಾರವು,–

(i) 34ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮೀಸಲಿಟ್ಟಿರುವ ಖಾಲಿ ಸ್ಥಾನಗಳಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲ ವ್ಯಕ್ತಿಗಳ ಆಯಾಯ ಪ್ರವರ್ಗದವರು ಸಂಸ್ಥೆಗಳಲ್ಲಿ ಧಾರಣ ಮಾಡಬಹುದಾದ ಹುದ್ದೆಗಳನ್ನು ಗುರುತಿಸತಕ್ಕದ್ದು.

(ii) ಅಂಥ ಹುದ್ದೆಗಳನ್ನು ಗುರುತಿಸುವುದಕ್ಕಾಗಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರತಿನಿಧಿ ಸಹಿತ ಒಂದು ತಜ್ಞ ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(iii) ಗುರುತಿಸಿದ ಹುದ್ದೆಗಳ ಬಗ್ಗೆ ಮೂರು ವರ್ಷಗಳನ್ನು ಮೀರದ ಮಧ್ಯಂತರ ಅವಧಿಯಲ್ಲಿ ನಿಯತ ಪುನರಾವಲೋಕನ ನಡೆಸತಕ್ಕದ್ದು.

**34. ಮೀಸಲಾತಿ.–** (1) ಪ್ರತಿಯೊಂದು ಸಮುಚಿತ ಸರ್ಕಾರವು, ಪ್ರತಿಯೊಂದು ಸರ್ಕಾರಿ ಸಂಸ್ಥೆಯಲ್ಲಿ, ಹುದ್ದೆಗಳ ಪ್ರತಿಯೊಂದು ಗುಂಪಿನಲ್ಲಿನ ಕೇಡರ್ ಸಂಖ್ಯಾಬಲದಲ್ಲಿ ಇರುವ ಖಾಲಿಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ ನಾಲ್ಕರಷ್ಟಕ್ಕಿಂತ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲ ವ್ಯಕ್ತಿಗಳಿಂದ ತುಂಬಲು ಗೊತ್ತುಪಡಿಸತಕ್ಕದ್ದು ಹಾಗೂ ಈ ಶೇಕಡ ನಾಲ್ಕರಷ್ಟು ಹುದ್ದೆಗಳಲ್ಲಿ ಶೇ.1ರಷ್ಟು ಹುದ್ದೆಗಳನ್ನು (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ಹೇಳಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಹಾಗೂ ಶೇ.1ರಷ್ಟು ಹುದ್ದೆಗಳನ್ನು (ಡಿ) ಮತ್ತು (ಇ) ಖಂಡಗಳಲ್ಲಿ ಹೇಳಿರುವಂತಹ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ, ಎಂದರೆ,–

(ಎ) ಅಂಧತ್ವ ಅಥವಾ ಮಂದ ದೃಷ್ಟಿ ಇರುವ ವ್ಯಕ್ತಿಗಳಿಗೆ;

(ಬಿ) ಕಿವುಡರು ಮತ್ತು ಕರ್ಕಶ ಶ್ರವಣತೆಯುಳ್ಳ ವ್ಯಕ್ತಿಗಳಿಗೆ;

(ಸಿ) ಮಿದುಳಿನ ಪಾರ್ಶ್ವವಾಯುವುಳ್ಳ, ವಾಸಿಯಾಗಿರುವ ಕುಷ್ಠ ರೋಗದ, ಕುಬ್ಜತೆಯುಳ್ಳ, ಆ್ಯಸಿಡ್ ದಾಳಿಯ ಸಂತ್ರಸ್ತರು ಮತ್ತು ಸ್ನಾಯು ಕ್ಷಯರೋಗ ಇರುವ ವ್ಯಕ್ತಿಗಳೂ ಸೇರಿದಂತೆ ಚಲನ ಸಂಬಂಧಿ ಅಂಗವಿಕಲತೆಯುಳ್ಳವರಿಗೆ;

(ಡಿ) ಆಟಿಸಂ, ಬೌದ್ಧಿಕ ಅಭಾವತೆ, ನಿರ್ದಿಷ್ಟ ಕಲಿಕಾ ಅಸಮರ್ಥತೆ ಮತ್ತು ಮಾನಸಿಕ ಅಸ್ವಸ್ಥತೆಯುಳ್ಳ ವ್ಯಕ್ತಿಗಳಿಗೆ;

(ಇ) ಪ್ರತಿಯೊಂದು ಅಂಗವಿಕಲತೆಗಾಗಿ ಗುರುತಿಸಲ್ಪಟ್ಟ ಹುದ್ದೆಗಳಲ್ಲಿ ಕಿವುಡ-ಅಂಧತ್ವವೂ ಒಳಗೊಂಡಂತೆ (ಎ) ಯಿಂದ (ಡಿ) ವರೆಗಿನ ಖಂಡಗಳ ಅಡಿಯಲ್ಲಿ ಬರುವ ವ್ಯಕ್ತಿಗಳ ಪೈಕಿ ಬಹುವಿಧದ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ

– ಮೀಸಲಿರಿಸತಕ್ಕದ್ದು:

ಪರಂತು, ಬಡ್ತಿಯಲ್ಲಿ ನೀಡುವ ಮೀಸಲಾತಿಯು ಸಮುಚಿತ ಸರ್ಕಾರವು ಕಾಲಕಾಲಕ್ಕೆ ಹೊರಡಿಸಬಹುದಾದಂಥ ಸೂಚನೆಗಳಿಗೆ ಅನುಸಾರವಾಗಿ ಇರತಕ್ಕದ್ದು:

ಮತ್ತು ಪರಂತು, ಸಮುಚಿತ ಸರ್ಕಾರವು, ಚೀಫ್ ಕಮಿಷನರ್ ಅಥವಾ ಸಂದರ್ಭಾನುಸಾರ ಸ್ಟೇಟ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಯಾವುದೇ ಸರ್ಕಾರಿ ಸಂಸ್ಥೆಯಲ್ಲಿ ನಿರ್ವಹಿಸುತ್ತಿರುವ ಕೆಲಸದ ವಿಧಗಳನ್ನು ಗಮನಿಸಿ ಅಧಿಸೂಚನೆ ಮೂಲಕ ಹಾಗೂ ಅಂಥ ಅಧಿಸೂಚನೆಗಳಲ್ಲಿ ಷರತ್ತುಗಳನ್ನೇನಾದರೂ ನಿರ್ದಿಷ್ಟಪಡಿಸುವುದಿದ್ದರೆ ಅಂಥ ಷರತ್ತುಗಳಿಗೊಳಪಟ್ಟು, ಈ ಪ್ರಕರಣದ ಉಪಬಂಧಗಳು ಯಾವುದೇ ಸರ್ಕಾರಿ ಸಂಸ್ಥೆಗೆ ಅನ್ವಯವಾಗದಂತೆ ವಿನಾಯಿತಿ ನೀಡಬಹುದು.

(2) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಯುಕ್ತ ವ್ಯಕ್ತಿಗಳು ಯಾವುದೇ ನೇಮಕಾತಿ ವರ್ಷದಲ್ಲಿ ಲಭ್ಯವಿಲ್ಲದ್ದರಿಂದ ಅಥವಾ ಯಾವುವೇ ಇತರ ಸಾಕಷ್ಟು ಕಾರಣಗಳಿಗಾಗಿ ಯಾವುದೇ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸಾಧ್ಯವಾಗದಿದ್ದರೆ, ಅಂಥ ಖಾಲಿ ಹುದ್ದೆಯನ್ನು ಮುಂದಿನ ನೇಮಕಾತಿ ವರ್ಷಕ್ಕೆ ಮುಂದುವರಿಸಿಕೊಂಡು ಹೋಗತಕ್ಕದ್ದು ಮತ್ತು ಒಂದು ವೇಳೆ ನಂತರದ ನೇಮಕಾತಿ ವರ್ಷದಲ್ಲೂ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಸೂಕ್ತ ವ್ಯಕ್ತಿ ಲಭ್ಯವಿಲ್ಲದಿದ್ದರೆ, ಮೇಲ್ಕಂಡ ಐದು ಪ್ರವರ್ಗಗಳ ಪೈಕಿಯಿಂದಲೇ ಆಂತರಿಕ ಬದಲಾವಣೆಯ ಮೂಲಕ ಆ ಹುದ್ದೆಯನ್ನು ಭರ್ತಿಮಾಡಬಹುದು ಮತ್ತು ಆ ತರುವಾಯದ ವರ್ಷವೂ ಸಹ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಅಂಥ ವ್ಯಕ್ತಿಗಳು ಲಭ್ಯವಾಗದಿದ್ದಾಗ, ನಿಯೋಜಕನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಯಲ್ಲದ ಇತರೆ ಯಾರೇ ವ್ಯಕ್ತಿಯನ್ನು ಆ ಖಾಲಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳತಕ್ಕದ್ದು:

ಪರಂತು, ಕಾರ್ಯಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಸ್ವರೂಪದ ಕೆಲಸಕ್ಕೆ ಅಂಥ ಪ್ರವರ್ಗದ ವ್ಯಕ್ತಿಯನ್ನು ನಿಯೋಜಿಸಿಕೊಳ್ಳಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಅಂಥ ಖಾಲಿ ಹುದ್ದೆಗಳನ್ನು

ಸಮುಚಿತ ಸರ್ಕಾರದಿಂದ ಮುಂಚಿತವಾಗಿಯೇ ಅನುಮತಿಯನ್ನು ಪಡೆದು ಮೇಲ್ಕಂಡ ಐದು ಪ್ರವರ್ಗಗಳ ಪೈಕಿಯಿಂದ ಆಂತರಿಕ ಬದಲಾವಣೆ ಮೂಲಕ ಭರ್ತಿಮಾಡಬಹುದು.

(3) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಅದು ಪರಿಗಣಿಸಬಹುದಾದಂಥ ರೀತಿಯಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಉದ್ಯೋಗಕ್ಕಾಗಿ ವಯೋಮಿತಿಯಲ್ಲಿ ವಿನಾಯಿತಿಯನ್ನು ನೀಡಬಹುದು.

**35. ಖಾಸಗಿ ವಲಯದಲ್ಲಿನ ಉದ್ಯೋಗದಾತರಿಗೆ ಪ್ರೋತ್ಸಾಹಕಗಳು.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ತಮ್ಮ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಯೊಳಗೆ, ಖಾಸಗಿ ವಲಯದಲ್ಲಿನ ಉದ್ಯೋಗದಾತರು ಅವರಲ್ಲಿರುವ ಕೆಲಸಗಾರರ ಪೈಕಿ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಕೊನೆಪಕ್ಷ ಶೇಕಡ ಐದರಷ್ಟು ವ್ಯಕ್ತಿಗಳು ಇರುವುದನ್ನು ಖಚಿತಪಡಿಸಿಕೊಂಡು, ಅಂಥ ಉದ್ಯೋಗದಾತರಿಗೆ ಪ್ರೋತ್ಸಾಹಕಗಳನ್ನು ನೀಡತಕ್ಕದ್ದು.

**36. ವಿಶೇಷ ಉದ್ಯೋಗ ವಿನಿಮಯ ಕೇಂದ್ರ.–** ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿಗದಿಪಡಿಸಿದಂಥ ದಿನಾಂಕದಿಂದ ಪ್ರತಿಯೊಂದು ಸಂಸ್ಥೆಯ ಉದ್ಯೋಗದಾತನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಗೊತ್ತುಪಡಿಸಿದ ಖಾಲಿ ಸ್ಥಾನಗಳನ್ನು ಅಥವಾ ಖಾಲಿ ಆಗಲಿರುವ ಸ್ಥಾನಗಳನ್ನು, ಆ ಸಂಸ್ಥೆಯಲ್ಲಿ ಖಾಲಿ ಇರುವ ಸ್ಥಾನಗಳು ಕೇಂದ್ರ ಸರ್ಕಾರವು ನಿಯಮಿಸಿದಂಥ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಯನ್ನು ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಿಳಿಸುವಂತೆ ಅಗತ್ಯಪಡಿಸತಕ್ಕದ್ದು ಹಾಗೂ ಆ ಸಂಸ್ಥೆಯು ಆ ತರುವಾಯ ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

**37. ವಿಶೇಷ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ, ಅಧಿಸೂಚನೆ ಮೂಲಕ:–

(ಎ) ಸಂಬಂಧಪಟ್ಟ ಎಲ್ಲ ಯೋಜನೆಗಳಲ್ಲಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೃಷಿ ಭೂಮಿ ಮತ್ತು ವಸತಿ ಹಂಚಿಕೆಯಲ್ಲಿ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಮಹಿಳೆಯರಿಗೆ ಯುಕ್ತ ಆದ್ಯತೆ ಸಹಿತ ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು;

(ಬಿ) ಎಲ್ಲಾ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಮಹಿಳೆಯರಿಗೆ ಯುಕ್ತ ಆದ್ಯತೆ ಸಹಿತ ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು;

(ಸಿ) ವಸತಿ, ಆಶ್ರಯ, ವೃತ್ತಿ, ವ್ಯವಹಾರ, ಉದ್ಯಮ, ಮನರಂಜನೆ ಕೇಂದ್ರಗಳು ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕೆ ಉತ್ತೇಜನ ನೀಡುವ ಸಲುವಾಗಿ ಭೂಮಿಯನ್ನು ಬಳಕೆ ಮಾಡುವುದಿದ್ದರೆ ರಿಯಾಯಿತಿ ದರದಲ್ಲಿ ಭೂಮಿಯನ್ನು ಹಂಚಿಕೆ ಮಾಡಲು ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು.

## ಅಧ್ಯಾಯ VII

## ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು

**38. ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು.–** (1) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಯಾರೇ ವ್ಯಕ್ತಿಯು, ತನಗೆ ಉನ್ನತ ಬೆಂಬಲದ ಅಗತ್ಯವಿದೆ ಎಂದೆನಿಸಿದರೆ, ಆತನು ಅಥವಾ ಆತನ ಅಥವಾ ಆಕೆಯ ಪರವಾಗಿ ಯಾರೇ ವ್ಯಕ್ತಿಯು ಅಥವಾ ಸಂಘಟನೆಯು ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದ ಪ್ರಾಧಿಕಾರಕ್ಕೆ ಉನ್ನತ ಬೆಂಬಲ ಕೋರಿ ಅರ್ಜಿಯನ್ನು ಸಲ್ಲಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಸದಸ್ಯರನ್ನು ಒಳಗೊಂಡಿರುವ ನಿರ್ಧರಣೆ ಮಂಡಳಿಗೆ ಅದನ್ನು ಕಳುಹಿಸತಕ್ಕದ್ದು.

(3) ನಿರ್ಧರಣೆ ಮಂಡಳಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ (1)ನೇ ಉಪಪ್ರಕರಣದ ಮೇರೆಗೆ ತನಗೆ ಬಂದ ಅರ್ಜಿ ಬಗ್ಗೆ ನಿರ್ಧರಣೆ ಮಾಡತಕ್ಕದ್ದು ಮತ್ತು ಉನ್ನತ ಬೆಂಬಲದ ಅಗತ್ಯತೆಯನ್ನು ಮತ್ತು ಅದರ ಸ್ವರೂಪವನ್ನು ಪ್ರಮಾಣೀಕರಿಸಿ ಆ ಪ್ರಾಧಿಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಆ ಪ್ರಾಧಿಕಾರವು ಆ ವರದಿಗೆ ಅನುಸಾರವಾಗಿ ಮತ್ತು ಸಂಬಂಧಿಸಿದ ಯೋಜನೆಗಳು ಮತ್ತು ಈ ಸಂಬಂಧ ಸಮುಚಿತ ಸರ್ಕಾರದ ಆದೇಶಗಳಿಗೆ ಒಳಪಟ್ಟು ಅಂಥ ಬೆಂಬಲವನ್ನು ಒದಗಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ VIII

## ಸಮುಚಿತ ಸರ್ಕಾರಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು

**39. ಜಾಗೃತಿ ಶಿಬಿರಗಳು.–** (1) ಸಮುಚಿತ ಸರ್ಕಾರವು, ಚೀಫ್ ಕಮಿಷನರ್ ಅಥವಾ ಸಂದರ್ಭಾನುಸಾರ ಸ್ಟೇಟ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಮೇರೆಗೆ

ಅಂಗವಿಕಲ ವ್ಯಕ್ತಿಗಳಿಗೆ ಕೊಟ್ಟಿರುವ ಹಕ್ಕುಗಳನ್ನು ಸಂರಕ್ಷಿಸಲಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಜಾಗೃತಿ ಶಿಬಿರಗಳನ್ನು ಮತ್ತು ಸಂವೇದನಾಶೀಲತೆ ಕಾರ್ಯಕ್ರಮಗಳನ್ನು ಏರ್ಪಡಿಸತಕ್ಕದ್ದು ಮತ್ತು ಅವುಗಳಿಗೆ ಪ್ರೋತ್ಸಾಹ, ಬೆಂಬಲ ಅಥವಾ ಉತ್ತೇಜನವನ್ನು ನೀಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ನಿರ್ದಿಷ್ಟಪಡಿಸಿದ ಕಾರ್ಯಕ್ರಮಗಳು ಮತ್ತು ಶಿಬಿರಗಳು,-

(ಎ) ಸಮ್ಮಿಳಿತ, ಸಹನೆ, ಸಹಾನುಭೂತಿ ಗುಣಗಳಿಗೆ ಉತ್ತೇಜನ ನೀಡತಕ್ಕದ್ದು ಮತ್ತು ವ್ಯಕ್ತಿ ವೈವಿಧ್ಯತೆಯನ್ನು ಗೌರವಿಸತಕ್ಕದ್ದು;

(ಬಿ) ಅಂಗವಿಕಲ ವ್ಯಕ್ತಿಗಳ ಕೌಶಲ್ಯಗಳನ್ನು, ಗುಣಗಳನ್ನು ಮತ್ತು ಅವರಲ್ಲಿರುವ ಸಾಮರ್ಥ್ಯಗಳನ್ನು ಮತ್ತು ಕಾರ್ಯ ಬಲಕ್ಕೆ, ದುಡಿಮೆ ಕ್ಷೇತ್ರಕ್ಕೆ ಮತ್ತು ವೃತ್ತಿಗೆ ತಕ್ಕ ಶುಲ್ಕಕ್ಕೆ ಅವರ ಕೊಡುಗೆಗಳನ್ನು ಮುಂಚಿತವಾಗಿಯೇ ಕಂಡುಕೊಳ್ಳತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳು ತಮ್ಮ ಕೌಟುಂಬಿಕ ಜೀವನ, ಸಂಬಂಧಗಳು, ಸಂತಾನೋತ್ಪತ್ತಿ ಮತ್ತು ಮಕ್ಕಳನ್ನು ಬೆಳೆಸುವ ಬಗ್ಗೆ ಅವರು ತೆಗೆದುಕೊಳ್ಳುವ ನಿರ್ಧಾರಗಳನ್ನು ಗೌರವಿಸುವುದಕ್ಕೆ ಉತ್ತೇಜನ ನೀಡತಕ್ಕದ್ದು;

(ಡಿ) ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ ಮತ್ತು ವೃತ್ತಿಪರ ತರಬೇತಿ ಹಂತಗಳಲ್ಲಿ, ಮಾನವ ಅಂಗವಿಕಲತೆಯ ಮಾನವೀಯ ಸ್ಥಿತಿ ಬಗ್ಗೆ ಮತ್ತು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಬಗ್ಗೆ ಪರಿಚಯ ಮಾಡಿಕೊಡತಕ್ಕದ್ದು ಮತ್ತು ಸಂವೇದನಾಶೀಲತೆಯನ್ನು ಮೂಡಿಸತಕ್ಕದ್ದು;

(ಇ) ಅಂಗವಿಕಲರನ್ನು ಅಶಕ್ತರನ್ನಾಗಿಸಿರುವ ಪರಿಸ್ಥಿತಿಗಳ ಮತ್ತು ಅವರ ಹಕ್ಕುಗಳ ಬಗ್ಗೆ ಉದ್ಯೋಗದಾತರಿಗೆ, ಆಡಳಿತಗಾರರಿಗೆ ಮತ್ತು ಸಹೋದ್ಯೋಗಿ ಕೆಲಸಗಾರರಿಗೆ ಪರಿಚಯ ಮಾಡಿಕೊಡತಕ್ಕದ್ದು, ತಿಳುವಳಿಕೆ ಮತ್ತು ಸಂವೇದನಾಶೀಲತೆಯನ್ನು ಮೂಡಿಸತಕ್ಕದ್ದು;

(ಎಫ್) ವಿಶ್ವವಿದ್ಯಾನಿಲಯಗಳ, ಕಾಲೇಜುಗಳ ಮತ್ತು ಶಾಲೆಗಳ ಪಠ್ಯಕ್ರಮಗಳಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳು ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**40. ಸುಲಭ ಲಭ್ಯತೆ.-** ಕೇಂದ್ರ ಸರ್ಕಾರವು, ಚೀಫ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಸಮರ್ಪಕ ತಂತ್ರಜ್ಞಾನಗಳು ಮತ್ತು ಸಿಸ್ಟಂಗಳೂ ಸೇರಿದಂತೆ ಅಂಗವಿಕಲ ವ್ಯಕ್ತಿಗಳಿಗೆ ಭೌತಿಕ ಪರಿಸರ,

ಸಾರಿಗೆ, ಮಾಹಿತಿ ಮತ್ತು ಸಂಪರ್ಕಗಳು ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಸಾರ್ವಜನಿಕರಿಗೆ ಒದಗಿಸಿರುವ ಇತರ ಸೌಲಭ್ಯಗಳು ಮತ್ತು ಸೇವೆಗಳು ಸುಲಭವಾಗಿ ಲಭ್ಯವಾಗುವುದಕ್ಕೆ ಮಾನದಂಡಗಳನ್ನು ಗೊತ್ತುಪಡಿಸಿರುವ ನಿಯಮಗಳನ್ನು ರೂಪಿಸತಕ್ಕದ್ದು.

41. **ಸುಲಭ ಸಾರಿಗೆ ಸಂಪರ್ಕ ವ್ಯವಸ್ಥೆ.**- (1) ಸಮುಚಿತ ಸರ್ಕಾರವು,-

(ಎ) ಅಂಗವಿಕಲ ವ್ಯಕ್ತಿಗಳಿಗೆ ವಾಹನ ನಿಲುಗಡೆ ಸ್ಥಳಗಳ, ಶೌಚಾಲಯಗಳ, ಟಿಕೇಟ್ ನೀಡಿಕೆ ಕೌಂಟರ್‌ಗಳಲ್ಲಿ ಮತ್ತು ಟಿಕೇಟ್ ನೀಡಿಕೆ ಯಂತ್ರಗಳು ಸುಲಭವಾಗಿ ಲಭ್ಯವಾಗುವಂತೆ ರೂಪಿಸಿರುವ ಮಾನದಂಡಗಳಿಗೆ ಅನುಸಾರವಾಗಿ ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಮತ್ತು ವಿಮಾನ ನಿಲ್ದಾಣಗಳಲ್ಲಿ ಸೌಕರ್ಯಗಳನ್ನು ಒದಗಿಸಲು;

(ಬಿ) ಅಂಗವಿಕಲ ವ್ಯಕ್ತಿಗಳಿಗಾಗಿ, ತಾಂತ್ರಿಕವಾಗಿ ಎಲ್ಲೆಲ್ಲಿ ಅನುಕೂಲಕರವೋ ಮತ್ತು ಸುರಕ್ಷಿತವೋ ಅಲ್ಲೆಲ್ಲಾ ಆರ್ಥಿಕ ಯೋಗ್ಯ ಮತ್ತು ವಿನ್ಯಾಸದಲ್ಲಿ ರಚನೆಗೆ ಸಂಬಂಧಿಸಿದಂತೆ ಭಾರೀ ಬದಲಾವಣೆಗಳಿಗೆ ಒಳಗಾಗದಂತೆ ಸಾರಿಗೆ ವ್ಯವಸ್ಥೆಯ ಎಲ್ಲ ಬಗೆಯ ಹಳೆಯ ವಿನ್ಯಾಸಗಳೂ ಸೇರಿದಂತೆ ವಿನ್ಯಾಸದ ಮಾನದಂಡಗಳಿಗೆ ಅನುಗುಣವಾಗಿರುವ ಎಲ್ಲ ಬಗೆಯ ಸಾರಿಗೆಯ ಹಳೆಯ ಬಗೆಗಳನ್ನು ಮರು ಮಾರ್ಪಾಡು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಲು;

(ಸಿ) ಅಂಗವಿಕಲ ವ್ಯಕ್ತಿಗಳು ರಸ್ತೆಗಳಲ್ಲಿ ಸುಗಮವಾಗಿ ಸಂಚರಿಸಲು ಅನುಕೂಲಕರವಾದ ಸುಲಭ ಲಭ್ಯ ರಸ್ತೆಗಳನ್ನು ಒದಗಿಸಲು

- ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ತಮಗೆ ಕೈಗೆಟಕುವ ದರಗಳಲ್ಲಿ ಖುದ್ದಾಗಿ ಸಂಚರಿಸುವುದನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅವರಿಗೆ,-

(ಎ) ಪ್ರೋತ್ಸಾಹಕಗಳನ್ನು ಮತ್ತು ರಿಯಾಯಿತಿಗಳನ್ನು ನೀಡಲು;

(ಬಿ) ವಾಹನಗಳನ್ನು ಪುನರ್ ಮಾರ್ಪಡಿಸಲು; ಮತ್ತು

(ಸಿ) ಖುದ್ದು ಸಂಚಾರಕ್ಕೆ ನೆರವನ್ನು ಒದಗಿಸಲು

- ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

42. **ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಪಡೆದುಕೊಳ್ಳಲು ಅವಕಾಶ.**- ಸಮುಚಿತ ಸರ್ಕಾರವು,-

ಅಂಗವಿಕಲರಿಗೆ –

(i) ಶ್ರವಣ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಲಭ್ಯವಿರುವ ಎಲ್ಲ ವಿಷಯ ವಸ್ತುಗಳು ಸುಲಭಲಭ್ಯ ರೀತಿಯಲ್ಲಿ ದೊರೆಯುವಂತೆ ಮಾಡಲು;

(ii) ಶ್ರವ್ಯ ವರ್ಣನೆ, ಸಂಜ್ಞಾ ಭಾಷೆಯಲ್ಲಿ ಅರ್ಥವಿವರಣೆ ಮತ್ತು ತದ್ವತ್ ಶೀರ್ಷಿಕೆಗಳು ಅಂಗವಿಕಲ ವ್ಯಕ್ತಿಗಳಿಗೆ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಸುಲಭ ರೀತಿಯಲ್ಲಿ ದೊರೆಯುವಂತೆ ಮಾಡಲು;

(iii) ದಿನನಿತ್ಯ ಬಳಕೆ ಮಾಡಲಾಗುವ ವಿದ್ಯುನ್ಮಾನ ವಸ್ತುಗಳು ಮತ್ತು ಸಲಕರಣೆಗಳು ಸಾರ್ವತ್ರಿಕ ವಿನ್ಯಾಸದಲ್ಲಿ ಲಭ್ಯವಾಗುವಂತೆ ಮಾಡಲು

– ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

43. **ಗ್ರಾಹಕ ಸರಕುಗಳು.–** ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳ ಸಾಮಾನ್ಯ ಬಳಕೆಗಾಗಿ ಎಲ್ಲರಿಗೂ ಸಾರ್ವತ್ರಿಕ ವಿನ್ಯಾಸದ ಗ್ರಾಹಕ ಉತ್ಪನ್ನಗಳ ಉತ್ಪಾದನೆಗೆ ಮತ್ತು ವಿತರಣೆಗೆ ಉತ್ತೇಜನ ನೀಡಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

44. **ಸುಗಮ ಪ್ರವೇಶದ ನಿಬಂಧನೆಗಳ ಕಡ್ಡಾಯ ಪಾಲನೆ .–** (1) ಯಾವುದೇ ಸಂಸ್ಥೆಗೆ, ಕಟ್ಟಡದ ನಕ್ಷೆಯು 40ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಗುಣವಾಗಿಲ್ಲದಿದ್ದರೆ ಆ ಯಾವುದೇ ನಿರ್ಮಿತಿಗೆ ಅನುಮತಿಯನ್ನು ನೀಡತಕ್ಕದ್ದಲ್ಲ.

(2) ಯಾವುದೇ ಸಂಸ್ಥೆಗೆ, ಕಟ್ಟಡವು ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಗುಣವಾಗಿಲ್ಲದ ಹೊರತು ಕಟ್ಟಡವು ಪೂರ್ಣಗೊಂಡಿರುವುದಕ್ಕೆ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲ ಅಥವಾ ವಾಸಕ್ಕಾಗಿ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದಕ್ಕೆ ಅನುಮತಿ ಕೊಡತಕ್ಕದ್ದಲ್ಲ.

45. **ಈಗ ಇರುವ ಮೂಲ ಸೌಲಭ್ಯಗಳು ಮತ್ತು ಆವರಣಗಳು ಸುಲಭ ಲಭ್ಯವಾಗುವಂತೆ ಮಾಡಲು ಹಾಗೂ ಈ ಉದ್ದೇಶಕ್ಕಾಗಿ ಕ್ರಮ ಕೈಗೊಳ್ಳಲು ಕಾಲಮಿತಿ.–** (1) ಈಗ ಇರುವ ಎಲ್ಲ ಸಾರ್ವಜನಿಕ ಕಟ್ಟಡಗಳು, ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗೆ ಅನುಸಾರವಾಗಿ ಹಾಗೂ ಅಂಥ ನಿಯಮಗಳಲ್ಲಿ ತಿಳಿಸಿದ ದಿನಾಂಕದಿಂದ ಐದು ವರ್ಷಗಳು ಮೀರದ ಅವಧಿಯೊಳಗಾಗಿ ಅವುಗಳು ಅಂಗವಿಕಲರಿಗೆ ಸುಲಭ ಲಭ್ಯವಾಗುವಂತೆ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ರಾಜ್ಯಗಳಿಗೆ ಈ ಬಗ್ಗೆ ಅವುಗಳ ಸಿದ್ಧತೆ ಮತ್ತು ಇತರ ಸಂಬಂಧಿತ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡು ಪ್ರಕರಣವಾರು ಆಧಾರದ ಮೇಲೆ ರಾಜ್ಯಗಳಿಗೆ ಕಾಲಮಿತಿಯನ್ನು ವಿಸ್ತರಿಸಲು ಅನುಮತಿ ನೀಡಬಹುದು.

(2) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ತಮ್ಮ ವ್ಯಾಪ್ತಿಯಲ್ಲಿ ಅವಶ್ಯಕ ಸೇವೆಗಳನ್ನು ಒದಗಿಸುವಂಥ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ನಿರ್ಮಿಸುವಂಥ ಕಟ್ಟಡಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಪ್ರವೇಶಾವಕಾಶವನ್ನು ಸುಲಭ ಲಭ್ಯಗೊಳಿಸುವುದಕ್ಕಾಗಿ ಆದ್ಯತೆಯ ಮೇರೆಗೆ ಕ್ರಿಯಾಯೋಜನೆಯನ್ನು ರೂಪಿಸತಕ್ಕದ್ದು ಮತ್ತು ಅದನ್ನು ಪ್ರಕಟಿಸತಕ್ಕದ್ದು.

**46. ಸುಲಭ ಲಭ್ಯ ಸೇವೆಯನ್ನು ಒದಗಿಸುವವರಿಗೆ ಕಾಲಮಿತಿ.**– ಸೇವೆಯನ್ನು ಒದಗಿಸುವವರು, ಅದು ಸರ್ಕಾರವಾಗಿರಲೀ ಅಥವಾ ಅವರು ಖಾಸಗಿಯವರಾಗಿರಲೀ, 40ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರೂಪಿಸಿದ ಸುಲಭಲಭ್ಯ ನಿಯಮಗಳಿಗೆ ಅನುಸಾರವಾಗಿ, ಅಂಥ ನಿಯಮಗಳಲ್ಲಿ ತಿಳಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗಾಗಿ ಅಂಥ ಸೇವೆಗಳನ್ನು ಒದಗಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಚೀಫ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಸದರಿ ನಿಯಮಗಳಿಗೆ ಅನುಸಾರವಾಗಿ ನಿರ್ದಿಷ್ಟ ಪ್ರವರ್ಗದ ಸೇವೆಗಳನ್ನು ಕಲ್ಪಿಸುವುದಕ್ಕಾಗಿ ಇರುವ ಕಾಲಾವಕಾಶವನ್ನು ವಿಸ್ತರಿಸಿ ಅನುಮೋದಿಸಬಹುದು.

**47. ಮಾನವ ಸಂಪನ್ಮೂಲ ಅಭಿವೃದ್ಧಿ.**– (1) ಭಾರತ ಪುನರ್ವಸತಿ ಪರಿಷತ್ ಅಧಿನಿಯಮ, 1992 (1992ರ 34) ರ ಮೇರೆಗೆ ರಚಿತವಾದ ಭಾರತ ಪುನರ್ವಸತಿ ಪರಿಷತ್ತಿನ ಯಾವುದೇ ಕರ್ತವ್ಯಕ್ಕೆ ಮತ್ತು ಅಧಿಕಾರಕ್ಕೆ ಬಾಧಕವಾಗದಂತೆ, ಸಮುಚಿತ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪ್ರಯತ್ನಿಸತಕ್ಕದ್ದು ಮತ್ತು,–

(ಎ) ಅಂಗವಿಕಲರ ಹಕ್ಕುಗಳ ಮಾಹಿತಿಯನ್ನು ಪಂಚಾಯತ್ ರಾಜ್ ಸದಸ್ಯರು, ವಿಧಾನಮಂಡಲದ ಸದಸ್ಯರು, ಆಡಳಿತಗಾರರು, ಪೊಲೀಸ್ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ವಕೀಲರುಗಳ ತರಬೇತಿಗಾಗಿ ಇರುವ ಎಲ್ಲ ಪಠ್ಯಕ್ರಮಗಳಲ್ಲಿ ಸೇರಿಸಿ ಆ ಬಗ್ಗೆ ತರಬೇತಿ ನೀಡುವುದು ಕಡ್ಡಾಯವಾಗಿರತಕ್ಕದ್ದು;

(ಬಿ) ಶಾಲೆಗಳ, ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯ ಬೋಧಕರ, ವೈದ್ಯರ, ಶುಶ್ರೂಷಕರ, ಅರೆ–ವೈದ್ಯಕೀಯ ಸಿಬ್ಬಂದಿಗಳ, ಸಮಾಜ ಕಲ್ಯಾಣ ಅಧಿಕಾರಿಗಳ, ಗ್ರಾಮೀಣಾಭಿವೃದ್ಧಿ ಅಧಿಕಾರಿಗಳ, ಆಶಾ ಕಾರ್ಯಕರ್ತರ, ಅಂಗನವಾಡಿ ಕಾರ್ಯಕರ್ತರ, ಇಂಜಿನಿಯರ್‌ಗಳ,

ವಾಸ್ತುಶಿಲ್ಪಿಗಳ, ಇತರ ವೃತ್ತಿನಿರತರ ಮತ್ತು ಸಮುದಾಯ ಕಾರ್ಯಕರ್ತರುಗಳ ಎಲ್ಲ ಶೈಕ್ಷಣಿಕ ಪಠ್ಯಕ್ರಮಗಳಲ್ಲಿ ಅಂಗವಿಕಲತೆಯು ಒಂದು ಘಟಕವಾಗಿ ಇರುವಂತೆ ಸೇರಿಸತಕ್ಕದ್ದು;

(ಸಿ) ಅಂಗವಿಕಲರಿಗೆ ಪಾಲನೆ ಪೋಷಣೆ ಮಾಡುವುದಕ್ಕೆ ಮತ್ತು ಅವರಿಗೆ ಬೆಂಬಲ ನೀಡುವುದಕ್ಕೆ ಸಂಬಂಧಿಸಿದಂತೆ ಕುಟುಂಬಗಳಿಗೆ, ಸಮುದಾಯ ಸದಸ್ಯರುಗಳಿಗೆ ಮತ್ತು ಇತರ ಆಸಕ್ತದಾರರಿಗೆ ಮತ್ತು ಪಾಲನ ಪೋಷಣೆ ಒದಗಿಸುವವರಿಗೆ ಅಂಗವಿಕಲರು ಸ್ವತಂತ್ರ ಜೀವನ ನಡೆಸುವ ಬಗ್ಗೆ, ಸಮುದಾಯ ಬಾಂಧವ್ಯದ ಬಗ್ಗೆ ತರಬೇತಿ ನೀಡುವುದೂ ಸೇರಿದಂತೆ ಅವರಿಗೆ ಸಾಮರ್ಥ್ಯವರ್ಧನಾ ಕಾರ್ಯಕ್ರಮಗಳನ್ನು ಪ್ರಾರಂಭಿಸತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ಸ್ವತಂತ್ರವಾಗಿ ಇತರರೊಂದಿಗೆ ಸಕ್ರಿಯವಾಗಿ ಪಾಲ್ಗೊಳ್ಳುವ ಮತ್ತು ಪರಸ್ಪರ ಕೊಡುಗೆ ಗೌರವ ನೀಡಿಕೆ ಬಗ್ಗೆ ಸಮುದಾಯ ಸಂಬಂಧಗಳನ್ನು ವರ್ಧಿಸುವುದಕ್ಕಾಗಿ ಸ್ವತಂತ್ರ ತರಬೇತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಇ) ಕ್ರೀಡೆಗಳು, ಆಟಗಳು, ಸಾಹಸ ಚಟುವಟಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ರೀಡಾ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸತಕ್ಕದ್ದು;

(ಎಫ್) ಅಗತ್ಯವಾಗಬಹುದಾದ ಯಾವುದೇ ಇತರ ಸಾಮರ್ಥ್ಯಾಭಿವೃದ್ಧಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಎಲ್ಲ ವಿಶ್ವವಿದ್ಯಾನಿಲಯಗಳು ಅಂಗವೈಕಲ್ಯತೆ ಕುರಿತ ಅಧ್ಯಯನಗಳಿಗಾಗಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದೂ ಸೇರಿದಂತೆ, ಅಂಥ ಅಧ್ಯಯನಗಳಲ್ಲಿ ಬೋಧನೆಗೆ ಮತ್ತು ಸಂಶೋಧನೆಗೆ ಉತ್ತೇಜನ ನೀಡತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಹೇಳಲಾದ ಬಾಧ್ಯತೆಯನ್ನು ಈಡೇರಿಸುವ ಸಲುವಾಗಿ, ಸಮುಚಿತ ಸರ್ಕಾರವು, ಪ್ರತಿ ಐದು ವರ್ಷಕ್ಕೊಮ್ಮೆ ಅಗತ್ಯಾಧಾರಿತ ವಿಶ್ಲೇಷಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ವಿವಿಧ ಹೊಣೆಗಾರಿಕೆಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಸೂಕ್ತ ಸಿಬ್ಬಂದಿಯ ನೇಮಕಾತಿ, ನೇಮಕ, ಸಂವೇದನಾಶೀಲತೆ, ಪರಿಚಯ ಮತ್ತು ತರಬೇತಿಗಾಗಿ ಯೋಜನೆಗಳನ್ನು ರೂಪಿಸತಕ್ಕದ್ದು.

**48. ಸಾಮಾಜಿಕ ಪರಿಶೋಧನೆ.**- ಸಮುಚಿತ ಸರ್ಕಾರವು, ಅಂಗವಿಕಲರಿಗೆ ಸಂಬಂಧಪಡುವ ಯೋಜನೆ ಮತ್ತು ಕಾರ್ಯಕ್ರಮಗಳು ಆ ವ್ಯಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರ ಅಗತ್ಯತೆಗಳನ್ನು ಮತ್ತು

ಕಾಳಜಿಗಳನ್ನು ಪರಿಗಣನೆಗೆ ತೆಗೆದುಕೊಂಡು ಅವರಿಗಾಗಿ ರೂಪಿಸಿದ ಎಲ್ಲ ಸಾಮಾನ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸಾಮಾಜಿಕ ಪರಿಶೋಧನೆಯನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ IX

## ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಗಳ ನೋಂದಣಿ ಮತ್ತು ಅಂಥ ಸಂಸ್ಥೆಗಳಿಗೆ ಅನುದಾನಗಳು

**49. ಸಕ್ಷಮ ಪ್ರಾಧಿಕಾರ.–** ರಾಜ್ಯ ಸರ್ಕಾರವು ಈ ಅಧ್ಯಾಯದ ಉದ್ದೇಶಗಳಿಗಾಗಿ ಸೂಕ್ತವೆಂದು ಅದು ಭಾವಿಸಬಹುದಾದಂತಹ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರವೆಂದು ನೇಮಕ ಮಾಡತಕ್ಕದ್ದು.

**50. ನೋಂದಣಿ.–** ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾರೇ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ಈ ಸಂಬಂಧವಾಗಿ ನೀಡಿದ ನೋಂದಣಿ ಪ್ರಮಾಣಪತ್ರದ ಅನುಸಾರವಾಗಿ ಹೊರತು, ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ:

ಪರಂತು, ಮಾನಸಿಕ ಅಸ್ವಸ್ಥ ವ್ಯಕ್ತಿಗಳ ಪಾಲನೆಗಾಗಿ ಮಾನಸಿಕ ಆರೋಗ್ಯ ಅಧಿನಿಯಮ, 1987 (1987ರ 14)ರ 8ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಮೇರೆಗೆ ಸಿಂಧುವಾದ ಲೈಸೆನ್ಸ್ ಅನ್ನು ಹೊಂದಿರುವ ಸಂಸ್ಥೆಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

**51. ನೋಂದಣಿ ಪ್ರಮಾಣಪತ್ರದ ಅರ್ಜಿ ಮತ್ತು ನೀಡಿಕೆ.–** (1) ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ಅಂಥ ರೀತಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸಕ್ಷಮ ಪ್ರಾಧಿಕಾರವು, ಅರ್ಜಿದಾರನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ್ದಾನೆಂದು ಮನದಟ್ಟು ಮಾಡಿಕೊಳ್ಳುವ ಸಂಬಂಧ ಅದು ವಿಹಿತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ನಡೆಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಸ್ವೀಕರಿಸಿದ ತೊಂಭತ್ತು ದಿನಗಳ ಅವಧಿಯೊಳಗಾಗಿ ಅರ್ಜಿದಾರನಿಗೆ ಅಂಥ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಆ ಬಗ್ಗೆ ಮನದಟ್ಟಾಗದಿದ್ದರೆ ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ ಅಂಥ ಅರ್ಜಿಯನ್ನು ಆದೇಶದ ಮೂಲಕ ತಿರಸ್ಕರಿಸತಕ್ಕದ್ದು:

ಪರಂತು, ಪ್ರಮಾಣಪತ್ರ ನೀಡಲು ನಿರಾಕರಿಸುವ ಆದೇಶ ಹೊರಡಿಸುವುದಕ್ಕೆ ಮುಂಚೆ, ಸಕ್ಷಮ ಪ್ರಾಧಿಕಾರವು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶ ನೀಡತಕ್ಕದ್ದು ಮತ್ತು ಪ್ರಮಾಣಪತ್ರ ನೀಡಲು ನಿರಾಕರಿಸಿದ ಪ್ರತಿಯೊಂದು ಆದೇಶವನ್ನು ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

(3) ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಸಂಸ್ಥೆಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸೌಲಭ್ಯಗಳನ್ನು ನೀಡುವ ಮತ್ತು ಮಾನದಂಡಗಳನ್ನು ಈಡೇರಿಸುವ ಸ್ಥಿತಿಯಲ್ಲಿ ಇದ್ದ ಹೊರತು, ಅಂಥ ಸಂಸ್ಥೆಗೆ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ನೋಂದಣಿ ಪ್ರಮಾಣಪತ್ರ ನೀಡತಕ್ಕದ್ದಲ್ಲ.

(4) ಉಪಪ್ರಕರಣ (2)ರ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರವನ್ನು,-

(ಎ) ಪ್ರಕರಣ 52ರ ಮೇರೆಗೆ ರದ್ದುಗೊಳಿಸಿದ್ದ ಹೊರತು, ಅದು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯವರೆಗೂ ಜಾರಿಯಲ್ಲಿರತಕ್ಕದ್ದು.

(ಬಿ) ಕಾಲಕಾಲಕ್ಕೆ ಅಂಥ ಅವಧಿಗಾಗಿ ನವೀಕರಿಸಬಹುದು; ಮತ್ತು

(ಸಿ) ಅದು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(5) ನೋಂದಣಿ ಪ್ರಮಾಣಪತ್ರದ ನವೀಕರಣಕ್ಕಾಗಿ ಅರ್ಜಿಯನ್ನು, ಅದರ ಸಿಂಧುತ್ವದ ಅವಧಿ ಮುಕ್ತಾಯವಾಗುವುದಕ್ಕೂ ಮುಂಚೆ ಅರವತ್ತು ದಿನಗಳಿಗಿಂತ ಕಡಿಮೆ ಇಲ್ಲದ ಅವಧಿಯೊಳಗೆ ಸಲ್ಲಿಸತಕ್ಕದ್ದು.

(6) ನೋಂದಣಿ ಪ್ರಮಾಣಪತ್ರದ ಪ್ರತಿಯನ್ನು ಆ ಸಂಸ್ಥೆಯ ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

(7) ಉಪಪ್ರಕರಣ (1)ರ ಅಥವಾ ಉಪಪ್ರಕರಣ (5)ರ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು, ಸಕ್ಷಮ ಪ್ರಾಧಿಕಾರವು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯೊಳಗೆ ವಿಲೆ ಮಾಡತಕ್ಕದ್ದು.

**52. ನೋಂದಣಿಯ ರದ್ದತಿ.-** (1) ಪ್ರಕರಣ 51ರ (2)ನೇ ಉಪಪ್ರಕರಣದ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಯು,-

(ಎ) ಪ್ರಮಾಣಪತ್ರ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿಗೆ ಸಂಬಂಧಪಟ್ಟಂತೆ ಕೊಟ್ಟ ಮುಖ್ಯ ವಿವರಗಳು ಸರಿಯಾಗಿಲ್ಲವೆಂದು ಅಥವಾ ಸುಳ್ಳಾಗಿವೆಯೆಂದು; ಅಥವಾ

(ಬಿ) ಪ್ರಮಾಣಪತ್ರವನ್ನು ಯಾವ ನಿಯಮಗಳಿಗೆ ಅಥವಾ ಷರತ್ತುಗಳಿಗೆ ಒಳಪಟ್ಟು ನೀಡಲಾಗಿತ್ತೋ ಅವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದಾನೆಂದು ಅಥವಾ ಉಲ್ಲಂಘಿಸುವಂತೆ ಮಾಡಲು ಕಾರಣನಾಗಿದ್ದಾನೆಂದು

– ಸಕ್ಷಮ ಪ್ರಾಧಿಕಾರಕ್ಕೆ ನಂಬಲು ಕಾರಣ ಇದ್ದರೆ, ಅದು, ಸೂಕ್ತವೆಂದು ತಾನು ಭಾವಿಸುವಂಥ ರೀತಿಯಲ್ಲಿ ವಿಚಾರಣೆ ಮಾಡಿದ ನಂತರ, ಆ ಬಗ್ಗೆ ಆದೇಶವನ್ನು ಹೊರಡಿಸುವ ಮೂಲಕ ಪ್ರಮಾಣಪತ್ರವನ್ನು ರದ್ದುಪಡಿಸಬಹುದು:

ಪರಂತು, ಅರ್ಜಿದಾರನಿಗೆ ನಿಮ್ಮ ಪ್ರಮಾಣಪತ್ರವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ಕೇಳಿ ನೋಟೀಸ್ ನೀಡಿದ್ದ ಹೊರತು, ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಯಾವುದೇ ಸಂಸ್ಥೆಗೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರವನ್ನು (1)ನೇ ಉಪಪ್ರಕರಣದ ಮೇರೆಗೆ ರದ್ದುಗೊಳಿಸಲಾಗಿದ್ದರೆ, ಅಂಥ ಸಂಸ್ಥೆಯು ಆ ರದ್ದತಿಯ ದಿನದಿಂದ ಆ ಬಗ್ಗೆ ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು:

ಪರಂತು, ರದ್ದತಿಯ ಆದೇಶದ ವಿರುದ್ಧ 53ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲು ಅವಕಾಶ ಇದ್ದರೆ, ಅಂಥ ಸಂಸ್ಥೆಯು,–

(ಎ) ಅಂಥ ಅಪೀಲನ್ನು ಸಲ್ಲಿಸಲು ಗೊತ್ತುಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೇ ಅದು ಯಾವುದೇ ಅಪೀಲನ್ನು ಸಲ್ಲಿಸದಿದ್ದರೆ; ಅಥವಾ

(ಬಿ) ಅಂಥ ಅಪೀಲನ್ನು ಸಲ್ಲಿಸಲಾಗಿದ್ದು, ಆದರೆ, ಅಪೀಲಿನಲ್ಲಾದ ಆದೇಶದ ದಿನಾಂಕದಿಂದ ರದ್ದತಿ ಆದೇಶವನ್ನು ಎತ್ತಿ ಹಿಡಿದಿದ್ದರೆ

– ಅಂಥ ಸಂಸ್ಥೆಯ ಕಾರ್ಯನಿರ್ವಹಣೆಯು ನಿಂತುಹೋಗತಕ್ಕದ್ದು.

(3) ಸಂಸ್ಥೆಗೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸಿದ ತರುವಾಯ, ಅಂಥ ರದ್ದತಿಯ ದಿನಾಂಕದಂದು ಅಂಥ ಸಂಸ್ಥೆಯ ನಿವಾಸಿಯಾಗಿರುವ ಯಾರೇ ಅಂಗವಿಕಲ ವ್ಯಕ್ತಿಯನ್ನು,–

(ಎ) ಆತನ ಅಥವಾ ಆಕೆಯ ಪೋಷಕರ ಅಥವಾ ಗಂಡನ ಅಥವಾ ಹೆಂಡತಿಯ ಅಥವಾ ಸಂದರ್ಭಾನುಸಾರ ಕಾನೂನುಸಮ್ಮತ ಪಾಲಕರ ವಶಕ್ಕೆ ಒಪ್ಪಿಸತಕ್ಕದ್ದೆಂದು; ಅಥವಾ

(ಬಿ) ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು

– ಸಕ್ಷಮ ಪ್ರಾಧಿಕಾರವು ಅಂಥ ಸಂಸ್ಥೆಗೆ ನಿರ್ದೇಶನ ನೀಡಬಹುದು.

(4) ಈ ಪ್ರಕರಣದ ಮೇರೆಗೆ ರದ್ದುಪಡಿಸಿರುವ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವ ಪ್ರತಿಯೊಂದು ಸಂಸ್ಥೆಯು ಅಂಥ ರದ್ದತಿಯ ತರುವಾಯ ಕೂಡಲೇ ಅಂಥ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು.

**53. ಅಪೀಲು.–** (1) ನೋಂದಣಿ ಪ್ರಮಾಣಪತ್ರ ನೀಡಿಕೆಯನ್ನು ತಿರಸ್ಕರಿಸುವ ಅಥವಾ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸುವ ಸಕ್ಷಮ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಅಂಥ ತಿರಸ್ಕರಣೆಯ ಅಥವಾ ರದ್ದುಗೊಳಿಸುವ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಅಪೀಲಿನ ಸಂಬಂಧ ರಾಜ್ಯ ಸರ್ಕಾರ ನೀಡುವ ಆದೇಶವು ಅಂತಿಮವಾದುದಾಗಿರತಕ್ಕದ್ದು.

**54. ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇವುಗಳ ನಿರ್ವಹಣೆಯಲ್ಲಿರುವ ಸಂಸ್ಥೆಗಳಿಗೆ ಅಧಿನಿಯಮವು ಅನ್ವಯವಾಗದಿರುವುದು.–** ಈ ಅಧ್ಯಾಯದಲ್ಲಿ ಒಳಗೊಂಡಿರುವುದು ಯಾವುದೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇವುಗಳು ನಿರ್ವಹಿಸುತ್ತಿರುವ ಅಂಗವಿಕಲ ವ್ಯಕ್ತಿಗಳ ಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

**55. ನೋಂದಾಯಿತ ಸಂಸ್ಥೆಗಳಿಗೆ ನೆರವು.–** ಸಮುಚಿತ ಸರ್ಕಾರವು, ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ ನೋಂದಾಯಿತ ಸಂಸ್ಥೆಗಳು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮತ್ತು ಸೇವೆಗಳನ್ನು ಒದಗಿಸುವುದಕ್ಕೆ ಹಣಕಾಸು ನೆರವನ್ನು ನೀಡಬಹುದು.

## ಅಧ್ಯಾಯ X

## ನಿರ್ದಿಷ್ಟ ಅಂಗವಿಕಲತೆಗಳ ಪ್ರಮಾಣೀಕರಣ

**56. ನಿರ್ದಿಷ್ಟ ಅಂಗವಿಕಲತೆಗಳನ್ನು ನಿರ್ಧರಿಸುವುದಕ್ಕಾಗಿ ಮಾರ್ಗಸೂಚಿಗಳು.–** ಕೇಂದ್ರ ಸರ್ಕಾರವು ವ್ಯಕ್ತಿಯ ನಿರ್ದಿಷ್ಟ ಅಂಗವಿಕಲತೆಯ ಪ್ರಮಾಣವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮಾರ್ಗಸೂಚಿಗಳನ್ನು ಅಧಿಸೂಚಿಸತಕ್ಕದ್ದು.

**57. ಪ್ರಮಾಣೀಕರಿಸುವ ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು.–** (1) ಸಮುಚಿತ ಸರ್ಕಾರವು ಅಗತ್ಯ ವಿದ್ಯಾರ್ಹತೆಗಳು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳನ್ನು ಪ್ರಮಾಣೀಕರಿಸುವ ಪ್ರಾಧಿಕಾರಿಗಳನ್ನಾಗಿ ಗೊತ್ತುಪಡಿಸತಕ್ಕದ್ದು, ಅವರು ಅಂಗವಿಕಲತೆಯ ಪ್ರಮಾಣಪತ್ರವನ್ನು ನೀಡುವುದಕ್ಕೆ ಸಕ್ಷಮವಾಗಿರತಕ್ಕದ್ದು.

(2) ಸಮುಚಿತ ಸರ್ಕಾರವು, ಪ್ರಮಾಣೀಕರಿಸುವ ಪ್ರಾಧಿಕಾರಿಯು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ತನ್ನ ಅಧಿಕಾರವ್ಯಾಪ್ತಿಯೊಳಗೆ ಪ್ರಮಾಣೀಕರಣದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಎಂಬುದನ್ನು ಸಹ ಅಧಿಸೂಚಿಸತಕ್ಕದ್ದು.

**58. ಪ್ರಮಾಣೀಕರಣದ ಕಾರ್ಯವಿಧಾನ.–** (1) ನಿರ್ದಿಷ್ಟ ಅಂಗವಿಕಲತೆ ಇರುವ ಯಾರೇ ವ್ಯಕ್ತಿಯು, ಅಂಗವಿಕಲತೆಯ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದಕ್ಕಾಗಿ, ಆ ಬಗ್ಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪ್ರಮಾಣೀಕರಣ ಪ್ರಾಧಿಕಾರಕ್ಕೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಪ್ರಮಾಣೀಕರಣ ಪ್ರಾಧಿಕಾರವು, 56ನೇ ಪ್ರಕರಣದ ಮೇರೆಗೆ ಅಧಿಸೂಚಿತವಾದ ಯುಕ್ತ ಮಾರ್ಗಸೂಚಿಗಳಿಗೆ ಅನುಸಾರವಾಗಿ ಸಂಬಂಧಪಟ್ಟ ವ್ಯಕ್ತಿಯ ಅಂಗವಿಕಲತೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ನಿರ್ಧರಣೆಯ ನಂತರ, ಸಂದರ್ಭಾನುಸಾರ,–

(ಎ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವ್ಯಕ್ತಿಗೆ ಅಂಗವಿಕಲತೆಯ ಪ್ರಮಾಣಪತ್ರವನ್ನು ನೀಡತಕ್ಕದ್ದು;

(ಬಿ) ಅಂಥ ವ್ಯಕ್ತಿಯು ನಿರ್ದಿಷ್ಟ ಅಂಗವಿಕಲತೆ ಹೊಂದಿಲ್ಲದಿರುವ ಬಗ್ಗೆ ಲಿಖಿತದಲ್ಲಿ ಆತನಿಗೆ ತಿಳಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಿದ ಅಂಗವಿಕಲತೆಯ ಪ್ರಮಾಣಪತ್ರವು ಇಡೀ ದೇಶದಾದ್ಯಂತ ಸಿಂಧುವಾದುದಾಗಿರತಕ್ಕದ್ದು.

**59. ಪ್ರಮಾಣೀಕರಣ ಪ್ರಾಧಿಕಾರದ ನಿರ್ಣಯದ ವಿರುದ್ಧ ಅಪೀಲು.–** (1) ಪ್ರಮಾಣೀಕರಿಸುವ ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸಮಯದೊಳಗಾಗಿ ಮತ್ತು ಅಂಥ ರೀತಿಯಲ್ಲಿ ಅಂಥ ನಿರ್ಣಯದ ವಿರುದ್ಧ ಅಪೀಲು ಸಲ್ಲಿಸಬಹುದು.

(2) ಅಪೀಲನ್ನು ಸ್ವೀಕರಿಸಿದ ತರುವಾಯ, ಅಪೀಲು ಪ್ರಾಧಿಕಾರವು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಪೀಲನ್ನು ನಿರ್ಣಯಿಸತಕ್ಕದ್ದು.

## ಅಧ್ಯಾಯ XI

## ಅಂಗವಿಕಲತೆ ಕುರಿತ ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದ ಸಮಿತಿ

**60. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ರಚನೆ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, 'ಕೇಂದ್ರ ಸಲಹಾ ಮಂಡಲಿ' ಎಂಬ ಒಂದು ನಿಕಾಯವನ್ನು, ಅಂಗವಿಕಲತೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ರಚಿಸತಕ್ಕದ್ದು.

(2) ಕೇಂದ್ರ ಸಲಹಾ ಮಂಡಲಿಯು,–

(ಎ) ಕೇಂದ್ರ ಸರ್ಕಾರದ ಅಂಗವಿಕಲತೆ ವ್ಯವಹಾರಗಳ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ – ಪದನಿಮಿತ್ತ ಅಧ್ಯಕ್ಷರು;

(ಬಿ) ಕೇಂದ್ರ ಸರ್ಕಾರದ ಮಂತ್ರಾಲಯದಲ್ಲಿ ಅಂಗವಿಕಲತೆ ವ್ಯವಹಾರಗಳ ಇಲಾಖೆಯ ಪ್ರಭಾರದಲ್ಲಿರುವ ರಾಜ್ಯ ಮಂತ್ರಿ – ಪದನಿಮಿತ್ತ ಉಪಾಧ್ಯಕ್ಷರು;

(ಸಿ) ಸಂಸತ್ತಿನ ಮೂರು ಸದಸ್ಯರು, ಇವರಲ್ಲಿ ಲೋಕಸಭೆಯಿಂದ ಆಯ್ಕೆಯಾದ ಇಬ್ಬರು ಮತ್ತು ರಾಜ್ಯ ಸಭೆಯಿಂದ ಆಯ್ಕೆಯಾದ ಒಬ್ಬರು – ಪದನಿಮಿತ್ತ ಸದಸ್ಯರು;

(ಡಿ) ಎಲ್ಲ ರಾಜ್ಯಗಳಲ್ಲಿ ಅಂಗವಿಕಲತೆ ವ್ಯವಹಾರಗಳ ಪ್ರಭಾರದಲ್ಲಿರುವ ಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಾರರು ಅಥವಾ ಲೆಫ್ಟಿನೆಂಟ್ ಗವರ್ನರ್‌ಗಳು – ಪದನಿಮಿತ್ತ ಸದಸ್ಯರು;

(ಇ) ಭಾರತ ಸರ್ಕಾರದ ಅಂಗವಿಕಲತೆ ವ್ಯವಹಾರಗಳು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಶಾಲಾಶಿಕ್ಷಣ ಮತ್ತು ಸಾಕ್ಷರತೆ ಮತ್ತು ಉನ್ನತ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚಗಳು, ಸಿಬ್ಬಂದಿ ಮತ್ತು ತರಬೇತಿ, ಆಡಳಿತ ಸುಧಾರಣೆಗಳ ಮತ್ತು ಸಾರ್ವಜನಿಕ ಕುಂದುಕೊರತೆಗಳ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೈಗಾರಿಕಾ ಕಾರ್ಯನೀತಿ ಮತ್ತು ಪ್ರಚಾರ, ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ, ಕಾನೂನು ವ್ಯವಹಾರಗಳು, ಸಾರ್ವಜನಿಕ ಉದ್ದಿಮೆಗಳ, ಯುವಜನ ಸೇವಾ ವ್ಯವಹಾರಗಳು ಮತ್ತು ಕ್ರೀಡೆಗಳು, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಮತ್ತು ನಾಗರಿಕ ವಿಮಾನಯಾನ ಮಂತ್ರಾಲಯಗಳ ಪ್ರಭಾರದಲ್ಲಿರುವ ಅಥವಾ ಆಯಾಯ ಇಲಾಖೆಗಳ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯರುಗಳು;

(ಎಫ್) ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ (NITI) ಆಯೋಗದ ಕಾರ್ಯದರ್ಶಿ – ಪದನಿಮಿತ್ತ ಸದಸ್ಯರು;

(ಜಿ) ಭಾರತ ಪುನರ್ ವ್ಯವಸ್ಥೆ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಹೆಚ್) ಆಟಿಸಂ, ಮಿದುಳಿನ ಪಾರ್ಶ್ವವಾಯು, ಬುದ್ಧಿ ಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣ ಕುರಿತ ರಾಷ್ಟ್ರೀಯ ಟ್ರಸ್ಟ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಐ) ವಿಕಲತೆ ಕುರಿತ ರಾಷ್ಟ್ರೀಯ ಹಣಕಾಸು ಅಭಿವೃದ್ಧಿ ನಿಗಮದ ಅಧ್ಯಕ್ಷರು – ಹಾಗೂ – ವ್ಯವಸ್ಥಾಪಕ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಜೆ) ಕೃತಕ ಅವಯವ ತಯಾರಿಕಾ ನಿಗಮದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಕೆ) ರೈಲ್ವೆ ಮಂಡಳಿ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಎಲ್) ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದಲ್ಲಿನ ಉದ್ಯೋಗ ಮತ್ತು ತರಬೇತಿಯ ಮಹಾ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಎಂ) ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಷ್ಟ್ರೀಯ ಪರಿಷತ್‌ನ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಎನ್) ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಒ) ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗದ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಪಿ) ಭಾರತದ ವೈದ್ಯಕೀಯ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಕ್ಯೂ) ಈ ಕೆಳಕಂಡ ಸಂಸ್ಥೆಗಳ ನಿರ್ದೇಶಕರುಗಳು,_

(i) ದೃಷ್ಟಿ ಊನತೆ ಕುರಿತ ರಾಷ್ಟ್ರೀಯ ಸಂಸ್ಥೆ, ಡೆಹ್ರಾಡೂನ್;

(ii) ರಾಷ್ಟ್ರೀಯ ಮಾನಸಿಕ ವಿಕಲತೆ ಸಂಸ್ಥೆ, ಸಿಕಂದರಾಬಾದ್;

(iii) ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ದೈಹಿಕ ಅಂಗವಿಕಲತೆ ಸಂಸ್ಥೆ, ನವದೆಹಲಿ;

(iv) ಆಲಿ ಯವಾರ್ ಜಂಗ್ ರಾಷ್ಟ್ರೀಯ ಶ್ರವಣ ವಿಕಲತೆ ಸಂಸ್ಥೆ, ಮುಂಬಯಿ;

(v) ಅಸ್ಥಿ ವಿಕಲತೆ ಕುರಿತ ರಾಷ್ಟ್ರೀಯ ಸಂಸ್ಥೆ, ಕೊಲ್ಕತ್ತಾ;

(vi) ರಾಷ್ಟ್ರೀಯ ಪುನರ್ ವ್ಯವಸ್ಥೆ ತರಬೇತಿ ಮತ್ತು ಸಂಶೋಧನೆ ಸಂಸ್ಥೆ, ಕಟಕ್;

(vii) ರಾಷ್ಟ್ರೀಯ ಬಹುವಿಧ ಅಂಗವಿಕಲತೆ ವ್ಯಕ್ತಿಗಳ ಸಬಲೀಕರಣ ಸಂಸ್ಥೆ, ಚೆನ್ನೈ;

(viii) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ, ಬೆಂಗಳೂರು;

(ix) ಭಾರತೀಯ ಸಂಜ್ಞೆ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರ, ನವದೆಹಲಿ – ಪದನಿಮಿತ್ತ ಸದಸ್ಯರು;

(ಆರ್) ಕೇಂದ್ರ ಸರ್ಕಾರವು, ನಾಮನಿರ್ದೇಶನ ಮಾಡುವ ಸದಸ್ಯರು, ಎಂದರೆ–

(i) ಅಂಗವಿಕಲತೆ ಮತ್ತು ಪುನರ್‌ವ್ಯವಸ್ಥೆ ಕ್ಷೇತ್ರದಲ್ಲಿ ತಜ್ಞರಾಗಿರುವ ಐದು ಮಂದಿ ಸದಸ್ಯರು;

(ii) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಅಶಕ್ತ ವ್ಯಕ್ತಿಗಳ ಸಂಘಸಂಸ್ಥೆಗಳನ್ನು ಪ್ರತಿನಿಧಿಸುವ, ಅಂಗವಿಕಲ ವ್ಯಕ್ತಿಗಳು ಸಾಧ್ಯವಾದಷ್ಟು ಮಟ್ಟಿಗೆ ಹತ್ತು ಮಂದಿ ಸದಸ್ಯರು:

ಪರಂತು, ನಾಮನಿರ್ದೇಶನಗೊಂಡ ಹತ್ತು ಮಂದಿ ಸದಸ್ಯರ ಪೈಕಿ ಕನಿಷ್ಠಪಕ್ಷ, ಐದು ಮಂದಿ ಮಹಿಳೆಯರು ಇರತಕ್ಕದ್ದು ಮತ್ತು ಈ ಹತ್ತು ಮಂದಿಯಲ್ಲಿ ಕೊನೆ ಪಕ್ಷ ಒಬ್ಬರು ಸದಸ್ಯರು ಅನುಸೂಚಿತ ಜಾತಿಯವರು ಮತ್ತು ಒಬ್ಬರು ಸದಸ್ಯರು ಅನುಸೂಚಿತ ಪಂಗಡದವರು ಇರತಕ್ಕದ್ದು;

(iii) ರಾಷ್ಟ್ರೀಯ ಮಟ್ಟದ ವಾಣಿಜ್ಯ ಮತ್ತು ಕೈಗಾರಿಕಾ ಚೇಂಬರ್ಸ್‌ಗಳಿಂದ ಮೂರು ಮಂದಿ ಪ್ರತಿನಿಧಿಗಳು;

(ಎಸ್) ಅಂಗವಿಕಲತೆ ಕಾರ್ಯನೀತಿಯ ವಿಷಯವನ್ನು ವ್ಯವಹರಿಸುವ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ – ಪದನಿಮಿತ್ತ ಸದಸ್ಯ – ಕಾರ್ಯದರ್ಶಿ

– ಇವರುಗಳನ್ನು ಒಳಗೊಂಡಿರತಕ್ಕದ್ದು.

61. **ಸದಸ್ಯರುಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.–** (1) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, 60ನೇ ಪ್ರಕರಣದ (2)ನೇ ಉಪ ಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಕೇಂದ್ರ ಸಲಹಾ ಮಂಡಳಿಯ ಸದಸ್ಯನು, ಆತನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಆ ಹುದ್ದೆಯನ್ನು ಹೊಂದಿರತಕ್ಕದ್ದು:

ಪರಂತು, ಅಂಥ ಸದಸ್ಯ, ತಮ್ಮ ಪದಾವಧಿ ಮುಕ್ತಾಯವಾದಾಗ್ಯೂ, ಆ ಹುದ್ದೆಯ ಉತ್ತರಾಧಿಕಾರಿಯು ಅಂಥ ಹುದ್ದೆಯನ್ನು ವಹಿಸಿಕೊಳ್ಳುವವರೆಗೆ ಸದಸ್ಯನಾಗಿ ಮುಂದುವರೆಯತಕ್ಕದ್ದು.

(2) ಕೇಂದ್ರ ಸರ್ಕಾರವು, ಯುಕ್ತವೆಂದು ಪರಿಗಣಿಸಿದರೆ, 60ನೇ ಪ್ರಕರಣದ (2)ನೇ ಉಪಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾರೇ ಸದಸ್ಯನನ್ನು, ಆತನನ್ನು ಸ್ಥಾನದಿಂದ ತೆಗೆದುಹಾಕಬಾರದೆಂಬ ಬಗ್ಗೆ ಕಾರಣ ತೋರಿಸಲು, ಆತನ ಪದಾವಧಿ ಮುಕ್ತಾಯವಾಗುವ ಮುನ್ನ, ಯುಕ್ತ ಅವಕಾಶವನ್ನು ನೀಡಿದ ತರುವಾಯ ಆತನನ್ನು ಆ ಸ್ಥಾನದಿಂದ ತೆಗೆದು ಹಾಕಬಹುದು.

(3) ಪ್ರಕರಣ (60)ರ (2)ನೇ ಉಪಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ಕೇಂದ್ರ ಸರ್ಕಾರಕ್ಕೆ, ಅವನು ಲಿಖಿತದಲ್ಲಿ ಸಹಿ ಮಾಡಿದ ಪತ್ರವನ್ನು ಕಳುಹಿಸುವ ಮೂಲಕ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಆ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(4) ಕೇಂದ್ರ ಸಲಹಾ ಮಂಡಳಿಯಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಖಾಲಿಸ್ಥಾನಕ್ಕೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಯಾವ ಸದಸ್ಯನ ಸ್ಥಾನಕ್ಕೆ ನಾಮನಿರ್ದೇಶನಗೊಂಡಿದ್ದಾನೆಯೋ ಅಂಥ ಸದಸ್ಯನ ಉಳಿದ ಪದಾವಧಿಗೆ ಮಾತ್ರವೇ ಆ ಹುದ್ದೆಯನ್ನು ಹೊಂದಿರತಕ್ಕದ್ದು.

(5) ಪ್ರಕರಣ (60)ರ (2)ನೇ ಉಪಪ್ರಕರಣದ (ಆರ್) ಖಂಡದ (i)ನೇ ಉಪಖಂಡ ಮತ್ತು (ii)ನೇ ಉಪಖಂಡಗಳ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಮರುನಾಮಕರಣಕ್ಕೆ ಅರ್ಹನಾಗಿರತಕ್ಕದ್ದು.

(6) ಪ್ರಕರಣ (60)ರ (2)ನೇ ಉಪಪ್ರಕರಣದ (ಆರ್) ಖಂಡದ (i)ನೇ ಉಪಖಂಡ ಮತ್ತು (ii)ನೇ ಉಪಖಂಡಗಳ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

**62. ಅನರ್ಹತೆಗಳು.–** (1) ಯಾರೇ ವ್ಯಕ್ತಿಯು,–

(ಎ) ದಿವಾಳಿಯಾಗಿರುವನೆಂದು ಅಥವಾ ದಿವಾಳಿಯೆಂದು ಯಾವುದೇ ಕಾಲದಲ್ಲಿ ನ್ಯಾಯನಿರ್ಣೀತನಾಗಿದ್ದರೆ ಅಥವಾ ಅವನ ಋಣಗಳ ನಿಮಿತ್ತ ಸಂದಾಯವನ್ನು ನಿಲ್ಲಿಸಿದ್ದರೆ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ನೈತಿಕ ಪತನವನ್ನೊಳಗೊಂಡ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಿರುವಂತಹ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ; ಅಥವಾ

(ಡಿ) ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ ಅಥವಾ ಹಾಗೆಂದು ಯಾವುದೇ ಕಾಲದಲ್ಲಿ ನಿರ್ಣೀತನಾಗಿದ್ದರೆ; ಅಥವಾ

(ಇ) ಸದಸ್ಯನಾಗಿ ಆತನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಆ ಸ್ಥಾನದಲ್ಲಿ ಆತನು ಮುಂದುವರಿದರೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುವಷ್ಟರ ಮಟ್ಟಿಗೆ ದುರುಪಯೋಗಪಡಿಸಿಕೊಂಡಿಸಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಷ್ಟರಲ್ಲಿ, ದುರುಪಯೋಗಪಡಿಸಿಕೊಂಡಿದ್ದರೆ

– ಆ ಯಾರೇ ವ್ಯಕ್ತಿಯು ಕೇಂದ್ರ ಸಲಹಾ ಮಂಡಳಿಯ ಸದಸ್ಯನಾಗಿರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ, ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಆ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

(3) ಪ್ರಕರಣ (61)ರ (1)ನೇ ಉಪಪ್ರಕರಣದಲ್ಲಿ ಅಥವಾ (5)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**63. ಸದಸ್ಯರುಗಳಿಂದುಂಟಾದ ಖಾಲಿ ಸ್ಥಾನಗಳು.–** ಕೇಂದ್ರ ಸಲಹಾ ಮಂಡಲಿಯ ಸದಸ್ಯನು 62ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅನರ್ಹತೆಗಳಿಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**64. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಸಭೆಗಳು.–** ಕೇಂದ್ರ ಸಲಹಾ ಮಂಡಲಿಯು, ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**65. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಷ್ಟ್ರಮಟ್ಟದ ಸಮಾಲೋಚನಾ ಮತ್ತು ಸಲಹಾ ಮಂಡಲಿಯಾಗಿರತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಮತ್ತು ಅವರು ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಅನುಭವಿಸುವುದಕ್ಕಾಗಿ ಸಮಗ್ರ ಕಾರ್ಯನೀತಿಯು ನಿರಂತರವಾಗಿ ಮುಂದುವರೆಯುವುದಕ್ಕೆ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸಲಹಾ ಮಂಡಲಿಯು, ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು;

(ಬಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸುವುದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ರಾಷ್ಟ್ರೀಯ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಕಾರ್ಯಯೋಜನೆಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದು;

(ಇ) ಅಂಗವಿಕಲ ವ್ಯಕ್ತಿಗಳಿಗೆ ಮಾಹಿತಿಯು, ಸೇವೆಗಳು ಸುಲಭವಾಗಿ ಲಭ್ಯವಾಗುವುದಕ್ಕೆ ಸಂಬಂಧಿಸಿದಂತೆ ಸಮಂಜಸ ಸೌಕರ್ಯ ಕಲ್ಪಿಸುವುದನ್ನು, ತಾರತಮ್ಯ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅನುಕೂಲವಾದಂಥ ವಾತಾವರಣ ಒದಗಿಸುವುದಕ್ಕೆ ಮತ್ತು ಸಾಮಾಜಿಕ ಜೀವನದಲ್ಲಿ ಅವರು ಭಾಗಿಯಾಗುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಶಿಫಾರಸ್ಸು ಮಾಡುವುದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಭಾಗವಹಿಸುವಂತಾಗುವುದಕ್ಕೆ ಸಂಬಂಧಿಸಿದಂತೆ ರೂಪಿಸಿದ ಕಾನೂನುಗಳ, ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯನಿರ್ಣಯ ಮಾಡುವುದು;

(ಜಿ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**66. ಅಂಗವಿಕಲತೆ ಕುರಿತ ರಾಜ್ಯ ಸಲಹಾ ಮಂಡಲಿ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಗೊತ್ತುಪಡಿಸಿದ ಪ್ರಕಾರ್ಯವನ್ನು ನೆರವೇರಿಸುವುದಕ್ಕೆ ಅಂಗವಿಕಲತೆ ಕುರಿತ ರಾಜ್ಯ ಸಲಹಾ ಮಂಡಲಿ ಎಂದು ಕರೆಯಲಾಗುವ ನಿಕಾಯವನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಸಲಹಾ ಮಂಡಲಿಯು,–

(ಎ) ಅಂಗವಿಕಲತೆ ವಿಷಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ ಇಲಾಖೆಯ ಪ್ರಭಾರದಲ್ಲಿರುವ ಸಚಿವರು – ಪದನಿಮಿತ್ತ ಅಧ್ಯಕ್ಷರು;

(ಬಿ) ಅಂಗವಿಕಲತೆ ವಿಷಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ ಇಲಾಖೆಯ ಪ್ರಭಾರದಲ್ಲಿರುವ ರಾಜ್ಯ ಮಂತ್ರಿ ಅಥವಾ ಉಪ–ಮಂತ್ರಿ – ಪದನಿಮಿತ್ತ ಉಪಾಧ್ಯಕ್ಷರು;

(ಸಿ) ರಾಜ್ಯ ಸರ್ಕಾರದ ಅಂಗವಿಕಲತೆ ವ್ಯವಹಾರಗಳ ಇಲಾಖೆ, ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಣಕಾಸು ಇಲಾಖೆ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೈಗಾರಿಕಾ ಕಾರ್ಯನೀತಿ ಮತ್ತು ಉತ್ತೇಜನ ಇಲಾಖೆ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ, ನಗಾರಾಭಿವೃದ್ಧಿ ಇಲಾಖೆ, ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಇಲಾಖೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಇಲಾಖೆ, ರಸ್ತೆ ಸಾರಿಗೆ ಇಲಾಖೆ ಹಾಗೂ ರಾಜ್ಯ ಸರ್ಕಾರವು ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಇತರ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯರು;

(ಡಿ) ರಾಜ್ಯ ವಿಧಾನಮಂಡಲದ ಮೂರು ಮಂದಿ ಸದಸ್ಯರು, ಈ ಪೈಕಿ ಇಬ್ಬರು ವಿಧಾನ ಸಭೆಯಿಂದ ಮತ್ತು ಒಬ್ಬರು ವಿಧಾನ ಪರಿಷತ್ತಿನಿಂದ ಆಯ್ಕೆಯಾಗಿರತಕ್ಕದ್ದು ಮತ್ತು ಆ ರಾಜ್ಯದಲ್ಲಿ ವಿಧಾನ ಪರಿಷತ್ತು ಇಲ್ಲದಿದ್ದರೆ, ವಿಧಾನ ಸಭೆಗೆ ಆಯ್ಕೆಯಾದ ಮೂರು ಮಂದಿ ಸದಸ್ಯರನ್ನು ಆಯ್ಕೆ ಮಾಡತಕ್ಕದ್ದು – ಇವರುಗಳು ಪದನಿಮಿತ್ತ ಸದಸ್ಯರು;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಸದಸ್ಯರು:–

(i) ಅಂಗವಿಕಲತೆ ಮತ್ತು ಅವರ ಪುನರ್‌ವ್ಯವಸ್ಥೆ ಕ್ಷೇತ್ರದಲ್ಲಿ ತಜ್ಞರಾಗಿರುವ ಐದು ಮಂದಿ ಸದಸ್ಯರು;

(ii) ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಸರದಿಯಂತೆ ಜಿಲ್ಲೆಗಳನ್ನು ಪ್ರತಿನಿಧಿಸುವ ಐವರು ಸದಸ್ಯರು:

ಪರಂತು, ಈ ಉಪಖಂಡದ ಮೇರೆಗೆ ಮಾಡುವ ನಾಮಕರಣವನ್ನು ಸಂಬಂಧಪಟ್ಟ ಜಿಲ್ಲಾ ಆಡಳಿತದ ಶಿಫಾರಸ್ಸಿನ ಹೊರತು ಮಾಡತಕ್ಕದ್ದಲ್ಲ;

(iii) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸುವುದಕ್ಕಾಗಿ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಹತ್ತು ಜನ ಅಂಗವಿಕಲ ವ್ಯಕ್ತಿಗಳು:

ಪರಂತು, ಈ ಖಂಡದ ಮೇರೆಗೆ ನಾಮನಿರ್ದೇಶನ ಮಾಡಿದ ಹತ್ತು ವ್ಯಕ್ತಿಗಳ ಪೈಕಿ, ಕನಿಷ್ಠಪಕ್ಷ 5 ಜನ ಮಹಿಳೆಯರಾಗಿರತಕ್ಕದ್ದು ಮತ್ತು ಈ ಪೈಕಿ ಕನಿಷ್ಠಪಕ್ಷ ಒಬ್ಬರು ಅನುಸೂಚಿತ ಜಾತಿಗೆ ಮತ್ತು ಒಬ್ಬರು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು;

(iv) ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಮಂಡಲಿಯ ಮೂರಕ್ಕಿಂತ ಹೆಚ್ಚಿಲ್ಲದ ಪ್ರತಿನಿಧಿಗಳು;

(ಎಫ್) ರಾಜ್ಯ ಸರ್ಕಾರದಲ್ಲಿ ಅಂಗವಿಕಲತೆ ವಿಷಯಗಳನ್ನು ವ್ಯವಹರಿಸುವ ಇಲಾಖೆಯಲ್ಲಿನ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯಲ್ಲದ ದರ್ಜೆಯ ಅಧಿಕಾರಿ – ಪದನಿಮಿತ್ತ ಸದಸ್ಯ ಕಾರ್ಯದರ್ಶಿ

– ಇವರುಗಳನ್ನು ಒಳಗೊಂಡಿರತಕ್ಕದ್ದು.

67. **ಸದಸ್ಯರ ಸೇವಾ ಅವಧಿ ಮತ್ತು ಷರತ್ತುಗಳು.**– (1) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, 66ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ರಾಜ್ಯ ಸಲಹಾ ಮಂಡಲಿ ಸದಸ್ಯನು ಆತನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ತನ್ನ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಅಂಥ ಸದಸ್ಯನ ಪದಾವಧಿಯು ಮುಕ್ತಾಯವಾಗಿದ್ದಾಗ್ಯೂ ಸಹ, ಆ ಸ್ಥಾನಕ್ಕೆ ಉತ್ತರಾಧಿಕಾರಿಯು ಬರುವವರೆಗೂ ಅವನು ಆ ಪದದಲ್ಲಿ ಮುಂದುವರೆಯತಕ್ಕದ್ದು.

(2) ರಾಜ್ಯ ಸರ್ಕಾರವು, 66ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾರೇ ಸದಸ್ಯನ ಪದಾವಧಿ ಮುಗಿಯುವುದಕ್ಕೆ ಮುಂಚೆ, ಆ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಯುಕ್ತವೆಂದು ಭಾವಿಸಿದರೆ ಆತನನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿದಂತೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡಿದ ನಂತರ ಆತನನ್ನು ಸದಸ್ಯ ಸ್ಥಾನದಿಂದ ತೆಗೆದುಹಾಕಬಹುದು.

(3) 66ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ತಾನು ಸಹಿ ಮಾಡಿದ ಲಿಖಿತ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(4) ರಾಜ್ಯ ಸಲಹಾ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನ ಮಾಡುವ ಮೂಲಕವೇ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಯಾವ ಸದಸ್ಯನ ಖಾಲಿಸ್ಥಾನಕ್ಕೆ ನೇಮಕಗೊಂಡಿರುವನೋ ಆ ಸ್ಥಾನದ ಉಳಿದ ಅವಧಿಯವರೆಗೆ ಮಾತ್ರ ಆ ಪದವನ್ನು ಹೊಂದಿರತಕ್ಕದ್ದು.

(5) 66ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ (i)ನೇ ಉಪಖಂಡದ ಅಥವಾ (iii)ನೇ ಉಪಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಮರು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(6) 66ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ (i)ನೇ ಉಪಖಂಡ ಮತ್ತು (ii)ನೇ ಉಪಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

**68. ಅನರ್ಹತೆಗಳು.–** (1)

(ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು

ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ; ಅಥವಾ

(ಸಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಒಂದು ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಇ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ರಾಜ್ಯ ಸಲಹಾ ಮಂಡಲಿಯಲ್ಲಿ ಆತನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ಆತನು ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿರುವ

– ಯಾರೇ ವ್ಯಕ್ತಿಯು ರಾಜ್ಯ ಸಲಹಾ ಮಂಡಲಿಯ ಸದಸ್ಯನಾಗಿರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಸಂಬಂಧಪಟ್ಟ ಸದಸ್ಯನಿಗೆ ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡದ ಹೊರತು ಹಾಗೆ ಮಾಡತಕ್ಕದ್ದಲ್ಲ.

(3) 67ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (5)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯತ್ವದಿಂದ ತೆಗೆದು ಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್‌ನಾಮಕರಣಕ್ಕೆ ಅರ್ಹನಾಗಿರತಕ್ಕದ್ದಲ್ಲ.

**69. ಸ್ಥಾನಗಳ ಖಾಲಿಯಾಗುವಿಕೆ.–** ರಾಜ್ಯ ಸಲಹಾ ಮಂಡಲಿಯ ಸದಸ್ಯನು 68ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**70. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಸಭೆಗಳು.–** ರಾಜ್ಯ ಸಲಹಾ ಮಂಡಲಿಯು ಪ್ರತಿ ಆರು ತಿಂಗಳಿಗೆ ಕನಿಷ್ಠಪಕ್ಷ ಒಂದು ಸಲ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಸಂಬಂಧದಲ್ಲಿ ರಾಜ್ಯ ಸರ್ಕಾರ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**71. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಪ್ರಕಾರ್ಯಗಳು.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಜ್ಯ ಸಲಹಾ ಮಂಡಲಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಮಟ್ಟದ ಸಮಾಲೋಚನಾ ಮತ್ತು ಸಲಹಾ ನಿಕಾಯವಾಗಿರತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಮತ್ತು ಅವರು ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಉಪಭೋಗಿಸುವುದಕ್ಕಾಗಿ ಒಂದು ಸಮಗ್ರ ಕಾರ್ಯನೀತಿಯನ್ನು ನಿರಂತರವಾಗಿ ಮೌಲ್ಯ ನಿರ್ಣಯ ಮಾಡುವ ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಜ್ಯ ಅಂಗವಿಕಲ ಸಲಹಾ ಮಂಡಲಿಯು ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಜ್ಯ ಕಾರ್ಯನೀತಿಯನ್ನು ರೂಪಿಸುವುದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ರಾಜ್ಯ ಸರ್ಕಾರಿ ಇಲಾಖೆಗಳ ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ರಾಜ್ಯದ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಯೋಜನೆಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ಕಲ್ಪಿಸುವ ಉದ್ದೇಶದಿಂದ, ಸಂಬಂಧಪಟ್ಟ ಪ್ರಾಧಿಕಾರಿಗಳೊಂದಿಗೆ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಚರ್ಚಿಸುವುದು;

(ಇ) ಅಂಗವಿಕಲ ವ್ಯಕ್ತಿಗಳು ತಮ್ಮ ಸಾಮಾಜಿಕ ಜೀವನದಲ್ಲಿ ಇತರರೊಂದಿಗೆ ಸಮಾನವಾಗಿ ಪಾಲ್ಗೊಳ್ಳುವುದಕ್ಕೆ ಅವಶ್ಯಕವಾದ ಸೇವೆಗಳು ಮತ್ತು ಇದಕ್ಕೆ ತಕ್ಕ ವಾತಾವರಣವು ಸುಲಭವಾಗಿ ಲಭ್ಯವಾಗುವುದನ್ನು, ಯುಕ್ತ ಅವಕಾಶ ಕಲ್ಪಿಸುವುದನ್ನು, ತಾರತಮ್ಯ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮತ್ತು ಅಂತಹ ಪರಿಸರ ನಿರ್ಮಿಸುವುದಕ್ಕೆ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡುವುದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಭಾಗವಹಿಸುವುದಕ್ಕಾಗಿ ರೂಪಿಸಿದ ಕಾನೂನುಗಳ, ಕಾರ್ಯನೀತಿಗಳ ಮತ್ತು ಗೊತ್ತುಪಡಿಸಿದ ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಹಾಗೂ ಮೌಲ್ಯಮಾಪನ ಮಾಡುವುದು; ಮತ್ತು

(ಜಿ) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**72. ಜಿಲ್ಲಾ ಮಟ್ಟದ ಅಂಗವಿಕಲ ಸಮಿತಿ.–** ರಾಜ್ಯ ಸರ್ಕಾರವು ಅದು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಯನ್ನು ರಚಿಸತಕ್ಕದ್ದು.

**73. ಖಾಲಿ ಸ್ಥಾನಗಳು ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಅಂಗವಿಕಲರ ಕೇಂದ್ರ ಸಲಹಾ ಮಂಡಲಿಯ, ರಾಜ್ಯ ಸಲಹಾ ಮಂಡಲಿಯ ಅಥವಾ ಜಿಲ್ಲಾಮಟ್ಟದ ಸಮಿತಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಸಂದರ್ಭಾನುಸಾರ ಅಂಥ ಮಂಡಲಿಯಲ್ಲಿ ಅಥವಾ ಸಮಿತಿಗಳಲ್ಲಿ ಯಾವುದೇ ಖಾಲಿ ಸ್ಥಾನವಿರುವುದೆಂಬ ಅಥವಾ ಅವುಗಳ ರಚನೆಯಲ್ಲಿ ಯಾವುದೇ ದೋಷವಿದೆ ಎಂಬ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ XII

## ಅಂಗವಿಕಲ ವ್ಯಕ್ತಿಗಳ ಚೀಫ್ ಕಮಿಷನರ್ ಮತ್ತು ಸ್ಟೇಟ್ ಕಮಿಷನರ್

**74. ಚೀಫ್ ಕಮಿಷನರ್ ಮತ್ತು ಕಮಿಷನರ್‌ಗಳ ನೇಮಕ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಒಬ್ಬ ಚೀಫ್ ಕಮಿಷನರ್‌ನನ್ನು (ಇಲ್ಲಿ ಇನ್ನು ಮುಂದೆ "ಚೀಫ್ ಕಮಿಷನರ್" ಎಂದು ಉಲ್ಲೇಖಿಸಲಾದ) ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು, ಅಧಿಸೂಚನೆ ಮೂಲಕ ಚೀಫ್ ಕಮಿಷನರ್‌ಗೆ ನೆರವಾಗಲು ಇಬ್ಬರು ಕಮಿಷನರ್‌ಗಳನ್ನು ನೇಮಕ ಮಾಡಬಹುದು, ಈ ಪೈಕಿ ಒಬ್ಬರು ಅಂಗವಿಕಲ ವ್ಯಕ್ತಿಯಾಗಿರತಕ್ಕದ್ದು.

(3) ಅಂಗವಿಕಲ ವ್ಯಕ್ತಿಗಳ ಪುನರ್ವಸತಿ ಕುರಿತ ವಿಷಯಗಳ ಸಂಬಂಧದಲ್ಲಿ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಹೊಂದಿರದ ಹೊರತು, ಆ ವ್ಯಕ್ತಿಯು ಚೀಫ್ ಕಮಿಷನರ್‌ನಾಗಿ ಅಥವಾ ಕಮಿಷನರ್‌ನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(4) ಚೀಫ್ ಕಮಿಷನರ್‌ಗೆ ಮತ್ತು ಚೀಫ್ ಕಮಿಷನರ್‌ಗಳಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(5) ಚೀಫ್ ಕಮಿಷನರ್‌ನು ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಆತನಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದು ಯುಕ್ತವೆಂದು ಭಾವಿಸುವಂಥ ರೀತಿಯಲ್ಲಿ ಚೀಫ್ ಕಮಿಷನರ್‌ಗೆ ಅಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(6) ಚೀಫ್ ಕಮಿಷನರ್‌ಗೆ ಒದಗಿಸಿದ ಅಧಿಕಾರಿಗಳು ಮತ್ತು ನೌಕರರು ಚೀಫ್ ಕಮಿಷನರ್‌ನ ಸಾಮಾನ್ಯ ಮೇಲ್ವಿಚಾರಣೆ ಮೇರೆಗೆ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(7) ಚೀಫ್ ಕಮಿಷನರ್‌ಗೆ ಒದಗಿಸಿದ ಅಧಿಕಾರಿಗಳು ಮತ್ತು ನೌಕರರ ಸಂಬಳ ಹಾಗೂ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(8) ಚೀಫ್ ಕಮಿಷನರ್‌ರವರು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಿವಿಧ ಅಂಗವಿಕಲತೆ ವಿಷಯಗಳಲ್ಲಿ ತಜ್ಞರ ಪೈಕಿ ಮಾಡಿಕೊಂಡ ಹನ್ನೊಂದು ಸದಸ್ಯರುಗಳಿಗಿಂತ ಕಡಿಮೆಯಲ್ಲದ ತಜ್ಞರನ್ನು ಒಳಗೊಂಡ ಸಲಹಾ ಮಂಡಲಿಯ ಸಹಾಯವನ್ನು ಪಡೆಯತಕ್ಕದ್ದು.

75. **ಚೀಫ್ ಕಮಿಷನರ್‌ನ ಪ್ರಕಾರ್ಯಗಳು,–** (1) ಚೀಫ್ ಕಮಿಷನರ್‌ನು,–

(ಎ) ಈ ಅಧಿನಿಯಮಕ್ಕೆ ಅಸಂಗತವಾಗಿರುವ ಯಾವುದೇ ಕಾನೂನಿನ ಅಥವಾ ಕಾರ್ಯನೀತಿಯ, ಕಾರ್ಯಕ್ರಮಗಳ ಮತ್ತು ಕಾರ್ಯವಿಧಾನಗಳ ಉಪಬಂಧಗಳನ್ನು ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ಗುರುತಿಸತಕ್ಕದ್ದು ಮತ್ತು ಆ ಬಗ್ಗೆ ಸರಿಪಡಿಸುವ ಅವಶ್ಯಕ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಬಿ) ಅಂಗವಿಕಲತೆಯ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿರುವುದೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಅಂಗವಿಕಲರಿಗೆ ಇರುವ ಹಕ್ಕುಗಳಿಂದ ಮತ್ತು ರಕ್ಷಣೆಗಳಿಂದ ಅವರು ವಂಚಿತವಾಗಿದ್ದರೆ, ಆ ಬಗ್ಗೆ ತಾನಾಗಿಯೆ ಅಥವಾ ಅನ್ಯಥಾ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಹಾಗೂ

ಆ ಬಗ್ಗೆ ಸರಿಯಾದ ಕ್ರಮಕೈಗೊಳ್ಳಲು ಸದರಿ ವಿಷಯವನ್ನು ಯುಕ್ತ ಪ್ರಾಧಿಕಾರಗಳಿಗೆ ವಹಿಸತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಸಂರಕ್ಷಣೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ರಕ್ಷಣಾ ಕ್ರಮಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಅನುಭವಿಸುವುದಕ್ಕೆ ಅಡ್ಡಿಯಾಗಿರುವಂತಹ ಅಂಶಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಈ ಬಗ್ಗೆ ಯುಕ್ತ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಬಗೆಗಿನ ಕೌಲುಗಳನ್ನು ಮತ್ತು ಇತರ ಅಂತರರಾಷ್ಟ್ರೀಯ ಲಿಖಿತ ಒಪ್ಪಂದಗಳನ್ನು ಅಧ್ಯಯನ ಮಾಡತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಪಡುವ ಸಂಶೋಧನೆಯನ್ನು ಕೈಗೊಳ್ಳತಕ್ಕದ್ದು ಮತ್ತು ಆ ಬಗ್ಗೆ ಉತ್ತೇಜನ ನೀಡತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮತ್ತು ಅವರ ರಕ್ಷಣೆಗಾಗಿ ಲಭ್ಯವಿರುವ ಸುರಕ್ಷಾ ಕ್ರಮಗಳ ಬಗ್ಗೆ ಅವರಿಗೆ ತಿಳಿವಳಿಕೆ ಮೂಡಿಸಲು ಉತ್ತೇಜನ ನೀಡತಕ್ಕದ್ದು;

(ಹೆಚ್) ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಇರುವ ಈ ಅಧಿನಿಯಮದ ಉಪಬಂಧಗಳ ಮತ್ತು ಯೋಜನೆಗಳ, ಕಾರ್ಯಕ್ರಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು;

(ಐ) ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಕೇಂದ್ರ ಸರ್ಕಾರವು ಹಂಚಿಕೆ ಮಾಡಿದ ನಿಧಿಗಳ ಬಳಕೆಯನ್ನು ಕುರಿತು ಮೇಲ್ವಿಚಾರಣೆ ಮಾಡತಕ್ಕದ್ದು;

(ಜೆ) ಕೇಂದ್ರ ಸರ್ಕಾರವು ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಚೀಫ್ ಕಮಿಷನರ್‌ರವರು ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಕಮಿಷನರುಗಳೊಂದಿಗೆ ಸಮಾಲೋಚಿಸತಕ್ಕದ್ದು.

**76. ಚೀಫ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಸಮುಚಿತ ಪ್ರಾಧಿಕಾರಗಳ ಕ್ರಮ.–** 75ನೇ ಪ್ರಕರಣದ (ಬಿ) ಖಂಡಕ್ಕೆ ಅನುಸಾರವಾಗಿ ಚೀಫ್ ಕಮಿಷನರ್‌ರವರು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದಾಗಲೆಲ್ಲಾ, ಆ ಪ್ರಾಧಿಕಾರವು ಅದರ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಶಿಫಾರಸ್ಸು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಚೀಫ್ ಕಮಿಷನರ್‌ರವರಿಗೆ ತಿಳಿಸತಕ್ಕದ್ದು:

ಪರಂತು, ಪ್ರಾಧಿಕಾರವು ಶಿಫಾರಸ್ಸನ್ನು ಅಂಗೀಕರಿಸದಿದ್ದರೆ, ಅದನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳನ್ನು ಮೂರು ತಿಂಗಳೊಳಗಾಗಿ ಚೀಫ್ ಕಮಿಷನರ್‌ರವರ ಗಮನಕ್ಕೆ ತರತಕ್ಕದ್ದು ಮತ್ತು ಆ ಬಗ್ಗೆ ಬಾಧಿತ ವ್ಯಕ್ತಿಗೂ ಸಹ ತಿಳಿಸತಕ್ಕದ್ದು.

**77. ಚೀಫ್ ಕಮಿಷನರ್‌ನ ಅಧಿಕಾರಗಳು.–** (1) ಚೀಫ್ ಕಮಿಷನರ್‌ರವರು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ದಾವೆಯನ್ನು ವಿಚಾರಣೆ ಮಾಡುವಾಗ, ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ:–

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರ ಹಾಜರಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(2) ಚೀಫ್ ಕಮಿಷನರ್‌ರವರ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು, ಭಾರತ ದಂಡ ಸಂಹಿತೆಯ 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ

ವ್ಯವಹರಣೆಯಾಗಿರತಕ್ಕದ್ದು ಮತ್ತು ಚೀಫ್ ಕಮಿಷನರ್‌ರವರನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**78. ಚೀಫ್ ಕಮಿಷನರ್‌ನಿಂದ ವಾರ್ಷಿಕ ಮತ್ತು ವಿಶೇಷ ವರದಿಗಳು.–** (1) ಚೀಫ್ ಕಮಿಷನರ್‌ರವರು, ಕೇಂದ್ರ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಯಾವ ವಿಷಯವು ತುರ್ತಿನದೆಂದು ಅಥವಾ ಪ್ರಮುಖವಾದುದೆಂದು ಅವರು ಅಭಿಪ್ರಾಯಪಡುವರೋ ಮತ್ತು ಯಾವುದೇ ವಿಷಯದ ವಾರ್ಷಿಕ ವರದಿಯನ್ನು ಸಲ್ಲಿಸುವ ತನಕ ಮುಂದೂಡಲಾಗದೆಂದು ಆ ವಿಷಯದ ಬಗ್ಗೆ ಯಾವುದೇ ಸಮಯದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು, ಚೀಫ್ ಕಮಿಷನರ್‌ನ ವಾರ್ಷಿಕ ಹಾಗೂ ವಿಶೇಷ ವರದಿಗಳನ್ನೂ, ಅವರು ಮಾಡಿದ ಶಿಫಾರಸ್ಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸ್ಸುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ವಿವರಿಸಿರುವ ಜ್ಞಾಪನಪತ್ರದೊಂದಿಗೆ ಆ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡಿಸತಕ್ಕದ್ದು.

(3) ವಾರ್ಷಿಕ ಹಾಗೂ ವಿಶೇಷ ವರದಿಗಳನ್ನು, ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ಸಿದ್ಧಪಡಿಸತಕ್ಕದ್ದು.

**79. ರಾಜ್ಯಗಳಲ್ಲಿ ಸ್ಟೇಟ್ ಕಮಿಷನರ್ ನೇಮಕ.–** (1) ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಸ್ಟೇಟ್ ಕಮಿಷನರ್‌ರನ್ನು (ಇಲ್ಲಿ ಇನ್ನು ಮುಂದೆ "ಸ್ಟೇಟ್ ಕಮಿಷನರ್" ಎಂದು ಉಲ್ಲೇಖಿಸಲಾದ) ನೇಮಕ ಮಾಡಬಹುದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವಸತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳಿವಳಿಕೆ ಅಥವಾ ವ್ಯವಹಾರಿಕ ಅನುಭವ ಹೊಂದಿದ್ದ ಹೊರತು, ಅವನು ಸ್ಟೇಟ್ ಕಮಿಷನರ್‌ನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ಸ್ಟೇಟ್ ಕಮಿಷನರ್‌ಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರೆ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ರಾಜ್ಯ ಸರ್ಕಾರವು, ಕಮಿಷನರ್‌ನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರ ನೌಕರರ ವರ್ಗ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕಮಿಷನರ್‌ಗೆ ಅಂಥ ಅಧಿಕಾರಿಗಳು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(5) ಸ್ಟೇಟ್ ಕಮಿಷನರ್‌ಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರು ಕಮಿಷನರ್‌ನ ಸಾಮಾನ್ಯ ಮೇಲ್ವಿಚಾರಣೆಯ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಕಮಿಷನರ್‌ಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(7) ಸ್ಟೇಟ್ ಕಮಿಷನರ್‌ನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಗವಿಕಲ ಕ್ಷೇತ್ರದಲ್ಲಿ ತಜ್ಞರಾಗಿರುವವರ ಪೈಕಿಯಿಂದ ಆಯ್ಕೆಯಾದ ಐದಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಒಳಗೊಂಡ ಒಂದು ಸಲಹಾ ಸಮಿತಿಯಿಂದ ನೆರವನ್ನು ಪಡೆಯತಕ್ಕದ್ದು.

**80. ಸ್ಟೇಟ್ ಕಮಿಷನರ್‌ನ ಪ್ರಕಾರ್ಯಗಳು.–** ಸ್ಟೇಟ್ ಕಮಿಷನರ್‌ನು,–

(ಎ) ಈ ಅಧಿನಿಯಮಕ್ಕೆ ಅಸಂಗತವಾಗಿರುವ ಆ ಯಾವುದೇ ಕಾನೂನಿನ ಅಥವಾ ಕಾರ್ಯನೀತಿಯ, ಕಾರ್ಯಕ್ರಮದ ಮತ್ತು ಕಾರ್ಯವಿಧಾನಗಳ ಉಪಬಂಧವನ್ನು ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ಗುರುತಿಸತಕ್ಕದ್ದು ಮತ್ತು ಈ ಬಗ್ಗೆ ಸರಿಯಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು;

(ಬಿ) ಅಂಗವಿಕಲರ ವಿಷಯಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅವರಿಗೆ ನೀಡಿರುವ ಹಕ್ಕುಗಳು ಮತ್ತು ರಕ್ಷಣೆಗಳು ಸಮುಚಿತ ಸರ್ಕಾರದಿಂದ ವಂಚಿತವಾಗಿದ್ದರೆ, ಆ ಬಗ್ಗೆ ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಹಾಗೂ ಈ ಬಗ್ಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳಲು ಸದರಿ ವಿಷಯವನ್ನು ಯುಕ್ತ ಪ್ರಾಧಿಕಾರಗಳಿಗೆ ವಹಿಸತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳ ಹಕ್ಕಗಳ ಸಂರಕ್ಷಣೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ರಕ್ಷಣಾ ಕ್ರಮಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳ ಉಪಭೋಗಿಸುವಿಕೆಯನ್ನು ಅಡ್ಡಿಪಡಿಸುವ ಅಂಶಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಈ ಬಗ್ಗೆ ಯುಕ್ತ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಸಂಬಂಧದಲ್ಲಿ ಸಂಶೋಧನೆಯನ್ನು ಕೈಗೊಳ್ಳತಕ್ಕದ್ದು ಮತ್ತು ಈ ಬಗ್ಗೆ ಪ್ರಚಾರ ನೀಡತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮತ್ತು ಅವರ ರಕ್ಷಣೆಗಾಗಿ ಲಭ್ಯವಿರುವ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಇರುವ ಈ ಅಧಿನಿಯಮದ ಉಪಬಂಧಗಳ ಮತ್ತು ಕಾರ್ಯಯೋಜನೆಗಳ, ಕಾರ್ಯಕ್ರಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು;

(ಹೆಚ್) ರಾಜ್ಯ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಹಂಚಿಕೆ ಮಾಡಿದ ನಿಧಿಗಳ ಬಳಕೆಯನ್ನು ಕುರಿತು ಮೇಲ್ವಿಚಾರಣೆ ಮಾಡತಕ್ಕದ್ದು;

(ಐ) ರಾಜ್ಯ ಸರ್ಕಾರವು ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು;

**81. ಸ್ಟೇಟ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಯುಕ್ತ ಪ್ರಾಧಿಕಾರಗಳ ಕ್ರಮ.–** ಸ್ಟೇಟ್ ಕಮಿಷನರ್‌ನು 80ನೇ ಪ್ರಕರಣದ (ಬಿ) ಖಂಡದ ಅನುಸರಣೆಯಲ್ಲಿ ಒಂದು ಪ್ರಾಧಿಕಾರಕ್ಕೆ ಶಿಫಾರಸ್ಸುಗಳನ್ನು ಮಾಡಿದಾಗಲೆಲ್ಲ, ಆ ಪ್ರಾಧಿಕಾರವು ಆ ಬಗ್ಗೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ಪ್ರಾಧಿಕಾರವು ಶಿಫಾರಸ್ಸು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸ್ಟೇಟ್ ಕಮಿಷನರ್‌ಗೆ ತಿಳಿಸತಕ್ಕದ್ದು:

ಪರಂತು, ಆ ಪ್ರಾಧಿಕಾರವು ಸ್ಟೇಟ್ ಕಮಿಷನರ್‌ನ ಶಿಫಾರಸ್ಸನ್ನು ಅಂಗೀಕರಿಸದಿದ್ದಲ್ಲಿ, ಆ ಬಗೆಗಿನ ಕಾರಣಗಳನ್ನು ಮೂರು ತಿಂಗಳೊಳಗಾಗಿ ಸ್ಟೇಟ್ ಕಮಿಷನರ್‌ಗೆ ತಿಳಿಸತಕ್ಕದ್ದು ಮತ್ತು ಈ ಬಗ್ಗೆ ಬಾಧಿತ ವ್ಯಕ್ತಿಗೂ ಸಹ ತಿಳಿಸತಕ್ಕದ್ದು.

**82. ಸ್ಟೇಟ್ ಕಮಿಷನರ್‌ನ ಅಧಿಕಾರಗಳು.–** (1) ಸ್ಟೇಟ್ ಕಮಿಷನರ್‌ನು, ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ದಾವೆಯನ್ನು ವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ

ಮೇರೆಗೆ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ:-

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರ ಹಾಜರಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(2) ಸ್ಟೇಟ್ ಕಮಿಷನರ್‌ನ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು, ಭಾರತ ದಂಡ ಸಂಹಿತೆ, 1860 (1860ರ 45) ರ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಒಂದು ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ಸ್ಟೇಟ್ ಕಮಿಷನರ್‌ಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**83. ಸ್ಟೇಟ್ ಕಮಿಷನರ್‌ನ ವಾರ್ಷಿಕ ಮತ್ತು ವಿಶೇಷ ವರದಿಗಳು.-** (1) ಸ್ಟೇಟ್ ಕಮಿಷನರ್‌ನು, ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಆತನು ತುರ್ತು ಅಥವಾ ಪ್ರಮುಖವಾದುದು ಎಂದು ಅಭಿಪ್ರಾಯಪಡುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು. ಈ ರೀತಿ ಮಾಡುವುದನ್ನು ವಾರ್ಷಿಕ ವರದಿ ಸಲ್ಲಿಸುವವರೆಗೂ ಮುಂದೂಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಸ್ಟೇಟ್ ಕಮಿಷನರ್‌ನ ವಾರ್ಷಿಕ ಹಾಗೂ ವಿಶೇಷ ವರದಿಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಅವನು ಮಾಡಿದ ಶಿಫಾರಸ್ಸಿನ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸ್ಸುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ವಿವರಿಸಿರುವ ಶಿಫಾರಸ್ಸುಗಳೊಂದಿಗೆ ಆ ವರದಿಯನ್ನು ರಾಜ್ಯವು ಉಭಯ ಸದನಗಳನ್ನು ಹೊಂದಿದ್ದರೆ, ಆ ಎರಡೂ ಸದನಗಳ ರಾಜ್ಯದ

ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯವು ಒಂದೇ ಸದನವನ್ನು ಹೊಂದಿದ್ದರೆ ಅಂಥ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

(3) ವಾರ್ಷಿಕ ಮತ್ತು ವಿಶೇಷ ವರದಿಗಳನ್ನು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ/ ಅಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ಸಿದ್ಧಪಡಿಸತಕ್ಕದ್ದು.

## ಅಧ್ಯಾಯ XIII

## ವಿಶೇಷ ನ್ಯಾಯಾಲಯ

84. **ವಿಶೇಷ ನ್ಯಾಯಾಲಯ.–** ತ್ವರಿತ ವಿಚಾರಣೆಯನ್ನು ಮಾಡಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಸಹಮತಿಯೊಂದಿಗೆ, ಅಧಿಸೂಚನೆ ಮೂಲಕ ಪ್ರತಿಯೊಂದು ಜಿಲ್ಲೆಗಾಗಿ, ಈ ಅಧಿನಿಯಮದ ಮೇರೆಗಿನ ಅಪರಾಧಗಳ ವಿಚಾರಣೆಗಾಗಿ ಸೆಷನ್ಸ್ ನ್ಯಾಯಾಲಯವನ್ನೇ ಒಂದು ವಿಶೇಷ ನ್ಯಾಯಾಲಯವೆಂದು ನಿರ್ದಿಷ್ಟಪಡಿಸತಕ್ಕದ್ದು.

85. **ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್.–** (1) ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕಾಗಿ, ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಆ ನ್ಯಾಯಾಲಯದಲ್ಲಿನ ಮೊಕದ್ದಮೆಗಳ ನಿರ್ವಹಣೆ ಉದ್ದೇಶಕ್ಕಾಗಿ, ಒಬ್ಬರು ಪಬ್ಲಿಕ್ ಪ್ರಾಸಿಕ್ಯೂಟರನ್ನು ಗೊತ್ತುಪಡಿಸಬಹುದು ಅಥವಾ ಏಳು ವರ್ಷಗಳಿಗಿಂತ ಕಡಿಮೆ ಇರದಂತೆ ನ್ಯಾಯವಾದಿಯಾಗಿ ವೃತ್ತಿನಿರತರಾದ ಒಬ್ಬರು ನ್ಯಾಯವಾದಿಯನ್ನು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್‌ನಾಗಿ ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್‌ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಶುಲ್ಕಗಳನ್ನು ಅಥವಾ ಸಂಭಾವನೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ XIV

## ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ

86. **ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ.–** (1) ಅಂಗವಿಕಲ ವ್ಯಕ್ತಿಗಳಿಗಾಗಿ 'ರಾಷ್ಟ್ರೀಯ ನಿಧಿ' ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಅಧಿಸೂಚನೆ ಸಂಖ್ಯೆ. ಎಸ್.ಓ. 573(ಇ) ದಿನಾಂಕ 11ನೇ ಆಗಸ್ಟ್, 1983 ರ ಮೂಲಕ ಅಂಗವಿಕಲ ವ್ಯಕ್ತಿಗಳಿಗಾಗಿ ಸ್ಥಾಪಿತವಾದ ನಿಧಿಯಿಂದ ಮತ್ತು ಧರ್ಮಾರ್ಥ ದತ್ತಿ ಅಧಿನಿಯಮ, 1890 (1890ರ 6)ರ ಮೇರೆಗೆ ಅಧಿಸೂಚನೆ ಸಂಖ್ಯೆ. 30–03/2004– ಡಿಡಿ

II, ದಿನಾಂಕ 21ನೇ ನವೆಂಬರ್, 2006ರ ಮೂಲಕ ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಸ್ಥಾಪಿತವಾದ ನ್ಯಾಸ ನಿಧಿಯಿಂದ ಲಭ್ಯವಾಗಬಹುದಾದ ಎಲ್ಲಾ ಒಟ್ಟು ಮೊತ್ತಗಳನ್ನು;

(ಬಿ) ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು 2000ರ ಸಿವಿಲ್ ಅಪೀಲು ಸಂಖ್ಯೆ. 4655 ಮತ್ತು 5218ರಲ್ಲಿ, ದಿನಾಂಕ: 16ನೇ ಏಪ್ರಿಲ್ 2004 ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ ಬ್ಯಾಂಕ್‌ಗಳು, ನಿಗಮಗಳು, ಹಣಕಾಸು ಸಂಸ್ಥೆಗಳು ಪಾವತಿ ಮಾಡಬಹುದಾದ ಎಲ್ಲಾ ಮೊತ್ತಗಳನ್ನು;

(ಸಿ) ಅನುದಾನಗಳ, ಕೊಡುಗೆಗಳ, ದೇಣಿಗೆಗಳ, ಉಪಕಾರ ಧನಗಳ, ಮರಣ ಶಾಸನದ ಅಥವಾ ವರ್ಗಾವಣೆಗಳ ರೂಪದಲ್ಲಿ ಸ್ವೀಕೃತವಾದ ಎಲ್ಲಾ ಮೊತ್ತಗಳನ್ನು;

(ಡಿ) ಸಹಾಯಾನುದಾನಗಳೂ ಒಳಗೊಂಡಂತೆ ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ಎಲ್ಲಾ ಮೊತ್ತಗಳನ್ನು;

(ಇ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರೆ ಮೂಲಗಳಿಂದ ಬರುವ ಎಲ್ಲಾ ಮೊತ್ತಗಳನ್ನು

- ಜಮೆ ಮಾಡತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳ ನಿಧಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಬಳಕೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**87. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಆದಾಯ-ವೆಚ್ಚದ ಲೆಕ್ಕಪತ್ರಗಳೂ ಒಳಗೊಂಡಂತೆ ನಿಧಿಯ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕದ್ದು.

(2) ನಿಧಿಯ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾಲೆಕ್ಕಪರಿಶೋಧಕನಿಗೆ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ನಿಧಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ಮತ್ತು ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ

ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ನಿಧಿಯ ಲೆಕ್ಕದ ಪುಸ್ತಕಗಳನ್ನು, ಸಂಬಂಧಪಟ್ಟ ಓಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯ ಮಾಡುವ ಹಾಗೂ ಆ ಯಾವುದೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ-ಮತ್ತು- ಮಹಾ ಲೆಕ್ಕಪರಿಶೋಧಕನು ಅಥವಾ ಈ ಸಂಬಂಧ ಆತನಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ನಿಧಿಯ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರದ ಮೂಲಕ ಸಂಸತ್‌ನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ XV

## ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ

**88. ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ.–** (1) ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ 'ರಾಜ್ಯ ನಿಧಿ' ಎಂದು ಕರೆಯಬಹುದಾದ ಒಂದು ನಿಧಿಯನ್ನು ರಾಜ್ಯ ಸರ್ಕಾರವು ಸ್ಥಾಪಿಸತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಬಳಕೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ರಾಜ್ಯ ಸರ್ಕಾರವು, ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಆದಾಯ-ವೆಚ್ಚಗಳ ಲೆಕ್ಕಗಳನ್ನು ಒಳಗೊಂಡಂತೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಯುಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು.

(4) ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು, ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ವಹಿಸಲಾದ ಯಾವುದೇ ವೆಚ್ಚವನ್ನು ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕರಿಗೆ ರಾಜ್ಯ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(5) ಭಾರತದ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ಹಾಗೂ ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಆತನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಮತ್ತು ಅಧಿಕಾರವನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ನಿಧಿಯ ಲೆಕ್ಕಗಳ ಪುಸ್ತಕಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡುವ ಹಾಗೂ ರಾಜ್ಯ ನಿಧಿಯ ಯಾವುದೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(6) ಭಾರತ ಲೆಕ್ಕನಿಯಂತ್ರಕ-ಮತ್ತು-ಮಹಾ ಲೆಕ್ಕಪರಿಶೋಧಕನು ಅಥವಾ ಆತನಿಂದ ಈ ಬಗ್ಗೆ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ, ರಾಜ್ಯ ವಿಧಾನಮಂಡಲವು ಉಭಯ ಸದನಗಳನ್ನು ಹೊಂದಿದ್ದರೆ ಅವುಗಳ ಮುಂದೆ ಅಥವಾ ರಾಜ್ಯವು ಒಂದೇ ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ XVI

### ಅಪರಾಧಗಳು ಮತ್ತು ದಂಡಗಳು

89. **ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.**- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲ ಬಾರಿಯ ಉಲ್ಲಂಘನೆಗಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದ ಉಲ್ಲಂಘನೆಗಾಗಿ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ, ಆದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

90. **ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಎಸಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದು ಹಾಗೂ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಸಹ ಆ ಅಪರಾಧದ

ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಪ್ಪಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅವನನ್ನು ಈ ಉಪಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಹೊಣೆಯಾಗಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಎಸಗಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಆತನ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಆತನ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಆತನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ.

**91. ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡಿದ್ದಕ್ಕಾಗಿ ದಂಡನೆ.–** ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಯಾರಾದರೂ ಮೋಸದಿಂದ ಬಳಸಿಕೊಂಡರೆ ಅಥವಾ ಬಳಸಿಕೊಳ್ಳಲು ಪ್ರಯತ್ನಿಸಿದರೆ, ಆತನು ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸ ಶಿಕ್ಷೆಯಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು.

**92. ದೌರ್ಜನ್ಯಗಳ ಅಪರಾಧಗಳಿಗಾಗಿ ದಂಡನೆ.-** ಯಾರಾದರೂ,-

(ಎ) ಸಾರ್ವಜನಿಕರ ಕಣ್ಣಿಗೆ ಕಾಣುವಂತಹ ಯಾವುದೇ ಸ್ಥಳದಲ್ಲಿ ಅಂಗವಿಕಲ ವ್ಯಕ್ತಿಯನ್ನು ಅವಮಾನ ಮಾಡುವ ಉದ್ದೇಶದಿಂದ, ಉದ್ದೇಶಪೂರ್ವಕವಾಗಿ ಅಪಮಾನ ಮಾಡಿದರೆ ಅಥವಾ ಬೆದರಿಸಿದರೆ;

(ಬಿ) ಅಂಗವಿಕಲತೆಯ ಯಾರೇ ವ್ಯಕ್ತಿಗೆ ಅಗೌರವವುಂಟು ಮಾಡುವ ಉದ್ದೇಶದಿಂದ ಅಥವಾ ಅಂಗವಿಕಲತೆ ಉಳ್ಳ ಮಹಿಳೆಯ ಘನತೆ-ಗೌರವಕ್ಕೆ ಕುಂದು ತರುವ ಉದ್ದೇಶದಿಂದ ಉದ್ದೇಶದಿಂದ ಆತನ/ಆಕೆಯ ಮೇಲೆ ಹಲ್ಲೆ ಮಾಡಿದರೆ ಅಥವಾ ಬಲ ಪ್ರಯೋಗ ಮಾಡಿದರೆ;

(ಸಿ) ಅಂಗವಿಕಲ ವ್ಯಕ್ತಿಯ ಮೇಲೆ ವಾಸ್ತವ ಸುಪರ್ದನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ತಾನಾಗಿಯೇ ಅಥವಾ ಗೊತ್ತಿದ್ದೂ ಅಂಗವಿಕಲ ವ್ಯಕ್ತಿಗೆ ಅಥವಾ ಅಂಗವಿಕಲ ಮಹಿಳೆಗೆ ಆಹಾರ ಅಥವಾ ದ್ರವ ಆಹಾರ ನೀಡುವುದನ್ನು ನಿರಾಕರಿಸಿದರೆ;

(ಡಿ) ಅಂಗವಿಕಲ ಮಗುವಿನ ಅಥವಾ ಅಂಥ ಮಹಿಳೆಯ ಆಸೆ ಆಕಾಂಕ್ಷೆ ಮೇಲೆ ಹತೋಟಿ ಉಳ್ಳ ಸ್ಥಾನದಲ್ಲಿದ್ದು ಆ ಸ್ಥಾನವನ್ನು ಆ ಸಲುವಾಗಿ ಬಳಸಿಕೊಂಡರೆ ಮಗುವನ್ನು ಅಥವಾ ಅಂಥ ಮಹಿಳೆಯನ್ನು ಲೈಂಗಿಕವಾಗಿ ಶೋಷಿಸುವ;

(ಇ) ಅಂಗವಿಕಲ ವ್ಯಕ್ತಿಯು ಬಳಸುವ ಯಾವುದೇ ಅವಯವವನ್ನು ಅಥವಾ ಇಂದ್ರಿಯವನ್ನು ಅಥವಾ ಯಾವುದೇ ಆಸರೆಯ ಸಾಧನವನ್ನು ತಾನಾಗಿಯೇ ಕ್ಷತಿ ಉಂಟು ಮಾಡಿಸಿದರೆ, ಅದಕ್ಕೆ ಹಾನಿಯುಂಟು ಮಾಡಿದರೆ ಅಥವಾ ಅದಕ್ಕೆ ಬಾಧೆ ಉಂಟು ಮಾಡಿದರೆ;

(ಎಫ್) ಗರ್ಭಿಣಿಯಾಗಿರುವ ಅಂಗವಿಕಲ ಮಹಿಳೆಗೆ, ತೀವ್ರ ಅಂಗವಿಕಲತೆ ಪ್ರಕರಣಗಳಲ್ಲಿ ವೈದ್ಯಕೀಯ ಗರ್ಭಪಾತಕ್ಕಾಗಿ ನೋಂದಾಯಿತ ವೈದ್ಯಕೀಯ ವೃತ್ತಿಗನ ಅಭಿಪ್ರಾಯ ಪಡೆದುಕೊಂಡು ಹಾಗೂ ಅಂಗವಿಕಲ ಮಹಿಳೆಯ ಪಾಲಕರ ಸಹಮತಿ ಕೊಟ್ಟಿದ್ದ ಹೊರತು ವೈದ್ಯಕೀಯ ಪ್ರಕ್ರಿಯೆಗಳ ರೀತಿಯಲ್ಲಿ ಗರ್ಭವನ್ನು ಸಮಾಪನಗೊಳಿಸಬೇಕಾದ ಸಂದರ್ಭಗಳಲ್ಲಿ ಹೊರತು ಆ ಮಹಿಳೆಯ ಸ್ಪಷ್ಟ ಸಹಮತಿ ಇಲ್ಲದೆಯೇ ಅಂಥ ಅಂಗವಿಕಲ ಮಹಿಳೆಯ ಗರ್ಭಪಾತ ಉಂಟು ಮಾಡುವಂತಹ ಅಥವಾ ಉಂಟು ಮಾಡುವ ಸಂಭವವಿರುವ ಆ ರೀತಿಯ ಯಾವುದೇ ವೈದ್ಯಕೀಯ

ಪ್ರಕ್ರಿಯೆಯ ಕ್ರಿಯೆಗಳನ್ನು ಮಾಡಿದರೆ, ನಡೆಸಿದರೆ ಅಥವಾ ಅದಕ್ಕೆ ನಿರ್ದೇಶನಗಳನ್ನು ನೀಡಿದರೆ;

– ಆ ಯಾರೇ ವ್ಯಕ್ತಿಯು, ಆರು ತಿಂಗಳುಗಳಿಗಿಂತ ಕಡಿಮೆ ಇರದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಹಾಗೂ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**93. ಮಾಹಿತಿಯನ್ನು ಒದಗಿಸಲು ವಿಫಲವಾಗುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ಹೊರಡಿಸಿದ ಅಥವಾ ನೀಡಿದ ಯಾವುದೇ ಆದೇಶಕ್ಕೆ ಅಥವಾ ನಿರ್ದೇಶನಕ್ಕೆ ಅನುಸಾರವಾಗಿ ಯಾವುದೇ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಅಥವಾ ಒದಗಿಸುವುದಕ್ಕೆ ಅಥವಾ ಯಾವುದೇ ಪ್ರಶ್ನೆಗೆ ಉತ್ತರಿಸುವುದಕ್ಕೆ ಕರ್ತವ್ಯಬದ್ಧನಾಗಿದ್ದು, ಈ ಅಧಿನಿಯಮದ ಅಥವಾ ಇದರ ಮೇರೆಗೆ ಹೊರಡಿಸಿದ ಯಾವುದೇ ಆದೇಶದಂತೆ ಅಥವಾ ನಿರ್ದೇಶನದಂತೆ ಯಾವುದೇ ಪುಸ್ತಕವನ್ನು, ಲೆಕ್ಕಪತ್ರವನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ಯಾವುದೇ ಹೇಳಿಕೆಯನ್ನು, ಮಾಹಿತಿಯನ್ನು ಅಥವಾ ವಿವರಗಳನ್ನು ಒದಗಿಸಲು ವಿಫಲನಾಗಿರುವ ಯಾರೇ ವ್ಯಕ್ತಿಯು, ಪ್ರತಿಯೊಂದು ಅಪರಾಧಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ನಿರಂತರ ವಿಫಲತೆ ಅಥವಾ ನಿರಾಕರಣೆ ಸಂದರ್ಭದಲ್ಲಿ ಹಾಗೂ ಜುಲ್ಮಾನೆಯ ದಂಡನೆಯನ್ನು ವಿಧಿಸಿದ ಮೂಲ ಆದೇಶದ ದಿನಾಂಕದ ನಂತರದ ನಿರಂತರ ವಿಫಲತೆ ಅಥವಾ ನಿರಾಕರಣೆ ಸಂದರ್ಭದಲ್ಲಿ ಪ್ರತಿಯೊಂದು ದಿನಕ್ಕಾಗಿ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತಷ್ಟು ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**94. ಸಮುಚಿತ ಸರ್ಕಾರದ ಪೂರ್ವ ಮಂಜೂರಾತಿ.–** ಯಾವುದೇ ನ್ಯಾಯಾಲಯವು, ಸಮುಚಿತ ಸರ್ಕಾರದ ನೌಕರನು ಈ ಅಧ್ಯಾಯದ ಮೇರೆಗೆ ಆರೋಪಿಸಿರುವ ಅಪರಾಧವನ್ನು ಈ ಬಗ್ಗೆ ಸಮುಚಿತ ಸರ್ಕಾರದಿಂದ ಮುಂಚಿತವಾಗಿ ಮಂಜೂರಾತಿ ಪಡೆದಿದ್ದ ಹೊರತು ಅಥವಾ ಈ ಸಂಬಂಧ ಅಧಿಕೃತನಾದ ಅಧಿಕಾರಿಯು ದೂರನ್ನು ದಾಖಲಿಸಿದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**95. ಪರ್ಯಾಯ ದಂಡನೆಗಳು.–** ಯಾವುದೇ ಕೃತ್ಯವು ಅಥವಾ ಲೋಪವು ಈ ಅಧಿನಿಯಮದ ಮತ್ತು ಯಾವುದೇ ಇತರ ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೇರೆಗಿನ ದಂಡನೀಯ ಅಪರಾಧವೆಂದಾದರೆ, ಆಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಅಪರಾಧದ ತಪ್ಪಿತಸ್ಥನೆಂದು ರುಜುವಾತಾಗಿರುವ ಅಪರಾಧಿಯು ಅಂಥ ಅಧಿನಿಯಮದಲ್ಲಿ ಹೇಳಿರುವ ಹೆಚ್ಚಿನ ಪ್ರಮಾಣದ ದಂಡನೆಗೆ ಉಪಬಂಧಿಸಿರುವಂತೆ ಆ ಅಧಿನಿಯಮದ ಪ್ರಕಾರ ಮಾತ್ರವೇ ದಂಡನೆಗೆ ಗುರಿಯಾಗತಕ್ಕದ್ದು.

# ಅಧ್ಯಾಯ XVII

## ಸಂಕೀರ್ಣ

**96. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲ.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು, ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**97. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಅಥವಾ ಸಮುಚಿತ ಸರ್ಕಾರದ ವಿರುದ್ಧ ಅಥವಾ ಸಮುಚಿತ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಚೀಫ್ ಕಮಿಷನರ್‌ರ ಅಥವಾ ಸ್ಟೇಟ್ ಕಮಿಷನರ್‌ರ, ಈ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**98. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆಗಳು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ಸರಿಯೆಂದು ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

**99. ಅನುಸೂಚಿಯನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರ.–** (1) ಸಮುಚಿತ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇಲೆ ಅಥವಾ ಅನ್ಯಥಾ, ಅನುಸೂಚಿಯನ್ನು ಮತ್ತು ಹೊರಡಿಸಲಿರುವ ಯಾವುದೇ ಅಧಿಸೂಚನೆಯನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು, ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ

ಮಾಡಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದರೆ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಧಿಸೂಚನೆಯನ್ನು, ಹೊರಡಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

**100. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ.–** (1) ಕೇಂದ್ರ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 6ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಂಗವಿಕಲತೆಗೆ ಸಂಬಂಧಪಟ್ಟ ಸಂಶೋಧನೆಗಾಗಿ ಸಮಿತಿಯನ್ನು ರಚಿಸುವ ರೀತಿ;

(ಬಿ) 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಮಾನ ಅವಕಾಶದ ಕಾರ್ಯನೀತಿಯನ್ನು ಅಧಿಸೂಚಿಸುವ ರೀತಿ;

(ಸಿ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ಕಾರ್ಯಸಂಸ್ಥೆಯು ನಿರ್ವಹಿಸಬೇಕಾದ ದಾಖಲೆಗಳ ನಮೂನೆ ಮತ್ತು ರೀತಿ;

(ಡಿ) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕುಂದುಕೊರತೆ ನಿವಾರಣೆ ಅಧಿಕಾರಿಯು ದೂರಗಳ ವಹಿಯನ್ನು ನಿರ್ವಹಿಸುವ ರೀತಿ;

(ಇ) 36ನೇ ಪ್ರಕರಣದ ಮೇರೆಗೆ ವಿಶೇಷ ಉದ್ಯೋಗ ವಿನಿಮಯ ಕಚೇರಿಗೆ ಸಿಬ್ಬಂದಿಯ ಮಾಹಿತಿಯನ್ನು ಒದಗಿಸುವ ಮತ್ತು ವಾಪಸ್ ಪಡೆಯುವ ರೀತಿ;

(ಎಫ್) 38ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ಧರಣಾ ಮಂಡಳಿಯ ರಚನೆ ಮತ್ತು (3)ನೇ ಉಪಪ್ರಕರಣದ ಮೇರೆಗೆ ಆ ನಿರ್ಧರಣಾ ಮಂಡಳಿಯು ಮಾಡಬೇಕಾದ ನಿರ್ಧರಣೆಯ ರೀತಿ;

(ಜಿ) 40ನೇ ಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಸುಲಭ ಲಭ್ಯತೆಯ ಮಾನದಂಡಗಳನ್ನು ತಿಳಿಸುವ ನಿಯಮಗಳು;

(ಹೆಚ್) 58ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಗವಿಕಲತೆಯ ಪ್ರಮಾಣಪತ್ರ ನೀಡುವುದಕ್ಕೆ ಅರ್ಜಿಯ ರೀತಿ ಮತ್ತು (2)ನೇ ಉಪಪ್ರಕರಣದ ಮೇರೆಗೆ ಅಂಗವಿಕಲತೆಯ ಪ್ರಮಾಣಪತ್ರದ ನಮೂನೆ;

(ಐ) 61ನೇ ಪ್ರಕರಣದ ಮೇರೆಗೆ (6)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸಲಹಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಜೆ) 64ನೇ ಪ್ರಕರಣದ ಮೇರೆಗೆ ಕೇಂದ್ರ ಸಲಹಾ ಮಂಡಳಿಯ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಪ್ರಕ್ರಿಯಾ ನಿಯಮಗಳು;

(ಕೆ) 74ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಚೀಫ್ ಕಮಿಷನರ್‌ರ ಹಾಗೂ ಕಮಿಷನರ್‌ರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು;

(ಎಲ್) 74ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಚೀಫ್ ಕಮಿಷನರ್‌ನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವಾ ಷರತ್ತುಗಳು;

(ಎಂ) 74ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ಸಲಹಾ ಮಂಡಳಿಯ ರಚನೆ ಮತ್ತು ತಜ್ಞರ ನೇಮಕಾತಿಯ ರೀತಿ;

(ಎನ್) 78ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಚೀಫ್ ಕಮಿಷನರ್ ಸಿದ್ಧಪಡಿಸಬೇಕಾದ ಮತ್ತು ಸಲ್ಲಿಸಬೇಕಾದ ವಾರ್ಷಿಕ ವರದಿಯ ನಮೂನೆ, ರೀತಿ ಮತ್ತು ಒಳಾಂಶಗಳು;

(ಒ) 86ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಿದ ನಿಧಿಯ ಬಳಕೆ ಮತ್ತು ಅದರ ನಿರ್ವಹಣೆಯ ಕಾರ್ಯವಿಧಾನ ಮತ್ತು ರೀತಿ;

(ಪಿ) 87ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಿದ ನಿಧಿಯ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದಕ್ಕಾಗಿ ನಮೂನೆ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ

ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**101. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.**- (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಈ ಅಧಿನಿಯಮದ ಉಪಬಂಧಗಳ ಪಾಲನೆಗಾಗಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಂಗವಿಕಲತೆಗೆ ಸಂಬಂಧಪಟ್ಟ ಸಂಶೋಧನೆಗಾಗಿ ಸಮಿತಿಯನ್ನು ರಚಿಸುವ ರೀತಿ;

(ಬಿ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಬ್ಬ ಸೀಮಿತ ಪಾಲಕನ ನೆರವನ್ನು ಒದಗಿಸುವ ರೀತಿ;

(ಸಿ) 51ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ;

(ಡಿ) 51ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂಸ್ಥೆಗಳು ಒದಗಿಸಬೇಕಾದ ಸೌಲಭ್ಯಗಳು ಮತ್ತು ಪೂರೈಸಬೇಕಾದ ಮಾನದಂಡಗಳು;

(ಇ) 51ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರದ ಸಿಂಧುತ್ವ, ಅದರ ನಮೂನೆ ಮತ್ತು ಅದರ ಷರತ್ತುಗಳು;

(ಎಫ್) 51ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ ಅರ್ಜಿಯ ವಿಲೆಯ ಕಾಲಾವಧಿ;

(ಜಿ) 53ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪೀಲು ಮಾಡಬೇಕಾದ ಆ ಯಾವುದೇ ಕಾಲಾವಧಿ;

(ಹೆಚ್) 59ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣೀಕರಿಸುವ ಪ್ರಾಧಿಕಾರಿಯ ಆದೇಶದ ವಿರುದ್ಧ ಮಾಡುವ ಅಪೀಲಿನ ಅವಧಿ ಮತ್ತು ರೀತಿ ಮತ್ತು (2)ನೇ ಉಪಪ್ರಕರಣದ ಮೇರೆಗೆ ಅಂಥ ಅಪೀಲಿನ ವಿಲೆಯ ರೀತಿ;

(ಐ) 67ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಲಹಾ ಮಂಡಲಿಯ ನಾಮನಿರ್ದೇಶಿತ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಜೆ) 70ನೇ ಪ್ರಕರಣದ ಮೇರೆಗೆ ರಾಜ್ಯ ಸಲಹಾ ಮಂಡಳಿಯ ಸಭೆಗಳ ಕಾರ್ಯನಿರ್ವಹಣೆಯ ಪ್ರಕ್ರಿಯಾ ನಿಯಮಗಳು;

(ಕೆ) 72ನೇ ಪ್ರಕರಣದ ಮೇರೆಗೆ ಜಿಲ್ಲಾ ಮಟ್ಟದ ಸಮಿತಿಯ ರಚನೆ ಮತ್ತು ಅದರ ಪ್ರಕಾರ್ಯಗಳು;

(ಎಲ್) 79ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ರ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಎಂ) 79ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಎನ್) 79ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಸಲಹಾ ಸಮಿತಿಯ ರಚನೆ ಮತ್ತು ಅದರಲ್ಲಿರಬೇಕಾದ ತಜ್ಞರ ನೇಮಕಾತಿಯ ರೀತಿ;

(ಒ) 83ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ನು ಸಿದ್ಧಪಡಿಸಬೇಕಾದ ಮತ್ತು ಸಲ್ಲಿಸಬೇಕಾದ ವಾರ್ಷಿಕ ಹಾಗೂ ವಿಶೇಷ ವರದಿಗಳ ನಮೂನೆ, ರೀತಿ ಮತ್ತು ಒಳಾಂಶಗಳು;

(ಪಿ) 85ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿಶೇಷ ಸರ್ಕಾರಿ ಅಭಿಯೋಜಕರಿಗೆ ಸಂದಾಯ ಮಾಡಬೇಕಾದ ಶುಲ್ಕ ಅಥವಾ ಪರಿಶ್ರಮಧನ;

(ಕ್ಯೂ) 88ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ಸ್ಥಾಪಿಸುವ ರೀತಿ ಮತ್ತು (2)ನೇ ಉಪಪ್ರಕರಣದ ಮೇರೆಗೆ ಅದರ ಬಳಕೆ ಹಾಗೂ ನಿರ್ವಹಣೆಯ ವಿಧಾನ;

(ಆರ್) 88ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದಕ್ಕಾಗಿ ನಮೂನೆ.

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡೂ ಸದನಗಳನ್ನು ಹೊಂದಿದ್ದರೆ ಅಂಥ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ರಾಜ್ಯ ವಿಧಾನಮಂಡಲವು ಒಂದು ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

**102. ನಿರಸನ ಮತ್ತು ಉಳಿಸುವಿಕೆಗಳು.–** (1) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ) ಅಧಿನಿಯಮ, 1995 (1996ರ 1) ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಸದರಿ ಅಧಿನಿಯಮವು ನಿರಸನಗೊಂಡಿದ್ದಾಗ್ಯೂ, ಸದರಿ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಅನುಸೂಚಿ

(2ನೇ ಪ್ರಕರಣದ ಖಂಡ (ಝಡ್‌ಸಿ) ವನ್ನು ನೋಡಿ)

## ನಿರ್ದಿಷ್ಟಪಡಿಸಿದ ಅಂಗವಿಕಲತೆ

1. **ದೈಹಿಕ ಅಂಗವಿಕಲತೆ .–**

ಎ. ಚಲನಶಕ್ತಿಯ ವಿಕಲತೆಯು (ಕೀಲುಗಳು ಅಥವಾ ಮಾಂಸಖಂಡಗಳ ನರವ್ಯೂಹದ ದೋಷದಿಂದಾಗಿ ಅಥವಾ ಇವೆರಡರ ವೇದನೆಯ ಪರಿಣಾಮದಿಂದಾಗಿ ವ್ಯಕ್ತಿಯು ಸ್ವತಃ ತಾನೇತಾನಾಗಿ ಚಲಿಸಲು ಮತ್ತು ವಸ್ತುಗಳ ಸಹಾಯದಿಂದ ಚಲಿಸಿ ವಿಭಿನ್ನ ರೀತಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಂತೆ ಅಶಕ್ತತೆಗೆ ಒಳಗಾಗಿರುವುದು) ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ, ಎಂದರೆ,-

(ಎ) "ಕುಷ್ಠರೋಗ ವಾಸಿಯಾಗಿರುವ ವ್ಯಕ್ತಿ" ಎಂದರೆ, ಕುಷ್ಠರೋಗವು ವಾಸಿಯಾಗಿರುವ, ಆದರೆ ಈ ಕೆಳಕಂಡವುಗಳಿಂದ ಬಳಲುತ್ತಿರುವ ಒಬ್ಬ ವ್ಯಕ್ತಿ;

(i) ಕೈಗಳು ಅಥವಾ ಕಾಲುಗಳಲ್ಲಿ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವ ಮತ್ತು ಕಣ್ಣು ಹಾಗೂ ಕಣ್ಣುರೆಪ್ಪೆಗಳಲ್ಲಿ ಸಹ ಸ್ನಾಯು ಲಕ್ವ ಉಂಟಾದ ಪರಿಣಾಮದಿಂದ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವ, ಆದರೆ ದೇಹದ ಅಂಗವು ದೃಷ್ಟಿಗೋಚರ ವಿಕಾರ ಇಲ್ಲದಿರುವುದು;

(ii) ಸ್ಪಷ್ಟವಾದ ಅಂಗವಿಕಾರ ಹಾಗೂ ಸ್ನಾಯು ಲಕ್ವ ಉಂಟಾಗಿದ್ದು, ಆದರೆ ಸಾಮಾನ್ಯ ಆರ್ಥಿಕ ಚಟುವಟಿಕೆಯಲ್ಲಿ ತೊಡಗಲು ಅವರಿಗೆ ಸಾಧ್ಯವಾಗುವಂತೆ ಅವರ ಕೈಗಳು ಮತ್ತು ಕಾಲುಗಳಲ್ಲಿ ಸಾಕಷ್ಟು ಚಲನಶಕ್ತಿಯನ್ನು ಹೊಂದಿರುವ;

(iii) ತೀವ್ರತರವಾದ ದೈಹಿಕ ಅಂಗವಿಕಾರತೆ ಉಂಟಾಗಿರುವುದು ಮತ್ತು ಹೆಚ್ಚಿನ ವಯಸ್ಸಾದಂತೆ ಆತನು/ಆಕೆಯು ಯಾವುದೇ ಲಾಭದಾಯಕ ಉದ್ಯೋಗ ಕೈಗೊಳ್ಳುವುದಕ್ಕೆ ಸಾಧ್ಯವಾಗದಿರುವುದು; ಮತ್ತು "ವಾಸಿಯಾಗಿರುವ ಕುಷ್ಠರೋಗ" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಬಿ) "ಮಿದುಳು ಪಾರ್ಶ್ವವಾಯು" ಎಂದರೆ, ಮಗುವಿನ ಜನನಕ್ಕೂ ಮುಂಚೆ ಅಥವಾ ಜನನದ ಕಾಲದಲ್ಲಿ ಅಥವಾ ಜನನದ ಸ್ವಲ್ಪ ಕಾಲದ ತರುವಾಯ ಮಗುವಿನ ಮಿದುಳಿನ ಒಂದು ಭಾಗಕ್ಕೆ ಅಥವಾ ಒಂದಕ್ಕಿಂತ ಹೆಚ್ಚಿನ ನಿರ್ದಿಷ್ಟ ಭಾಗಗಳಿಗೆ ಸಾಮಾನ್ಯವಾಗಿ ಉಂಟಾಗುವ ಹಾನಿಯ ಪರಿಣಾಮದಿಂದ ಆ ಮಗುವಿನ ದೈಹಿಕ ಚಲನೆಗಳಿಗೆ ಮತ್ತು ಸ್ನಾಯುಗಳ ಸಮನ್ವಯ ಕ್ರಿಯೆಗೆ ಅಡಚಣೆ ಉಂಟು ಮಾಡುವ ಆದರೆ ಮತ್ತಷ್ಟು ಬಲಿಯದ ಸ್ಥಿತಿಯ ನರಸಂಬಂಧಿ ಸಮೂಹ.

(ಸಿ) "ಕುಬ್ಜತೆ" ಎಂದರೆ, ಒಬ್ಬ ವಯಸ್ಕನ ಎತ್ತರವು 4 ಅಡಿ 10 ಇಂಚುಗಳು (147 ಸೆಂ.ಮೀ.ಗಳು) ಇರುವುದರಿಂದಾದ ಅಥವಾ ಅದಕ್ಕಿಂತ ಕಡಿಮೆ ಇರುವುದರಿಂದಾದ ವೈದ್ಯಕೀಯ ಅಥವಾ ಆನುವಂಶಿಕ ಸ್ಥಿತಿ.

(ಡಿ) ಮಾನವ ದೇಹದ ಚಲನೆಯನ್ನು ಮತ್ತು ಬಹು ವಿಧ ಸ್ನಾಯು ಸವೆತದ ಯಾವುದೇ ರೋಗ ಉಳ್ಳ ವ್ಯಕ್ತಿಗಳ ವಂಶವಾಹಿಗಳಲ್ಲಿ ದೋಷಯುಕ್ತ ಮತ್ತು ಕಾಣೆಯಾಗಿರುವ ಸಂಕೇತಗಳಿರುವುದರ ಪರಿಣಾಮವಾಗಿ ಅವರುಗಳಲ್ಲಿ ಆರೋಗ್ಯಕರ ಸ್ನಾಯುಗಳಿಗೆ ಅಗತ್ಯವಾದ ಪ್ರೊಟೀನುಗಳು ಉತ್ಪತ್ತಿಯಾಗುವುದನ್ನು ತಡೆಯುವಂತಹ ರೋಗವಾಗಿದೆಯೋ ಆ ರೋಗವು ಅಂತಹ ವ್ಯಕ್ತಿಗಳ ಚಲನೆಗೆ ಅನುವು ಮಾಡಿಕೊಡುವ ಸ್ನಾಯುಗಳನ್ನು ದುರ್ಬಲಗೊಳಿಸುವುದೋ

ಅಂತಹ ಆನುವಂಶಿಕ ಸ್ನಾಯು ಸವೆತ ರೋಗದ ಗುಚ್ಛ. ಅಸ್ಥಿ ಪಂಜರದ ಸ್ನಾಯುಗಳಲ್ಲಿ ಹೆಚ್ಚುತ್ತಿರುವ ದೌರ್ಬಲ್ಯ, ಸ್ನಾಯು ಪ್ರೋಟೀನುಗಳಲ್ಲಿನ ದೋಷಗಳು ಮತ್ತು ಸ್ನಾಯು ಕೋಶಗಳ ಮತ್ತು ಅಂಗಾಂಶಗಳ ಅವಸಾನ ಆ ರೋಗದ ಲಕ್ಷಣಗಳೆಂದು ಹೇಳಲಾಗುತ್ತದೆ.

(ಇ) "ಆಸಿಡ್ ದಾಳಿಗೆ ತುತ್ತಾದವರು" ಎಂದರೆ, ಆಸಿಡ್ ಅಥವಾ ಅಂಥದ್ದೇ ಸುಡುವ ನಾಶಕಾರಿ ರಾಸಾಯನಿಕ ವಸ್ತು ಎರಚುವುದರ ಮೂಲಕ ಹಿಂಸಾತ್ಮಕ ಹಲ್ಲೆಯಿಂದ ವಿರೂಪಗೊಂಡ ಒಬ್ಬ ವ್ಯಕ್ತಿ.

**ಬಿ. ದೃಷ್ಟಿ ದೋಷ.–**

(ಎ) "ಅಂಧತ್ವ" ಎಂದರೆ, ಕಣ್ಣಿನ ಉತ್ತಮ ದೃಷ್ಟಿ ಪರೀಕ್ಷೆಯ ನಂತರ, ಈ ಕೆಳಕಂಡ ಯಾವುದೇ ಸ್ಥಿತಿಗಳಲ್ಲಿ ಇರುವ ಒಬ್ಬ ವ್ಯಕ್ತಿಯ ಒಂದು ಸ್ಥಿತಿ,–

(i) ಸಂಪೂರ್ಣ ದೃಷ್ಟಿಹೀನತೆ; ಅಥವಾ

(ii) ಸಾಧ್ಯವಾದಷ್ಟು ಉತ್ತಮವಾಗಿಯೇ ಕಣ್ಣಿನ ದೃಷ್ಟಿ ಪರೀಕ್ಷೆ ಮಾಡಿಸಿ ಕೊಂಡ, ಕಣ್ಣಿನ ದೃಷ್ಟಿ ಶಕ್ತಿಯು 3/60 ರಷ್ಟಕ್ಕಿಂತ ಅಥವಾ 10/200 (ಸ್ನೆಲ್ಲೆನ್)ಕ್ಕಿಂತ ಕಡಿಮೆ ದೃಷ್ಟಿ ತೀಕ್ಷ್ಣತೆ ಇರುವುದು; ಅಥವಾ

(iii) ಕಣ್ಣಿನಿಂದ ಎಲ್ಲಿಯವರೆಗೆ ನೋಡಬಹುದೋ ಆ ದೂರದ ಮಿತಿ 10 ಡಿಗ್ರಿ ಕೋನದಷ್ಟು ಇರುವುದು/ ಅಸಮರ್ಥತೆ ಇರುವುದು.

(ಬಿ) "ಮಂದ ದೃಷ್ಟಿ" ಎಂದರೆ, ವ್ಯಕ್ತಿಯಲ್ಲಿ ಈ ಕೆಳಕಂಡವುಗಳಲ್ಲಿ ಯಾವುದಾದರೊಂದು ಸ್ಥಿತಿಗಳನ್ನು ಹೊಂದಿರುವ ಸ್ಥಿತಿ, ಎಂದರೆ:–

(i) ಸಾಧ್ಯವಾದಷ್ಟು ಮಟ್ಟಿಗೆ ಕಣ್ಣುಗಳ ಪರೀಕ್ಷೆ ಮಾಡಿಸಿಕೊಂಡಾಗ ಉತ್ತಮವಾದ ಕಣ್ಣಿನ ದೃಷ್ಟಿ 6/18 ರಷ್ಟು ಮೀರದಿರುವ ಅಥವಾ 20/60ರಷ್ಟಕ್ಕಿಂತ ಕಡಿಮೆ ಇರುವ, 3/60 ರವರೆಗೆ ಅಥವಾ 10/200 (ಸ್ನೆಲ್ಲೆನ್) ರವರೆಗೆ ಇರುವ; ಅಥವಾ

(ii) ಕಣ್ಣಿನಿಂದ ಎಲ್ಲಿಯವರೆಗೆ ನೋಡಬಹುದೋ ಆ ದೂರದ ಮಿತಿ 40 ಡಿಗ್ರಿಗಿಂತ ಕಡಿಮೆ ಕೋನದಷ್ಟು, 10 ಡಿಗ್ರಿಯವರೆಗಿನ ಕೋನದಷ್ಟು ಇರುವ

– ಸ್ಥಿತಿ.

ಸಿ. **ಶ್ರವಣ ದೋಷ.**–

(ಎ) "ಕಿವುಡರು" ಎಂದರೆ, ಎರಡೂ ಕಿವಿಗಳಲ್ಲಿ ಮಾತಿನ ಧ್ವನಿತರಂಗಗಳನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವುದಕ್ಕೆ ಶೇ. 70 ಡೆಸಿಬಲ್‌ರಷ್ಟು ಶ್ರವಣಶಕ್ತಿ ನಷ್ಟವಾಗಿರುವ ವ್ಯಕ್ತಿಗಳು;

(ಬಿ) "ಕ್ಲಿಷ್ಟ ಶ್ರವಣ" ಎಂದರೆ, ಎರಡೂ ಕಿವಿಗಳಲ್ಲಿ ಮಾತಿನ ಧ್ವನಿ ತರಂಗಗಳನ್ನು ಗ್ರಹಿಸುವಾಗ ಶೇ. 60 ಡೆಸಿಬಲ್‌ರಿಂದ ಶೇ.70 ಡೆಸಿಬಲ್‌ರಷ್ಟು ಶ್ರವಣಶಕ್ತಿ ಕುಗ್ಗಿರುವ ವ್ಯಕ್ತಿ;

ಡಿ. "ಮಾತನಾಡಲು ಮತ್ತು ಸಂವಹನ ಅಸಮರ್ಥತೆ" ಎಂದರೆ, ಶಾರೀರಿಕ ಅಥವಾ ನರಸಂಬಂಧಿ ಸಮಸ್ಯೆಗಳಿಂದಾಗಿ ಶಸ್ತ್ರ ಚಿಕಿತ್ಸೆಯ ಕಾರಣಗಳಿಂದಾಗಿ ಮಾತು ಮತ್ತು ಭಾಷೆಯನ್ನು ವ್ಯಕ್ತಪಡಿಸುವ ಒಂದು ಅಥವಾ ಅದಕ್ಕಿಂತ ಹೆಚ್ಚು ಅಂಗಗಳಿಗೆ ತೊಂದರೆಯುಂಟಾಗಿ, ಈ ಕಾರಣದಿಂದ ಗಂಟಲಿನ ಧ್ವನಿಪೆಟ್ಟಿಗೆಯಲ್ಲಿ ಮಾತು ಹೊರಡದಂತಾಗುವ ಅಥವಾ (ವಾಕ್ ಸ್ಥಂಭನ) ಮಾತು ನಿಂತುಹೋಗುವಂಥ ಖಾಯಂ ಅಂಗವಿಕಲತೆ.

2. **ಬೌದ್ಧಿಕ ವಿಕಲತೆ.**– ಬೌದ್ಧಿಕ ವಿಕಲತೆ ಎಂದರೆ, ಬೌದ್ಧಿಕ ಕ್ರಿಯೆ (ಎಂದರೆ ಬುದ್ಧಿವಂತಿಕೆಯಿಂದ ಆಲೋಚಿಸುವುದು, ಕಲಿಯುವುದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು) ಹಾಗೂ ದೈನಂದಿನ, ಸಾಮಾಜಿಕ ಮತ್ತು ವ್ಯವಹಾರಿಕ ಕುಶಲತೆಯನ್ನು ಅಳವಡಿಸಿಕೊಳ್ಳುವ ರೀತಿ ಈ ಎರಡರಲ್ಲಿ ಎದ್ದು ಕಾಣುವಂತಹ ದೌರ್ಬಲ್ಯದ ಲಕ್ಷಣಗಳು ಇರುವ ಸ್ಥಿತಿ, ಇದರಲ್ಲಿ ಈ ಕೆಳಕಂಡವುಗಳು ಸೇರುತ್ತವೆ, ಎಂದರೆ,–

(ಎ) "ನಿರ್ದಿಷ್ಟ ಕಲಿಕಾ ವಿಕಲತೆ" ಎಂದರೆ, ಯಾವ ಸ್ಥಿತಿಗಳಲ್ಲಿ ಭಾಷೆಯನ್ನು ಮಾತನಾಡುವ ಅಥವಾ ಬರೆಯುವ ಪ್ರಕ್ರಿಯೆಯಲ್ಲಿ ಅದನ್ನು ಗ್ರಹಿಸುವುದಕ್ಕೆ, ಮಾತನಾಡುವುದಕ್ಕೆ, ಓದುವುದಕ್ಕೆ, ಬರೆಯುವುದಕ್ಕೆ, ಅಕ್ಷರವನ್ನು ಕೂಡಿಸುವುದಕ್ಕೆ ಅಥವಾ ಗಣಿತದ ಲೆಕ್ಕಾಚಾರಗಳನ್ನು ಮಾಡಲು ಕಷ್ಟವುಂಟಾಗುವುದೋ ಅಂತರ ವಿಜಾತೀಯ ವಿಕಲತೆ ಸ್ಥಿತಿಗಳ ವರ್ಗ ಮತ್ತು ಇದರಲ್ಲಿ ನಿರಂತರ ವಿಕಲತೆಗಳು, ಮಾತು ಅರ್ಥವಾಗದಿರುವುದು, ಕಷ್ಟಪಟ್ಟು ಬರೆಯುವುದು, ಡಿಸ್‌ಕ್ಯಾಕ್ಯೂಲಿಯ, ಸಮನ್ವಯ ಕ್ರಿಯೆಯಲ್ಲಿ ಕೊರತೆ ಮತ್ತು ಬೆಳವಣಿಗೆಯಾಗುವಂತಹ ಮೂಕತನದಂತಹ ಸ್ಥಿತಿಗಳೂ ಸೇರುತ್ತವೆ;

(ಬಿ) "ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್" ಎಂದರೆ, ಮಗುವಿನ ಮೊದಲ ಮೂರು ವರ್ಷಗಳ ಬೆಳವಣಿಗೆಯಲ್ಲಿ ವಿಶಿಷ್ಟವಾಗಿ ಕಾಣಿಸಿಕೊಳ್ಳುವ ಒಂದು ನರಸಂಬಂಧಿ ಬೆಳವಣಿಗೆಯ ಸ್ಥಿತಿಯಾಗಿದ್ದು, ಇದರ ಪರಿಣಾಮದಿಂದಾಗಿ ವ್ಯಕ್ತಿಯು ಪರಸ್ಪರ ಸಂವಹನ ಮಾಡಲು, ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಇತರರೊಂದಿಗೆ ತನಗಿರುವ ಸಂಬಂಧದ ಕಲ್ಪನೆ ಮಾಡಿಕೊಳ್ಳುವುದಕ್ಕೆ ಆತನಿಗಿರುವ ಸಾಮರ್ಥ್ಯದ ಮೇಲೆ ಗಮನಾರ್ಹ ಪರಿಣಾಮ ಉಂಟುಮಾಡುವ ಮತ್ತು ಅಸಹಜ ಅಥವಾ ಮಾಡಿದ್ದನ್ನೇ ಪದೇಪದೇ ಮಾಡುವ ಕ್ರಿಯೆ ಅಥವಾ ನಡವಳಿಕೆಯನ್ನುಳ್ಳ ಸ್ಥಿತಿ.

**3. ಮಾನಸಿಕ ವರ್ತನೆ.-**

"ಮಾನಸಿಕ ಅಸ್ವಸ್ಥತೆ" ಎಂದರೆ, ವ್ಯಕ್ತಿಯ ಆಲೋಚನೆ, ಚಿತ್ತಸ್ಥಿತಿ, ಗ್ರಹಿಕೆ, ಹೊಂದಾಣಿಕೆ ಅಥವಾ ನೆನಪು ಇವುಗಳಿಗೆ ಸಂಬಂಧಿಸಿದಂತೆ ಇರುವ ಯಾವ ಗಣನೀಯ ಅಸ್ತವ್ಯಸ್ತತೆಯಿಂದಾಗಿ ವಿವೇಚನೆ ಶಕ್ತಿಯು, ನಡವಳಿಕೆಯು, ವಾಸ್ತವವನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಅಥವಾ ಜೀವನದ ಸಾಧಾರಣ ಅವಶ್ಯಕ್ತೆಗಳನ್ನು ಪೂರೈಸಿಕೊಳ್ಳುವ ಶಕ್ತಿಯು ಒಟ್ಟಾರೆಯಾಗಿ ಕುಂಠಿತವಾಗಿರುವುದೋ ಅಂಥ ಗಣನೀಯ ಅಸ್ತವ್ಯಸ್ತತೆ. ಆದರೆ ಇದರಲ್ಲಿ, ವ್ಯಕ್ತಿಯ ಮಾನಸಿಕ ಬೆಳವಣಿಗೆ ನಿಂತುಹೋಗಿರುವ ಅಥವಾ ಅಪೂರ್ಣವಾಗಿರುವ ಅದರಲ್ಲೂ ಮುಖ್ಯವಾಗಿ ಬುದ್ಧಿಶಕ್ತಿಯು ಸಾಮಾನ್ಯ ಮಟ್ಟಕ್ಕಿಂತ ಕೆಳಮಟ್ಟದ್ದೆಂದು ಹೇಳಬಹುದಾದ ಸ್ಥಿತಿಯನ್ನು ಒಳಗೊಳ್ಳುವುದಿಲ್ಲ.

**4. ಈ ಕೆಳಕಂಡ ಕಾರಣಗಳಿಂದಾಗುವ ಅಂಗವಿಕಲತೆ.-**

(ಎ) ದೀರ್ಘಕಾಲದ ನರಸಂಬಂಧಿ ರೋಗದ ಸ್ಥಿತಿಗಳಿಂದ ಎಂದರೆ.-

(i) "ಮಲ್ಟಿಪಲ್ ಸೈಲೊರೊಸಿಸ್" ಎಂದರೆ, ನರ ಮಂಡಲದ ಯಾವ ರೋಗದಿಂದಾಗಿ ನರಕೋಶಗಳ ನರತಂತುಗಳ ಸುತ್ತಲೂ ಇರುವ ನರ ಪೊರೆಗಳು ಹಾಳಾಗಿ ನರಪೊರೆ ಇಲ್ಲವಾಗುವುದಕ್ಕೆ ಮತ್ತು ಮಿದುಳು ಮತ್ತು ಬೆನ್ನುಹುರಿಯ ನರಕೋಶಗಳು ಒಂದನ್ನೊಂದು ಸಂಪರ್ಕಿಸುವ ಶಕ್ತಿಗೆ ಬಾಧಕ ಉಂಟು ಮಾಡುವುದಕ್ಕೆ ಅನುವು ಮಾಡಿಕೊಡುತ್ತವೋ ಆ ದೀರ್ಘಕಾಲದ ನರ ಸಂಬಂಧಿ ರೋಗ ಸ್ಥಿತಿಗಳು;

(ii) "ಪಾರ್ಕಿನ್‌ಸನ್ ರೋಗ" ಎಂದರೆ, ಮಿದುಳಿನ ಬುಡದಲ್ಲಿರುವ ನರಗಂಟಿನ ರಚನೆಯಲ್ಲಿ ವಿಕಾರದಿಂದಾಗಿ ಮತ್ತು ಅಥವಾ ಸ್ನಾಯು ಚೋದನೆ

ರವಾನೆಗೆ ಸಾಧ್ಯತೆ ಮಾಡಿಕೊಡುವ ಡೋಪಮಿನ್ ಕೊರತೆಯಿಂದಾಗಿ ಬಹುಮುಖ್ಯವಾಗಿ ಮಧ್ಯವಯಸ್ಕರನ್ನೂ ಮತ್ತು ವೃದ್ಧರನ್ನೂ ಬಾಧಿಸುವ ನಡುಕ, ಸ್ನಾಯುಗಳ ಸೆಳೆತ ಮತ್ತು ನಿಧಾನಗತಿಯ, ನಿಖರವಲ್ಲದ ಚಲನವಲನವು ಸ್ಪಷ್ಟವಾಗಿ ಕಂಡುಬರುವ ನರವ್ಯೂಹದ ಹೆಚ್ಚುತ್ತಿರುವ ರೋಗ.

(ಬಿ) **ರಕ್ತ ವಿಕಾರದಿಂದ ಎಂದರೆ.-**

(i) "ರಕ್ತವು ಬೇಗನೆ ಹೆಪ್ಪುಗಟ್ಟುವಿಕೆ (ಹಿಮೋಫಿಲಿಯಾ)" ಎಂದರೆ, ರಕ್ತವು ಸಹಜವಾಗಿ ಹೆಪ್ಪುಗಟ್ಟುವ ಕ್ರಿಯೆಯ ಶಕ್ತಿಯು ನಿಂತು ಹೋಗಿರುವುದರಿಂದಾಗಿ ಅಥವಾ ಹಾಳಾಗಿರುವುದರಿಂದಾಗಿ ಒಂದು ಸಣ್ಣ ಗಾಯವಾದರೂ ಕೂಡ ಮಾರಣಾಂತಿಕ ರಕ್ತಸ್ರಾವಕ್ಕೆ ಕಾರಣವಾಗಬಹುದಾದ ಸಾಮಾನ್ಯವಾಗಿ ಪುರುಷರನ್ನು ಮಾತ್ರ ಬಾಧಿಸುವ ಆದರೆ ಗಂಡು ಮಕ್ಕಳಿಗೆ ಅವರ ತಾಯಿಯಿಂದ ಬರುವ ಆನುವಂಶಿಕ ರೋಗ;

(ii) "ಥಲಸ್ಸೇಮಿಯ" ಎಂದರೆ, ರಕ್ತದಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆಯಾಗಿರುವ ಅಥವಾ ಹಿಮೋಗ್ಲೋಬಿನ್ ಪ್ರಮಾಣ ಇಲ್ಲದಿರುವ ಲಕ್ಷಣವುಳ್ಳ, ಆನುವಂಶಿಕವಾಗಿ ಬರುವ ವಿಕಾರಗಳ ವರ್ಗ;

(iii) "ಸಿಕೆಲ್ ಸೆಲ್ ರೋಗ" ಎಂದರೆ, ದೀರ್ಘಾವಧಿ ರಕ್ತಹೀನತೆ, ನೋವಿನ ಸಂದರ್ಭಗಳಲ್ಲಿ ಆಗಿರುವ ಮತ್ತು ಅಂಗಾಂಶ ಮತ್ತು ಅಂಗಕ್ಕೆ ಆಗಿರುವ ಹಾನಿಯ ಪರಿಣಾಮವಾಗಿ ಉಂಟಾಗಿರುವ ಅನೇಕ ಜಟಿಲತೆಗಳ ಲಕ್ಷಣಗಳನ್ನುಳ್ಳ ರೋಗ.

**5.** (ಈ ಮೇಲೆ ನಿರ್ದಿಷ್ಟಪಡಿಸಿರುವ ಒಂದಕ್ಕಿಂತ ಹೆಚ್ಚಿನ) ಬಹುವಿಧದ ಅಂಗವಿಕಲತೆಗಳು, ಇವುಗಳಲ್ಲಿ ಕಿವುಡು, ಕುರುಡು ಸೇರುತ್ತವೆ. ಎಂದರೆ ತೀವ್ರತರ ಸಂವಹನ ಸಮಸ್ಯೆ, ಬೆಳವಣಿಗೆಗೆ ಸಂಬಂಧಿಸಿದ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಉಂಟು ಮಾಡುತ್ತಿರುವ ಶ್ರವಣ ಮತ್ತು ದೃಷ್ಟಿದೋಷ ಇವೆರಡೂ ವ್ಯಕ್ತಿಯಲ್ಲಿ ಇರುವ ಸ್ಥಿತಿ.

**6.** ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಇತರೆ ಯಾವುದೇ ವರ್ಗದ ಅಂಗವಿಕಲತೆ.